ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 25 ಶನಿವಾರ 2023

ಸಂಪುಟ: 43 | ಸಂಚಿಕೆ: 334 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com

₹4

—ಚುನಾವಣೆ ಸಮೀಪಿಸುತ್ತಿರುವಂತೆ ರಾಜ್ಯ ಬಿಜೆಪಿ ಸರ್ಕಾರದ ಮೀಸಲಾತಿ ಮ್ಯಾಜಿಕ್—

ಒಕ್ಕಲಿಗರಿಗೆ ಶೇ.6, ವೀರಶೈವ ಲಿಂಗಾಯತರಿಗೆ ಶೇ.7ಕ್ಕೆ ಮೀಸಲಾತಿ ಹೆಚ್ಚಳ

ದಲಿತ ಸಮುದಾಯಕ್ಕೆ ಒಳಮೀಸಲಾತಿ

■ 2ಬಿನಲ್ಲಿದ್ದ ಧಾರ್ಮಿಕ ಅಲ್ಪಸಂಖ್ಯಾತರಿಗೆ ಮೀಸಲಾತಿ ರದ್ದು; ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ವರ್ಗಾವಣೆ ■ ಈ ಹಿಂದೆ 3ಎನಲ್ಲಿ ಶೇ.4ರಷ್ಟಿದ್ದ ಒಕ್ಕಲಿಗರಿಗೆ 2ಸಿಯಲ್ಲಿ ಶೇ.6ರಷ್ಟು; 3ಬಿನಲ್ಲಿ ಶೇ.5ರಷ್ಟಿದ್ದ ವೀರಶೈವ ಲಿಂಗಾಯತರ 2ಡಿ ಅಡಿ ತಂದು ಶೇ.7 ಮೀಸಲಾತಿ ಬಂಪರ್

ಬೆಂಗಳೂರು, ಮಾ. 24– ವಿಧಾನಸಭೆ ಚುನಾವಣೆ ಹೊಸ್ತಿಲಿನಲ್ಲಿ ರಾಜ್ಯ ಸರ್ಕಾರ ಮೀಸಲಾತಿ ಅಸ್ತ್ರ ಪ್ರಯೋಗಿಸಿ, ವಿವಿಧ ವರ್ಗಗಳ ಮತ ಸೆಳೆಯಲು ಕಾರ್ಯತಂತ್ರ ರೂಪಿಸಿದೆ. ಲಿಂಗಾಯತರು ಮತ್ತು ಒಕ್ಕಲಿಗರಿಗೆ ತಲಾ ಶೇ. 2ರಷ್ಟು ಮೀಸಲಾತಿ ಹೆಚ್ಚಳ ಮಾಡಲಾಗಿದೆ. ದಲಿತ ವರ್ಗವನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿ ದಶಕಗಳ ಬೇಡಿಕೆಯಾಗಿದ್ದ ಒಳ ಮೀಸಲಾತಿಯನ್ನು ನೀಡಲಾಗಿದೆ. ಹಿಂದುಳಿದ ವರ್ಗ '2ಬಿ'ಯಡಿ ಶೇ.4ರಷ್ಟು ಮೀಸಲಾತಿ ಪಡೆಯುತ್ತಿದ್ದ ಧಾರ್ಮಿಕ ಅಲ್ಪಸಂಖ್ಯಾತರನ್ನು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ (ಇಡಬ್ಲ್ಯೂಎಸ್) ವರ್ಗಾವಣೆ ಮಾಡಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದ್ದು, ಲಿಂಗಾಯತರು ಮತ್ತು ಒಕ್ಕಲಿಗರ ಮೀಸಲಾತಿ ಹೆಚ್ಚಳ ಬೇಡಿಕೆಯನ್ನು ಈಡೇರಿಸಲಾಗಿದೆ. ಈಗಾಗಲೇ ಒಕ್ಕಲಿಗರನ್ನು '2ಸಿ' ಮತ್ತು ಲಿಂಗಾಯತರನ್ನು '2ಡಿ' ಹೊಸ ವರ್ಗಗಳಿಗೆ ಸೇರಿಸಲಾಗಿತ್ತು ಆದರೆ, ಈ ವರ್ಗಗಳಿಗೆ ಮೀಸಲಾತಿ ಪ್ರಮಾಣ ಪ್ರಕಟಿಸಿರಲಿಲ್ಲ. ಆದರೆ, ಇಂದು ನಡೆದ ಸಂಪುಟ ಸಭೆಯಲ್ಲಿ ಈ ಹಿಂದೆ '3ಎ' ಪ್ರವರ್ಗದಡಿ ಶೇ.4ರಷ್ಟು ಮೀಸಲಾತಿ ಪಡೆಯುತ್ತಿದ್ದ ಒಕ್ಕಲಿಗರಿಗೆ ಇದೀಗ '2ಸಿ' ಪ್ರವರ್ಗದಡಿ ಶೇ. 6ಕ್ಕೆ ಮೀಸಲಾತಿ ಹೆಚ್ಚಳ ಮಾಡಲಾಗಿದೆ. ಅದೇ ರೀತಿ '3ಬಿ' ಪ್ರವರ್ಗದಡಿ ಈವರೆಗೆ ಶೇ. 5ರಷ್ಟು ಮೀಸಲಾತಿ ಪಡೆಯುತ್ತಿದ್ದ ಲಿಂಗಾಯತರಿಗೆ '2ಡಿ' ಪ್ರವರ್ಗದಡಿ ಶೇ.7ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದೆ.

'2ಬಿ' ಪ್ರವರ್ಗದಡಿ ಧಾರ್ಮಿಕ ಅಲ್ಪಸಂಖ್ಯಾತರು ಶೇ.4ರಷ್ಟು ಮೀಸಲಾತಿ ಪಡೆಯುತ್ತಿದ್ದರು. ಆದರೆ, ಈಗ '2ಬಿ' ಪ್ರವರ್ಗವನ್ನು ರದ್ದುಪಡಿಸಿ ಧಾರ್ಮಿಕ ಅಲ್ಪಸಂಖ್ಯಾತರು ಪಡೆಯುತ್ತಿದ್ದ ಶೇ. 4ರಷ್ಟು ಮೀಸಲಾತಿಯನ್ನು ಒಕ್ಕಲಿಗರು ಹಾಗೂ ಲಿಂಗಾಯತರಿಗೆ ತಲಾ ಶೇ.2 ರಷ್ಟು ಹಂಚಿಕೆ ಮಾಡಲಾಗಿದೆ. ಧಾರ್ಮಿಕ



ಅಲ್ಪಸಂಖ್ಯಾತರನ್ನು ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರ್ಪಡೆ ಮಾಡಲಾಗಿದೆ.

ಒಟ್ಟಾರೆ ಹಿಂದುಳಿದ ವರ್ಗದವರಿಗೆ ಶೇ.32ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದ್ದು, ಪ್ರವರ್ಗ 1ಕ್ಕೆ ಶೇ.4, ಪ್ರವರ್ಗ '2ಎ'ಗೆ ಶೇ.15, ಪ್ರವರ್ಗ '2ಸಿ'ಗೆ ಶೇ.6, ಪ್ರವರ್ಗ '2ಡಿ'ಗೆ ಶೇ.7ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದೆ. ▶ 8ನೇ ಪುಟಕ್ಕೆ

ಹೊಸ ಶೇಕಡಾವಾರು ಮೀಸಲಾತಿ ವಿವರ

ಪ್ರವರ್ಗ– 1	– ಶೇ.4
ಪ್ರವರ್ಗ– 2ಎ	– ಶೇ.15
ಪ್ರವರ್ಗ– 2ಸಿ	– ಶೇ.6
ಪ್ರವರ್ಗ– 2ಡಿ	– ಶೇ.7
ಎಸ್‌ಸಿ ಬಲ ಸಮುದಾಯ	– ಶೇ.5.5
ಎಸ್‌ಸಿ ಎಡ ಸಮುದಾಯ	– ಶೇ.6
ಬಂಜಾರ, ಭೋವಿ, ಕೊರಚ	– ಶೇ.4.5
ಇತರೆ ಅಲೆಮಾರಿ ಸಮುದಾಯ	– ಶೇ.1

ಚರ್ಚಿಸಿ ಇಂದು ನಿರ್ಧಾರ; ಬಸವ ಮೃತ್ಯುಂಜಯ ಸ್ವಾಮಿ



ಬೆಂಗಳೂರು, ಮಾ. 24– ಲಿಂಗಾಯತ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡಿ ಸಚಿವ ಸಂಪುಟ ಸಭೆ ನಿರ್ಧಾರ ಕೈಗೊಂಡಿರುವ ಬಗ್ಗೆ ಪ್ರತಿಕ್ರಿಯಿಸಿರುವ ಲಿಂಗಾಯತ ಪಂಚಮಸಾಲಿ ಸಮುದಾಯದ ಬಸವ ಮೃತ್ಯುಂಜಯ ಸ್ವಾಮೀಜಿಯವರು, ಈ ಕುರಿತು ಕಾನೂನು ತಜ್ಞರು ಮತ್ತು ಸಮುದಾಯದ ಮುಖಂಡರೊಂದಿಗೆ ಚರ್ಚಿಸಿ ನಾಳೆ (ಶನಿವಾರ) ಸುದ್ದಿಗೋಷ್ಠಿಯಲ್ಲಿ ತಮ್ಮ ನಿರ್ಧಾರ ಪ್ರಕಟಿಸುವುದಾಗಿಯೂ ಅಲ್ಲಿವರೆಗೂ ಯಾರೂ ವಿಜಯೋತ್ಸವ ಆಚರಿಸಬಾರದೆಂದು ತಿಳಿಸಿದ್ದಾರೆ. ಮೀಸಲಾತಿ ವಿಚಾರದಲ್ಲಿ ಕಳೆದ 2 ವರ್ಷದಿಂದ ಹೋರಾಟ ನಡೆಸುತ್ತಿರುವ ಶ್ರೀಗಳು, ನಮ್ಮ ಸಮುದಾಯವನ್ನು '2ಎ' ವರ್ಗಕ್ಕೆ ಸೇರಿಸಿ, ಶೇ.15ರಷ್ಟು ಮೀಸಲಾತಿ ಕೇಳಿದ್ದೆವು. ಆದರೆ, ಈಗ '2ಡಿ' ಅಡಿ ಶೇ. 7ರಷ್ಟು ಮೀಸಲಾತಿ ನೀಡಲಾಗಿದೆ. ಪ್ರಧಾನ ಮಂತ್ರಿಗಳ ಆದೇಶದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ನಮಗೆ ಮೀಸಲಾತಿ ನೀಡುವ ವಿಚಾರದಲ್ಲಿ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಇದರ ಬಗ್ಗೆ ಬಸನಗೌಡ ಪಾಟೀಲ್ ಯತ್ನಾಳ್ ಸೇರಿದಂತೆ ಸಮುದಾಯದ ಹಲವು ಮುಖಂಡರು ಮತ್ತು ಕಾನೂನು ತಜ್ಞರೊಂದಿಗೆ ಚರ್ಚೆ ಮಾಡಿ, ಹೋರಾಟ ಮುಂದುವರೆಸಬೇಕೋ ಅಥವಾ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಬೇಕೋ ಎಂಬುದನ್ನು ನಾಳೆ (ಮಾ.25)ಬಹಿರಂಗ ಪಡಿಸುತ್ತೇವೆ. ಆದ್ದರಿಂದ ಯಾರೂ ಅಂಧಾಭಿಮಾನಕ್ಕೆ ಒಳಪಟ್ಟು ವಿಜಯೋತ್ಸವ ಆಚರಿಸಬೇಡಿ ಎಂದು ಶ್ರೀಗಳು ತಿಳಿಸಿದ್ದಾರೆ.

ಮೈಸೂರು ವಿವಿಯಿಂದ 85.40 ಕೋಟಿಯ ಕೊರತೆ ಬಜೆಟ್

■ ಪುಟ–2

ನಾವು ಅಧಿಕಾರ ಹಿಡಿಯಲೇಬೇಕು...!

● ಮಾಜಿ ಸಿಎಂ ಯಡಿಯೂರಪ್ಪ ನಿವಾಸದಲ್ಲಿ ಬಿಜೆಪಿ 'ಚಾಣಕ್ಯ' ಅಮಿತ್ ಷಾ ಚುನಾವಣಾ ರಣತಂತ್ರ ● ಉಪಹಾರ ಸೇವನೆಯೊಂದಿಗೆ ರಾಜ್ಯ ಮುಖಂಡರೊಂದಿಗೆ ಗಹನ ಚರ್ಚೆ ● ಮತ್ತೊಂದೆಡೆ ಯಡಿಯೂರಪ್ಪ ಬಿಜೆಪಿ ಕಡೆಗಣಿಸಿಲ್ಲ ಸಂದೇಶ

ಬೆಂಗಳೂರು, ಮಾ.24(ಕೆಎಂಶಿ)– ಕರ್ನಾಟಕದಲ್ಲಿ ಬಿಜೆಪಿ ಬಹುಮತ ಗಳಿಸಿ ಸರ್ಕಾರ ರಚಿಸಲು ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯ ನಾಯಕರೊಟ್ಟಿಗೆ ಇಂದು ರಣತಂತ್ರ ರೂಪಿಸಿದ್ದಾರೆ.

ವಿಧಾನಸಭಾ ಚುನಾವಣೆಯ ಎಲ್ಲಾ ಪೂರ್ವ ಸಮೀಕ್ಷೆಗಳು ಅತಂತ್ರ ವಿಧಾನ ಸಭೆಯ ಬಗ್ಗೆ ವರದಿ ನೀಡಿರುವ ಬೆನ್ನಲ್ಲೇ ಅಮಿತ್ ಷಾ ಶತಾಯಗತಾಯ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲೇಬೇಕು ಎಂದು ತಾಕೀತು ಮಾಡಿದ್ದಾರೆ. ಎರಡು ದಿನಗಳ ರಾಜ್ಯ ಪ್ರವಾಸಕ್ಕೆ ತಡರಾತ್ರಿ ನಗರಕ್ಕೆ ಆಗಮಿಸಿದ ಷಾ ಇಂದು ಬೆಳಗ್ಗೆ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ನಿವಾಸಕ್ಕೆ ತೆರಳಿ ಉಪಹಾರ ಸೇವನೆ ಜೊತೆಗೆ ಸ್ಥಳೀಯ ನಾಯಕರೊಟ್ಟಿಗೆ ಚುನಾವಣಾ ಸಂಬಂಧ ಚರ್ಚೆ ನಡೆಸಿದರು.

ಚರ್ಚೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್ ಕುಮಾರ್ ಕಟೀಲ್, ಉಪಾಧ್ಯಕ್ಷ ಬಿ.ವೈ ವಿಜಯೇಂದ್ರ, ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಸಚಿವರಾದ ಗೋವಿಂದ ಕಾರಜೋಳ ಹಾಗೂ ಬಿ.ಶ್ರೀರಾಮುಲು ಉಪಸ್ಥಿತರಿದ್ದರು. ಯಡಿಯೂರಪ್ಪ ಅವರನ್ನು ಕಡೆಗಣಿಸಿಲ್ಲ. ಪಕ್ಷ ಅವರ ▶ 8ನೇ ಪುಟಕ್ಕೆ



ಬಿಜೆಪಿ ರಾಜಕೀಯ ಚಾಣಕ್ಯನ ಚಾಣಾಕ್ಷ ನಡೆ: ಬಿಎಸ್‌ವೈ ತಬ್ಬಿಬ್ಬು!


ಬೆಂಗಳೂರು, ಮಾ. 24 (ಕೆಎಂಶಿ)–ಬಿಜೆಪಿಯಲ್ಲಿ ರಾಜಕೀಯ ಚಾಣಕ್ಯ ಎಂದೇ ಬಿಂಬಿಸಿಕೊಂಡಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರ ಚಾಣಾಕ್ಷ ನಡೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪರನ್ನು ಅರೆಕ್ಷಣ ತಬ್ಬಿಬ್ಬಾಗಿಸಿತು. ರಾಜ್ಯ ಪ್ರವಾಸದಲ್ಲಿರುವ ಷಾ ಬೆಳಗ್ಗೆ ಯಡಿಯೂರಪ್ಪ ಅವರ ನಿವಾಸದಲ್ಲಿ ಉಪಹಾರ ಸೇವನೆಗೆ ಆಗಮಿಸಿದಾಗ ಒಂದು ಚಾಣಕ್ಯ ನಡೆ ಇಟ್ಟರು. ಮನೆಗೆ ಅತಿಥಿ ಬಂದ ಸಂದರ್ಭದಲ್ಲಿ ಯಡಿಯೂರಪ್ಪನವರು ಗೌರವಯುತವಾಗಿ ಷಾ ಅವರಿಗೆ ಹೂಗುಚ್ಛ ನೀಡಿ, ಬರಮಾಡಿಕೊಳ್ಳಲು ಮುಂದಾದರು. ತಕ್ಷಣ ಹೂಗುಚ್ಛ ಸ್ವೀಕರಿಸದ ಷಾ, ತಮ್ಮ ಪುತ್ರ ವಿಜಯೇಂದ್ರ ಅವರ ▶ 8ನೇ ಪುಟಕ್ಕೆ

ಕಂಟಕವಾಯ್ತು ಮಾನಹಾನಿ ಪ್ರಕರಣ

ಸಂಸದ ಸ್ಥಾನದಿಂದ ರಾಹುಲ್ ಗಾಂಧಿ ಅನರ್ಹ

ನವದೆಹಲಿ, ಮಾ.24–ಮಾನಹಾನಿ ಪ್ರಕರಣದಲ್ಲಿ ರಾಹುಲ್ ಗಾಂಧಿ ಅಪರಾಧಿ ಎಂದು ಪರಿಗಣಿಸಿ, ಎರಡು ವರ್ಷ ಜೈಲು ಶಿಕ್ಷೆಗೆ ಗುರಿಯಾದ ಒಂದೇ ದಿನದಲ್ಲಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿದೆ.

ಮೋದಿ ಸಮುದಾಯಕ್ಕೆ ಅವಮಾನಿಸಿದ ಪ್ರಕರಣದಲ್ಲಿ ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರಿಗೆ ಸೂರತ್ ನ್ಯಾಯಾಲಯ ಎರಡು ವರ್ಷಗಳ ಶಿಕ್ಷೆ ವಿಧಿಸಿ ಆದೇಶ ಹೊರಡಿಸಿತ್ತು. ಈ ಹಿನ್ನೆಲೆಯಲ್ಲಿ ಲೋಕಸಭಾ ಸದಸ್ಯ ಸ್ಥಾನದಿಂದ ರಾಹುಲ್ ಗಾಂಧಿ ಅವರನ್ನು ಅನರ್ಹಗೊಳಿಸಿ ಲೋಕಸಭಾ ಕಾರ್ಯದರ್ಶಿ ಉತ್ಪಲ್ ಕುಮಾರ್ ಆದೇಶ ಹೊರಡಿಸಿದ್ದಾರೆ. ಕಳೆದ ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕರ್ನಾಟಕದ ಕೋಲಾರದಲ್ಲಿ ನಡೆದ



ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಓರ್ವ ಕಳ್ಳ ಎಂದು ರಾಹುಲ್ ಗಾಂಧಿ ವಿವಾದಾತ್ಮಕ ಹೇಳಿಕೆ ನೀಡಿದ್ದರು. ನೀರವ್ ಮೋದಿ, ಲಲಿತ್ ಮೋದಿ, ನರೇಂದ್ರ ಮೋದಿ ಇವರೆಲ್ಲರ ಸರ್‌ನೇಮ್ ಒಂದೇ ಆಗಿದ್ದು, ಈ ಎಲ್ಲಾ ಕಳ್ಳರು ದೇಶವನ್ನು ಲೂಟಿ ಮಾಡಿದ್ದಾರೆ ಎಂದು ರಾಹುಲ್ ತಮ್ಮ ಭಾಷಣದಲ್ಲಿ ಹರಿಹಾಯ್ದಿದ್ದರು. ಈ ಹೇಳಿಕೆಯನ್ನು ಆಧರಿಸಿ ಬಿಜೆಪಿ ಶಾಸಕ ಮತ್ತು ಗುಜರಾತ್ ಮಾಜಿ ಸಚಿವ ಪೂರ್ಣೇಶ್ ಮೋದಿ ಅವರು ಕ್ರಿಮಿನಲ್ ಮಾನಹಾನಿ ದೂರು ದಾಖಲಿಸಿದ್ದರು.

ಅನರ್ಹರಾದ ಜನಪ್ರತಿನಿಧಿಗಳಿವರು: ಮೋದಿ ಉಪನಾಮ ಸಂಬಂಧ ಟೀಕೆ ಮಾಡಿ 2 ವರ್ಷಗಳ ಜೈಲು ಶಿಕ್ಷೆಗೆ ಗುರಿಯಾಗಿ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಲೋಕಸಭೆ ಸದಸ್ಯತ್ವದಿಂದ ಅನರ್ಹಗೊಂಡಿದ್ದಾರೆ. ಜನಪ್ರತಿನಿಧಿಗಳ ಕಾಯ್ದೆಯನ್ವಯ, ಜನಪ್ರತಿನಿಧಿಯೊಬ್ಬರು ಕನಿಷ್ಠ ಎರಡು ವರ್ಷ ಜೈಲು ಶಿಕ್ಷೆಗೆ ಗುರಿಯಾದರೆ, ತಕ್ಷಣದಿಂದಲೇ ಅವರ ಸದಸ್ಯತ್ವ ಅನರ್ಹಗೊಳ್ಳಲಿದೆ. ಹೀಗಾಗಿ ರಾಹುಲ್‌ಗಾಂಧಿಯವರನ್ನು ಲೋಕಸಭೆ ಸಚಿವಾಲಯವು ಅನರ್ಹ ಮಾಡಿ ಆದೇಶಿಸಿದೆ.

ಈ ಹಿಂದೆ ಕೂಡ ಕ್ರಿಮಿನಲ್ ಮೊಕದ್ದಮೆಯಲ್ಲಿ ಜೈಲು ಶಿಕ್ಷೆಗೆ ಒಳಗಾಗಿ ಹಲವು ಮಂದಿ ಸಂಸದರು ಹಾಗೂ ಶಾಸಕರು ▶ 8ನೇ ಪುಟಕ್ಕೆ

ನಮ್ಮ ಮನೆಯಲ್ಲಿ ಹೇಳಿದ್ದಾರೆ ವರುಣಾ ಕ್ಷೇತ್ರದಿಂದ ಸ್ಪರ್ಧಿಸ್ತೇನೆ...!

● ಕೊನೆಗೂ ಸ್ಪರ್ಧೆ ನೆಲೆ ಖಚಿತಪಡಿಸಿದ ಸಿದ್ದರಾಮಯ್ಯ ● ಇದೇ ವೇಳೆ ಎರಡು ಕ್ಷೇತ್ರದಲ್ಲಿ ಕಣಕ್ಕಿಳಿಯುವ ಸುಳಿವು



ಬೆಂಗಳೂರು, ಮಾ. 24 (ಕೆಎಂಶಿ)–ಕುಟುಂಬದವರ ಸಲಹೆಯಂತೆ ವರುಣಾ ವಿಧಾನಸಭಾ ಕ್ಷೇತ್ರದಿಂದಲೇ ಈ ಬಾರಿ ಚುನಾವಣಾ ಕಣಕ್ಕಿಳಿಯುವುದಾಗಿ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅಧಿಕೃತ ಘೋಷಣೆ ಮಾಡಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಮನೆಯಲ್ಲಿ ವರುಣಾದಿಂದ ಸ್ಪರ್ಧಿಸುವಂತೆ ಹೇಳಿದ್ದಾರೆ. ಈ ಕ್ಷೇತ್ರದಲ್ಲೇ ಟಿಕೆಟ್ ನೀಡುವಂತೆ ಕೇಳಿದ್ದೇನೆ. ಇನ್ನೊಂದು ಕ್ಷೇತ್ರದಲ್ಲಿ ಸ್ಪರ್ಧಿಸುವಂತೆಯೂ ನಮ್ಮ ಮನೆಯಲ್ಲಿ ಹೇಳಿದ್ದಾರೆ. ನನಗೆ 25 ಕ್ಷೇತ್ರಗಳಲ್ಲಿ ಸ್ಪರ್ಧಿಸುವಂತೆ ಆಹ್ವಾನವಿದೆ. ಎರಡನೇ ಕ್ಷೇತ್ರದಲ್ಲಿ ಸ್ಪರ್ಧಿಸುವ ವಿಚಾರ ವರಿಷ್ಠರಿಗೆ ಬಿಟ್ಟಿದ್ದು ಎಂದರು. ಸಿದ್ದರಾಮಯ್ಯ ಕೊನೆಗೂ ಅಧಿಕೃತ ಹೇಳಿಕೆ ನೀಡುವುದರ ಮೂಲಕ ಗೊಂದಲಗಳಿಗೆ ತೆರೆ ಎಳೆದಿದ್ದಾರೆ. ಅಷ್ಟೇ ಅಲ್ಲ ಪಕ್ಷದ ಮೊದಲ ಪಟ್ಟಿ ಬಿಡುಗಡೆಗೂ ▶ 8ನೇ ಪುಟಕ್ಕೆ

ಇಂದು, ನಾಳೆ ಕೆಆರ್ ನಗರದಲ್ಲಿ 12ನೇ ಅಖಿಲ ಕರ್ನಾಟಕ ಗಮಕ ಕಲಾ ಸಮ್ಮೇಳನ



ಮೈಸೂರು,ಮಾ.24(ಪಿಎಂ)– ಕರ್ನಾಟಕ ಗಮಕ ಕಲಾ ಪರಿಷತ್ತು ಬೆಂಗಳೂರು, ಮೈಸೂರು ಜಿಲ್ಲಾ ಘಟಕ ಮತ್ತು ಕೆಆರ್ ನಗರದ ವಿದ್ಯಾರಣ್ಯ ಪ್ರತಿಷ್ಠಾನದ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಕೆಆರ್ ನಗರದಲ್ಲಿ ಮಾ.25 ಮತ್ತು 26ರಂದು 12ನೇ ಅಖಿಲ ಕರ್ನಾಟಕ ಗಮಕ ಕಲಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ಪರಿಷತ್ತಿನ ಜಿಲ್ಲಾಧ್ಯಕ್ಷ ಕೃ.ಪಾ.ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಹಕಾರದೊಂದಿಗೆ ಕೆಆರ್ ನಗರದ ಚಂದ್ರಮೌಳಿ ರಸ್ತೆಯ ಬ್ರಾಹ್ಮಣ ಧರ್ಮ ಸಹಾಯ ಸಭಾದಲ್ಲಿ ಸಮ್ಮೇಳನ ನಡೆಯಲಿದೆ. ವ್ಯಾಖ್ಯಾನಕಾರ ಡಾ.ಎ.ವಿ.ಪ್ರಸನ್ನ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದು, ರಾಜ್ಯಾದ್ಯಂತ ಹಲವು ಜಿಲ್ಲೆಗಳಿಂದ ಗಮಕ ಕಲಾವಿದರು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ಮಾ.25ರಂದು ಬೆಳಗ್ಗೆ 9ರಿಂದ 10ರ ವರೆಗೆ ಗಮಕ ಕಲಾ ತಂಡಗಳೊಂದಿಗೆ ಕನ್ನಡ ಕಾವ್ಯ ರಥದಲ್ಲಿ ಸಮ್ಮೇಳನಾಧ್ಯಕ್ಷರ ಮೆರವಣಿಗೆ ನಡೆಯಲಿದೆ. ಬೆಳಗ್ಗೆ 10ಕ್ಕೆ ಸಮ್ಮೇಳನದ ಉದ್ಘಾಟನೆ ನಡೆಯಲಿದ್ದು, ಇದೇ ವೇಳೆ ಸ್ಮರಣ ಸಂಚಿಕೆ, ಎಡತೊರೆಯ ಗಮಕಿಗಳ ಕುರಿತ ಕೃತಿ ಬಿಡುಗಡೆಗೊಳ್ಳಲಿದೆ. ಕೆಆರ್ ನಗರದ ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಶ್ರೀ ಶಂಕರ ಭಾರತೀ ಸ್ವಾಮೀಜಿ ಸಾನಿಧ್ಯದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಶಾಸಕ ಸಾ.ರಾ. ಮಹೇಶ್, ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 2ಕ್ಕೆ ಚಿಂತನಗೋಷ್ಠಿ, ಮಧ್ಯಾಹ್ನ 3.30ಕ್ಕೆ ಕನ್ನಡದ ವಿವಿಧ ಛಂದೋಬಂಧಗಳ ಪದ್ಯ–ಗದ್ಯ ವಾಚನ, ಸಂಜೆ 5.30ಕ್ಕೆ ವಿಶೇಷ ಗಮಕ ಕಾರ್ಯಕ್ರಮ, ಸಂಜೆ 7ಕ್ಕೆ ಗಮಕ ನೃತ್ಯ ರೂಪಕ ನಡೆಯಲಿದೆ ಎಂದರು.

ಮಾ.26ರಂದು ಬೆಳಗ್ಗೆ 10ಕ್ಕೆ ಹಳೆಗನ್ನಡ ಕಾವ್ಯ ವಾಚನ–ವ್ಯಾಖ್ಯಾನ, ಬೆಳಗ್ಗೆ 11ಕ್ಕೆ ಗಮಕದಲ್ಲಿ ನವರಸಾಭಿವ್ಯಕ್ತಿ ಸೇರಿದಂತೆ ಹಲವು ಕಾರ್ಯಕ್ರಮಗಳು ನಡೆಯಲಿವೆ. ಸಂಜೆ 4ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಹಿರಿಯ ಗಮಕಿ ಕರ್ನಾಟಕ ಕಲಾಶ್ರೀ ಕೃ.ರಾಮಚಂದ್ರ, ಮೈಸೂರು ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಪಿ.ಶಿವರಾಜು, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಇದೇ ವೇಳೆ ಗಮಕ ಕಲೆಯ ಸಾಧಕರು ಹಾಗೂ ಪೋಷಕರನ್ನು ಸನ್ಮಾನಿಸಲಾಗುವುದು ಎಂದು ಹೇಳಿದರು. ಗಮಕ ಕಲಾ ಪರಿಷತ್ತಿನ ಕೇಂದ್ರ ಘಟಕದ ಕಾರ್ಯದರ್ಶಿ ಜಿ.ದಕ್ಷಿಣ ಮೂರ್ತಿ, ಮುಖಂಡ ಎ. ನಿರಂಜನ್ ಗೋಷ್ಠಿಯಲ್ಲಿದ್ದರು.

ಸಿದ್ದರಾಮಯ್ಯನವರ ಪ್ರಸ್ತಾಪಿಸಿದ ಅಡ್ಡಂಡ ಕಾರ್ಯಪ್ಪ ವಿರುದ್ಧ ಕುರುಬರ ಸಂಘದ ಅಧ್ಯಕ್ಷ ಆಕ್ರೋಶ



ಬಿ.ಸುಬ್ರಹ್ಮಣ್ಯ

ಮೈಸೂರು, ಮಾ.24(ಎಂಕೆ)– ಮಾಜಿ ಸಿಎಂ ಸಿದ್ದರಾಮಯ್ಯ ಅವರ ಬಗ್ಗೆ ಮಾತನಾಡುವ ನೈತಿಕತೆ ಅಡ್ಡಂಡ ಕಾರ್ಯಪ್ಪನಿಗಿಲ್ಲ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿಕಾರಿದ್ದಾರೆ.

'ಟಿಪ್ಪು ನಿಜಕನಸುಗಳು' ನಾಟಕ ಯಶಸ್ವಿ ಪ್ರದರ್ಶನಕ್ಕೆ ಸಿದ್ದರಾಮಯ್ಯ ಅವರೇ ಕಾರಣ ಎಂಬ ಅಡ್ಡಂಡ ಕಾರ್ಯಪ್ಪ ಅವರ ಹೇಳಿಕೆಗೆ ತಿರುಗೇಟು ನೀಡಿರುವ ಅವರು, ಅಡ್ಡಂಡ ಕಾರ್ಯಪ್ಪ ಪವಿತ್ರವಾದ ರಂಗಾಯಣದಲ್ಲಿದ್ದುಕೊಂಡು ಸಮಾಜದ ಸ್ವಾಸ್ಥ್ಯ ಹಾಳು ಮಾಡುವ ಕೆಲಸ ಮಾಡುತ್ತಿದ್ದಾರೆ. ಇವರ ವಿಕೃತ ಮನಸ್ಸಿನಿಂದ ಸಮಾಜದಲ್ಲಿ ಅಶಾಂತಿ ನಿರ್ಮಾಣ ವಾಗುತ್ತಿದೆ. ಸಾಮಾಜಿಕ ಜಾಗೃತಿ ಮೂಡಿಸಬೇಕಾದ ರಂಗಾಯಣದಲ್ಲಿ ಸಾಮಾಜಿಕ ಒಡಕು ಮೂಡಿಸುವಂತಹ ಪ್ರಯೋಗಗಳು ಆಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಒಂದು ಕಡೆ ಟಿಪ್ಪುವನ್ನು ಬೈಯ್ಯುತ್ತೀರಿ, ನಿಮ್ಮ ಕುಟುಂಬದವರೇ ಮತಾಂತರಗೊಂಡಿದ್ದರು ಎಂದು ಹೇಳುತ್ತೀರಿ. ಮುಸ್ಲಿಂ ಧರ್ಮಕ್ಕೆ ಮತಾಂತರವಾದ ನಿಮ್ಮ ಕುಟುಂಬದವರನ್ನು ಕೊಡವ ಧರ್ಮಕ್ಕೆ ಘರ್ ವಾಪ್ಸಿ ಮಾಡಿಸಲು ಏನು ಮಾಡಿದ್ದೀರಿ ಮನೆಯವರನ್ನೇ ಸರಿದಾರಿಗೆ ತರಲಾಗದ ನೀವು ಯಾರ ಉದ್ಧಾರಕ್ಕಾಗಿ ರಂಗಾಯಣಕ್ಕೆ ಬಂದಿದ್ದೀರಿ ಎಂದು ಪ್ರಶ್ನಿಸಿದ್ದಾರೆ.

ಕಾರ್ಯಪ್ಪನವರು ಈ ಹಿಂದೆ ಕೊಡಗಿನ ರಂಗಭೂಮಿಯಲ್ಲಿದ್ದಾಗಲೂ ಅಲ್ಲಿನ ಕಲಾವಿದರಿಗೆ ಎಷ್ಟು ಕಿರುಕುಳ ನೀಡಿದ್ದಾರೆ ಎಂಬುದನ್ನು ಅಲ್ಲಿನವರೇ ಹೇಳುತ್ತಿದ್ದಾರೆ. 'ಟಿಪ್ಪು ನಿಜಕನಸುಗಳು' ನಾಟಕದ 50ನೇ ಪ್ರದರ್ಶನದ ಸಂಭ್ರಮದ ಕಾರ್ಯಕ್ರಮದಲ್ಲಿ ಅಡ್ಡಂಡ ಕಾರ್ಯಪ್ಪ ಹಾಗೂ ರಂಗಾಯಣ ಉಪನಿರ್ದೇಶಕಿ ನಿರ್ಮಲ ಮಠಪತಿ ನಡುವೆ ಮಾತಿಗೆ ಮಾತು ನಡೆದಿದೆ.

ಓರ್ವ ಸರ್ಕಾರಿ ಅಧಿಕಾರಿಯ ಕರ್ತವ್ಯವೇನು ಎಂಬುದನ್ನರಿಯದ ಕಾರ್ಯಪ್ಪ, ರಂಗಾಯಣ ಸಿಬ್ಬಂದಿಗೆ ಕಿರುಕುಳ ನೀಡುತ್ತಿದ್ದಾರೆ. ಇವರ ವಿಕೃತ ಮನಸ್ಸಿನ ಚಿಂತನೆಗಳಿಂದ ಬೇಸತ್ತಿದ್ದೇವೆ ಎಂದು ಕೆಲ ಸಿಬ್ಬಂದಿ ಅಳಲು ತೋಡಿಕೊಳ್ಳುತ್ತಿದ್ದಾರೆ. ಅಡ್ಡಂಡ ಕಾರ್ಯಪ್ಪ ಅವರು ತಮ್ಮ ಸ್ವಾರ್ಥಕ್ಕಾಗಿ ರಂಗಾಯಣ ಬಳಸಿಕೊಳ್ಳುತ್ತಿದ್ದಾರೆ. ಮೊದಲು ರಂಗಾಯಣದ ಅಧಿಕಾರಿಗಳಿಗೆ ಗೌರವ ಕೊಡುವುದನ್ನು ಕಲಿತುಕೊಳ್ಳಿ. ಬಳಿಕ ಸಿದ್ದರಾಮಯ್ಯ ಮತ್ತು ಟಿಪ್ಪು ನಿಜ ಕನಸುಗಳನ್ನು ಬಗ್ಗೆ ಮಾತನಾಡುವಿರಂತೆ ಎಂದು ಎಚ್ಚರಿಸಿದ್ದಾರೆ.

ಚಾಮರಾಜ ಕ್ಷೇತ್ರದಲ್ಲಿ ಪಕ್ಷೇತರನಾಗಿ ಸ್ಪರ್ಧೆ




ಮೈಸೂರು, ಮಾ.24–ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದಿಂದ ವಿಧಾನಸಭಾ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಉದ್ಯಮಿ ಎಚ್.ಡಿ.ಸಿದ್ದರಾಜು ತಿಳಿಸಿದರು. ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ವಿಧಾನಸಭಾ ಚುನಾವಣೆಗೆ ಪಕ್ಷೇತರ ಅಭ್ಯರ್ಥಿಯಾಗಿ ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಯಲು ಇಚ್ಛಿಸಿದ್ದು, ಕ್ಷೇತ್ರದ ಅಭಿವೃದ್ಧಿಗಾಗಿ ಈ ಬಾರಿ ನನ್ನನು ಆಯ್ಕೆ ಮಾಡಿ ಎಂದು ಕೋರಿದರು. ಪ್ರಮುಖವಾಗಿ ಚಾಮರಾಜ ಕ್ಷೇತ್ರವನ್ನು ಸ್ಲಂಗಳನ್ನ ಮುಕ್ತ ಮಾಡುತ್ತೇನೆ.ಇಲ್ಲಿನ ನಿವಾಸಿಗಳಿಗೆ ವಸತಿ ಸೌಕರ್ಯ ಸೇರದಂತೆ ಕ್ಷೇತ್ರದ ಬಡ ಕುಟುಂಬದವರಿಗೆ ಸೂರು ಕಲ್ಪಿಸುವ ಆಲೋಚನೆ ಇದೆ. ಹಾಗೇ ಸರ್ಕಾರಿ ಕಚೇರಿಯಲ್ಲಿ ಕೆಲಸ ಮಾಡಿಕೊಡದೇ ಸತಾಯಿಸಿದಲ್ಲಿ ಅವರ ವಿರುದ್ಧ ಕ್ರಮ ತೆಗೆದುಕೊಂಡು ಜನರ ಸಮಸ್ಯೆಗೆ ಪರಿಹಾರ ಕಲ್ಪಿಸಲು ಪ್ರಯತ್ನಿಸುತ್ತೇನೆ. ನನ್ನ ಕಾರ್ಯ ವೈಖರಿಯಲ್ಲಿ ಭ್ರಷ್ಟಾಚಾರ ಕಂಡುಬಂದರೆ ಮುಲಾಜಿಲ್ಲದೇ ರಾಜೀನಾಮೆ ಕೊಡುತ್ತೇನೆ ಎಂದು ತಿಳಿಸಿದರು.

ಬೈಕ್ ಅಪಘಾತದಲ್ಲಿ ಯುವಕ ಸಾವು

ಮೈಸೂರು, ಮಾ.24– ಎರಡು ಬೈಕ್‌ಗಳು ತಾಗಿ ನೆಲಕ್ಕುರುಳಿದ ಪರಿಣಾಮ ಓರ್ವ ಯುವಕ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಚಾಮುಂಡಿಬೆಟ್ಟದ ರಸ್ತೆಯಲ್ಲಿ ಶುಕ್ರವಾರ ಸಂಭವಿಸಿದೆ. ಮೈಸೂರು ಸಮೀಪದ ಇಲವಾಲ ನಿವಾಸಿ ಸುಪ್ರೀತ್(21) ಅಪಘಾತದಲ್ಲಿ ಮೃತಪಟ್ಟವರು. ತನ್ನ ಕೆಟಿಎಂ ಬೈಕ್(ಕೆಎ–01–ಹೆಚ್‌ಹೆಚ್–1919)ನಲ್ಲಿ ಚಾಮುಂಡಿ ಬೆಟ್ಟದಿಂದ ವಾಪಸ್ಸಾಗುವಾಗ ವ್ಯೂ ಪಾಯಿಂಟ್ ಬಳಿ ಮತ್ತೊಂದು ಬೈಕ್‌ಗೆ ತಾಗಿ, ಬೈಕ್‌ಗಳು ಉರುಳಿ ಬಿದ್ದಿವೆ. ಈ ವೇಳೆ ಸುಪ್ರೀತ್ ಓಡಿಸುತ್ತಿದ್ದ ಬೈಕ್ ರಸ್ತೆ ತಡೆಗೋಡೆಗೆ ಗುದ್ದಿ ನಿಂತಿದ್ದು, ಪಕ್ಕದಲ್ಲೇ ಇದ್ದ ಸೂಚನಾ ಫಲಕಕ್ಕೆ ಆತನ ತಲೆ ಬಡಿದಿದೆ. ಪರಿಣಾಮ ತೀವ್ರ ರಕ್ತಸ್ರಾವದಿಂದ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮತ್ತೊಂದು ಬೈಕ್‌ನ ಸವಾರನಿಗೆ ಗಾಯವಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಸಿದ್ಧಾರ್ಥ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ನಿಧನ



ಚಿಕ್ಕಣ್ಣದಾಸ್

ಮೈಸೂರು, ಮಾ.24–ಮೈಸೂರಿನ ವಿನಾಯಕನಗರ(ಪಡುವಾರಹಳ್ಳಿ) ನಿವಾಸಿ, ರಂಗಾಯಣ ಕಲಾವಿದ ಹಾಗೂ ಹರಿಕಥಾ ವಿದ್ವಾಂಸರಾಗಿದ್ದ ಚಿಕ್ಕಣ್ಣದಾಸ್(68) ಅವರು ಹೃದಯಾಘಾತದಿಂದ ಶುಕ್ರವಾರ ರಾತ್ರಿ ನಿಧನರಾದರು. ಮೃತರು ಪತ್ನಿ ,ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶತಾಯುಷಿ ಲಕ್ಷ್ಮಮ್ಮ



ಶ್ರೀರಂಗಪಟ್ಟಣ, ಮಾ.24– ಇಲ್ಲಿನ ಬೆಳಗೊಳದ ದೊಡ್ಡ ಬೀದಿ ನಿವಾಸಿ ಪಟೇಲ್ ನರಸಿಂಹೇಗೌಡರ ಪತ್ನಿ ಶತಾಯುಷಿ ಲಕ್ಷ್ಮಮ್ಮ(101) ಶುಕ್ರವಾರ ನಿಧನರಾದರು. ಮೃತರು ಪುತ್ರ ಸೋಮಶೇಖರ್, ಸೊಸೆಯಂದಿರು, ಮೊಮ್ಮೊಕ್ಕಳು ಹಾಗೂ ಅಪಾರ ಬಂದು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಬೆಳಗ್ಗೆ 10.30ಕ್ಕೆ ಬಲಮುರಿಯಲ್ಲಿ ನೆರವೇರಲಿದೆ ಎಂದು ಕುಟುಂಬ ಮೂಲಗಳು ತಿಳಿಸಿವೆ.

ಮೈಸೂರು ವಿವಿಯಿಂದ 85.40 ಕೋಟಿಯ ಕೊರತೆ ಬಜೆಟ್



ಮೈಸೂರು, ಮಾ.24(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯದಲ್ಲಿ 2023–24ನೇ ಸಾಲಿಗೆ 85.40 ಕೊರತೆ ಬಜೆಟ್ ಮಂಡಿಸಲಾಗಿದೆ.

ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಶುಕ್ರವಾರ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಧ್ಯಕ್ಷತೆಯಲ್ಲಿ ನಡೆದ ವಿಶ್ವವಿದ್ಯಾನಿಲದ ಶಿಕ್ಷಣ ಮಂಡಳಿ 4ನೇ ಸಾಮಾನ್ಯ ಸಭೆಯಲ್ಲಿ ಹಣಕಾಸು ಅಧಿಕಾರಿ ಸಂಗೀತ ಗಜಾನನ ಭಟ್ ಅವರು ಪ್ರಸಕ್ತ ಸಾಲಿನ ಆಯವ್ಯಯವನ್ನು ಮಂಡಿಸಿದರು.

2023–24ನೇ ಸಾಲಿಗೆ ವಿಶ್ವವಿದ್ಯಾನಿಲಯದ ವಿವಿಧ ಮೂಲಗಳಿಂದ 347.16 ಕೋಟಿ ರೂ. ಅದಾಯ ಬರಬಹುದೆಂದು ನಿರೀಕ್ಷಿಸಲಾಗಿದ್ದು, ವಿವಿಧ ಬಾಬ್ತುಗಳಿಗೆ ಒಟ್ಟು 432.56 ಕೋಟಿ ರೂ. ವೆಚ್ಚವನ್ನು ಅಂದಾಜಿಸಿರುವುದರಿಂದ 85.40 ಕೋಟಿ ರೂ.ಗಳ ಕೊರತೆ ಬಜೆಟ್ ಅನ್ನು ಮಂಡಿಸಲಾಗಿದೆ. ಕೆಲವು ಸಲಹೆ, ಮಾರ್ಗದರ್ಶನಗಳೊಂದಿಗೆ ಶೈಕ್ಷಣಿಕ ಮಂಡಳಿ ಸದಸ್ಯರು ಅನುಮೋದನೆ ನೀಡಿದರು.

ಆಂತರಿಕ ಆದಾಯದ ಮೂಲಗಳು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಿಂದ ಪ್ರವೇಶ, ನೋಂದಣಿ, ಸಂಯೋಜನೆಯಿಂದ 3200 ಲಕ್ಷ ರೂ., ಸ್ಕೀಂ ಬಿ ಕೋರ್ಸ್‌ಗಳಿಂದ 300 ಲಕ್ಷ ರೂ., ಪರೀಕ್ಷಾ ಚಟುವಟಿಕೆಗಳಿಂದ 4000 ಲಕ್ಷ ರೂ., ವಿವಿಧ ಆಸ್ತಿ, ವಸತಿ ಗೃಹಗಳಿಂದ 300 ಲಕ್ಷ ರೂ. ಸೇರಿ ಒಟ್ಟು 8200 ಲಕ್ಷ ರೂ. ಆದಾಯ ನಿರೀಕ್ಷಿಸಲಾಗಿದೆ. ಪ್ರಾಯೋಜಿತ ಕಾರ್ಯಕ್ರಮಗಳು ಮತ್ತು ಸ್ವಯಂ ಆರ್ಥಿಕ ಆಧಾರಿತ ಯೋಜನೆಗಳ 20 ಖಾತೆಗಳಿಗೆ ಸೇರಿದಂತೆ ಒಟ್ಟು 347.16 ಕೋಟಿ ರೂ. ಆದಾಯವನ್ನು ಪ್ರಸಕ್ತ ಸಾಲಿಗೆ ನಿರೀಕ್ಷಿಸ ಲಾಗಿದೆ. ವೇತನ ಭತ್ಯೆ, ಪಿಂಚಣಿ, ವಿದ್ಯಾರ್ಥಿ ಕ್ಷೇಮಪಾಲನಾ ಕಾರ್ಯಕ್ರಮಗಳು, ಕ್ಯಾಂಪಸ್ ನಿರ್ವಹಣೆಗಾಗಿ 367.02 ಲಕ್ಷರೂ. ಹಾಗೂ ಪ್ರಾಯೋಜಿತ ಕಾರ್ಯ ಕ್ರಮಗಳಿಗೆ ಒಟ್ಟು 65.54 ಲಕ್ಷ ಸೇರಿದಂತೆ ಒಟ್ಟು 432.56 ಕೋಟಿ ರೂ.ಗಳು ವ್ಯಯವಾಗಲಿದೆ ಎಂದು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. 2023–24ನೇ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ಖಾಯಂ ಉದ್ಯೋಗಿಗಳಿಗೆ ವೇತನ ನೀಡಲು ಸರ್ಕಾರವು 121,08,00,000 ರೂ. ನಿಗದಿಗೊಳಿಸಿದೆ. 1761 ಪಿಂಚಣಿ 50 ಕೋಟಿ ರೂ. ಬಿಡುಗಡೆ ಮಾಡಿದ್ದು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ಸುಮಾರು 1841 ಪಿಂಚಣಿದಾರರಿದ್ದಾರೆ. 2023–24ರಲ್ಲಿ ಪಿಂಚಣಿದಾರರಿಗೆ 127.62,33,339 ರೂ. ಅಗತ್ಯವಿದೆ. ಸರ್ಕಾರ ಕೇವಲ 50 ಕೋಟಿ ರೂ. ಬಿಡುಗಡೆ ಮಾಡಿದೆ. ಉಳಿದ 77,62,33,339 ರೂ.ಗಳನ್ನು ಆಂತರಿಕ ಆದಾಯದಿಂದಲೇ ಭರಿಸಬೇಕಾಗಿದೆ ಎಂದು ಹಣಕಾಸು ಅಧಿಕಾರಿಗಳು ಆಯವ್ಯಯದಲ್ಲಿ ಪ್ರಸ್ತಾಪಿಸಿದ್ದಾರೆ. ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡಿದ್ದ ಶೈಕ್ಷಣಿಕ ಮಂಡಳಿ ಸದಸ್ಯರಾದ ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಆಹಾರ ಪೂರೈಸಲು 8 ಕೋಟಿ ರೂ. ಮೀಸಲಿರಿಸಲಾಗಿದೆ. ಆದರೆ ಗುಣಮಟ್ಟದ ಆಹಾರ ನೀಡುತ್ತಿಲ್ಲ ಎಂದು ವಿದ್ಯಾರ್ಥಿಗಳು ಆರೋಪಿಸುತ್ತಿದ್ದು, ಈ ಬಗ್ಗೆ ಹಲವು ಮಂದಿ ದೂರು ನೀಡಿದ್ದಾರೆ. ಸಂಬಂಧಪಟ್ಟವರ ವಿರುದ್ಧ ಕ್ರಮ ಕೈಗೊಂಡು ಗುಣಮಟ್ಟದ ಆಹಾರ ನೀಡಲು ವ್ಯವಸ್ಥೆ ಮಾಡಿ ಎಂದು ಸಲಹೆ ನೀಡಿದರು. ಅಂತಿಮವಾಗಿ ಸದಸ್ಯರು 2023–24ನೇ ಸಾಲಿನ ಬಜೆಟ್‌ಗೆ ಅನುಮೋದನೆ ನೀಡಿದ್ದು, ವಿಶ್ವವಿದ್ಯಾನಿಲಯದ ಶೈಕ್ಷಣಿಕ ಗುಣಮಟ್ಟ ಹಾಗೂ ಸಂಶೋಧನೆ ಹೆಚ್ಚಳಕ್ಕೆ ಒತ್ತು ನೀಡಿ ಅದರ ಘನತೆ ಹೆಚ್ಚಿಸುವಂತೆ ಸದಸ್ಯರು ಸಲಹೆ ನೀಡಿದರು. ಕುಲಸಚಿವೆ ವಿ.ಆರ್. ಶೈಲಜಾ ಹಾಗೂ ಪರೀಕ್ಷಾಂಗ ಕುಲಸಚಿವ ಪ್ರೊ. ಜ್ಞಾನಪ್ರಕಾಶ್ ಸಭೆಯಲ್ಲಿ ಉಪಸ್ಥಿತರಿದ್ದರು.

ವಾಸುಕಿ ವೈಭವ್ ಸಂಗೀತ ರಂಜನೆಯೊಂದಿಗೆ ಮೈಸೂರು ಅರಮನೆ ಆವರಣದ ಯುಗಾದಿ ಸಂಗೀತೋತ್ಸವಕ್ಕೆ ತೆರೆ




ಮೈಸೂರು, ಮಾ.24– ಮೈಸೂರು ಅರಮನೆ ಅಂಗಳದಲ್ಲಿ ಆಯೋಜಿಸಿದ್ದ ಮೂರು ದಿನಗಳ 'ಯುಗಾದಿ ಸಂಗೀತೋತ್ಸವ'ಕ್ಕೆ ಶುಕ್ರವಾರ ತೆರೆ ಬಿದ್ದಿತು.

ಕೊನೆಯ ದಿನವಾದ ಇಂದು ಸಂಗೀತ ನಿರ್ದೇಶಕ, ಗಾಯಕ ವಾಸುಕಿ ವೈಭವ್ ಸಂಗೀತ ಪ್ರೇಮಿಗಳನ್ನು ರಂಜಿಸಿದರು.

ಗಿರೀಶ್ ಕಾರ್ನಾಡ್ ರಚನೆ, ಬಿ.ವಿ. ಕಾರಂತರ ಸಂಗೀತ ಸಂಯೋಜನೆಯ 'ಗಜವಧನ ಹೇ ರಂಭ...' ರಂಗ ಗೀತೆ ಮೂಲಕ ತಮ್ಮ ಗಾಯನ ಯಾನ ಆರಂಭಿಸಿದ ಅವರು, 'ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ' ಚಿತ್ರದ 'ಅರರೇ ಅವಳ ನೋಟ...' ಗೀತೆ ಪ್ರಸ್ತುತಪಡಿಸಿದರು. ಈ ವೇಳೆ ನೆರೆದಿದ್ದ ಯುವ ಸಮೂಹ ಶಿಳ್ಳೆ, ಚಪ್ಪಾಳೆ, ಕೇಕೆಯೊಂದಿಗೆ ಕುಣಿದು ಕುಪ್ಪಳಿಸಿದರು. ನಟ ಶಂಕರ್‌ನಾಗ್ ನಟಿಸಿರುವ ಎಸ್.ಪಿ.ಸಾಂಗ್ಲಿಯಾನ ಚಿತದ್ರ 'ಗೀತಾಂಜಲಿ...', 'ಬಡವ ರಾಸ್ಕಲ್...', 'ಕರಿ ಮಾಯೆ...', 'ಇನ್ನೂ ಬೇಕಾಗಿದೆ...' ಹೀಗೆ ಹತ್ತಾರು ಜನಪ್ರಿಯ ಸಿನಿಮಾ ಹಾಗೂ ರಂಗಗೀತೆಗಳನ್ನು ಉಣಬಡಿಸುವ ಮೂಲಕ ಸಂಗೀತ ಲೋಕ ಸೃಷ್ಟಿಸಿದ್ದರು. ಗಾಯಕರಾದ ದರ್ಶನ್ ನಾರಾಯಣ್, ಭರತ್ ನಾಯಕ್, ಮಾಧುರಿ ಶೇಷಾದ್ರಿ ಅವರು ವಾಸುಕಿಗೆ ಸಾಥ್ ನೀಡಿದರು. ಈ ವೇಳೆ ವಾಸುಕಿ ವೈಭವ್ ಮಾತನಾಡಿ, ಮೈಸೂರು ಸಾಂಸ್ಕೃತಿಕ ನಗರಿ. ಮೈಸೂರು ಎಂದ ತಕ್ಷಣ ರಂಗಾಯಣ, ನಮ್ಮ ಗುರುಗಳಾದ ಬಿ.ವಿ.ಕಾರಂತರ ನೆನೆಪಾಗುತ್ತದೆ ಎಂದು ಸ್ಮರಿಸಿಕೊಂಡರು.

ಇದಕ್ಕೂ ಮುನ್ನ ಕರ್ನಾಟಕ ಪೊಲೀಸ್ ಬ್ಯಾಂಡ್ 'ಯುಗಾದಿ ಸಂಗೀತೋತ್ಸವ'ದ ಮೆರುಗು ಹೆಚ್ಚಿಸಿತು. ಇಂಗ್ಲಿಷ್ ಬ್ಯಾಂಡ್ ತಂಡ ಕಲಾವಿದರು ಬ್ಯಾಂಡ್ ಮಾಸ್ಟರ್ ಮಂಜುನಾಥ್ ಅವರ ಸಾರಥ್ಯದಲ್ಲಿ ಸ್ಲಂ ಡಾಗ್ ಮಿಲೇನಿರ್ ಚಿತ್ರದ 'ಜಯ್ ಹೋ...', 'ಮೇಡಿನ್ ಇಂಡಿಯಾ...' ಮತ್ತು 'ನೋಡಿ ಸ್ವಾಮಿ ನಾವಿರೋದು ಹೀಗೆ..' ಗೀತೆಗಳನ್ನು ನುಡಿಸಿ ಎಲ್ಲರ ಮನಸೂರೆಗೊಂದರು.



ಮೈಸೂರು ವಿವಿ ಕರಡು ಪಿಂಚಣಿ ಅಧಿನಿಯಮ ತಿದ್ದುಪಡಿಗೆ ಅಸ್ತು

ಮೈಸೂರು, ಮಾ.24(ಆರ್‌ಕೆ)– ಮೈಸೂರು ವಿಶ್ವವಿದ್ಯಾನಿಲಯದ ಕರಡು ಪಿಂಚಣಿ ಅಧಿನಿಯಮ–1979ಕ್ಕೆ ತಿದ್ದುಪಡಿ ಮಾಡಲು ಶೈಕ್ಷಣಿಕ ಮಂಡಳಿ ಸಮ್ಮತಿಸಿದೆ.

ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್ ಅಧ್ಯಕ್ಷತೆಯಲಿ ಇಂದು ನಡೆದ ಶೈಕ್ಷಣಿಕ ಮಂಡಳಿ ಸಾಮಾನ್ಯ ಸಭೆಯಲ್ಲಿ ಈ ಬಗ್ಗೆ ಸುದೀರ್ಘ ಚರ್ಚೆ ನಡೆಸಿದ ಬಳಿಕ ಕರಡು ಪರಿಷ್ಕರಣೆ ಪಿಂಚಣಿ ಅಧಿನಿಯಮಕ್ಕೆ ಸಮ್ಮತಿಸಿದ ಸದಸ್ಯರು, ಕುಲಾಧಿಪತಿಗಳ ಅನುಮೋದನೆ ಒಪ್ಪಿಸಲು ನಿರ್ಧರಿಸಲಾಯಿತು.

ಸರ್ಕಾರದ ನೂತನ ಪಿಂಚಣಿಯನ್ವಯ ಮೈಸೂರು ವಿಶ್ವವಿದ್ಯಾನಿಲಯವು 2006ರ ಏ.1ರ ನಂತರ ಸೇವೆಗೆ ಸೇರಿದ ಉದ್ಯೋಗಿಗಳಿಗೆ ನೂತನ ಪಿಂಚಣಿ ಯೋಜನೆ ಜಾರಿಗೊಳಿಸಲು ಕರಡು ಪಿಂಚಣಿ ಅಧಿನಿಯಮಕ್ಕೆ ಅಂಕಿತ ದೊರಕಿಸಿಕೊಡುವಂತೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆದರೆ ಸದರಿ ಕರಡು ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ಕಳುಹಿಸುವಂತೆ ಸರ್ಕಾರದ ಅಧೀನ ಕಾರ್ಯದರ್ಶಿಗಳು ಪತ್ರ ಬರೆದಿರುವುದರಿಂದ 2023ರ ಮಾ.2 ರಂದು ನಡೆದ ವಿಶ್ವವಿದ್ಯಾನಿಲಯದ ಕರಡು ಪರಿನಿಯಾವಳಿ ರಚನಾ ಸಮಿತಿಯು ನೂತನ ಪಿಂಚಣಿ ಯೋಜನೆಯ ಕರಡು ಅಧಿನಿಯಮವನ್ನು ರಚಿಸಲಾಗಿತ್ತು. ಅದಕ್ಕೆ ಇಂದು ನಡೆದ ಶೈಕ್ಷಣಿಕ ಮಂಡಳಿ ಸಭೆಯು ಸಮ್ಮತಿಸಿದೆ.


ಘಟಿಕೋತ್ಸವ ಡ್ರೆಸ್ ಕೋಡ್ ಬದಲು: ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಖಾದಿ ಮತ್ತು ಕೈಮಗ್ಗ ಬಟ್ಟೆಗಳಿಂದ ತಯಾರಿಸಿದ ಉಡುಪು ಧರಿಸುವುದನ್ನು ಪ್ರಸಕ್ತ ಸಾಲಿಗೆ ಬದಲಾಗಿ ಮುಂದಿನ ಘಟಿಕೋತ್ಸವದಿಂದ ಅನುಷ್ಠಾನಗೊಳಿಸಲು ಸಭೆಯು ಅಭಿಪ್ರಾಯಪಟ್ಟಿತು.

ಉಡುಪುಗಳನ್ನು ಬದಲಾವಣೆ ಮಾಡುವ ಸಂಬಂಧ ಅಧಿನಿಯಮ ಸಮಿತಿಯು ಹಾಲಿ ಅಧಿನಿಯಮ–14 ಅನ್ನು ಪರಿಷ್ಕರಣೆ ಮಾಡಿದೆಯಾದರೂ, ರಾಜ್ಯಪಾಲರಿಂದ ಅನುಮೋದನೆಗೊಳ್ಳಬೇಕಾಗಿರುವುದರಿಂದ ಮುಂದಿನ ವಾರ್ಷಿಕ ಘಟಿಕೋತ್ಸವದಿಂದ ಡ್ರೆಸ್ ಕೋಡ್ ಬದಲಿಸುವುದು ಸೂಕ್ತ ಎಂದು ಸಭೆಯು ಸಲಹೆ ನೀಡಿತು.

ಮಾನ್ಯತೆ ನಂತರ ಪ್ರವೇಶಾತಿ: ಬೆಂಗಳೂರಿನ ಭಾರತ್ ಇನ್‌ಸ್ಟಿಟ್ಯೂಟ್ ಆಫ್ ಸ್ಕೂಲಿಂಗ್ ಎಜುಕೇಷನ್‌ನಿಂದ ನಡೆಸುತ್ತಿರುವ ಮುಕ್ತ ಶಾಲೆ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಪದವಿ ಕಾಲೇಜುಗಳಲ್ಲಿ ಪ್ರವೇಶಾತಿ ನೀಡುವ ಬಗ್ಗೆ ಚರ್ಚಿಸಿದ ಸದಸ್ಯರು, ಸದರಿ ಸಂಸ್ಥೆಯು ಕೌನ್ಸಿಲ್ ಆಫ್ ಬೋರ್ಡ್ ಆಫ್ ಸ್ಕೂಲ್ ಎಜುಕೇಷನ್ ಇನ್ ಇಂಡಿಯಾ(COBSE)ದಿಂದ ಮಾನ್ಯತೆ ಪಡೆದ ನಂತರ ಪ್ರವೇಶಾತಿ ನೀಡಲು ನಿರ್ಧರಿಸಲಾಯಿತು.

ಶ್ರೀಮತಿ ಸುಜಾತಮಣಿ ಸಿಂದಘಟ್ಟ ನಾಗರಾಜ ಚಿನ್ನದ ಪದಕ ದತ್ತಿ ಸ್ಥಾಪನೆ, ಸ್ಕೂಲ್ ಆಫ್ ಇಂಜಿನಿಯರಿಂಗ್, ಶಿಕ್ಷಣ, ವಾಣಿಜ್ಯ, ಕಲಾ, ವಿಜ್ಞಾನ–ತಂತ್ರಜ್ಞಾನ, ನಿಕಾಯಗಳ ಶಿಫಾರಸ್ಸು, ನಿರ್ಣಯಗಳನ್ನು ಇಂದಿನ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದಿಸಿತು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

25.3.2023 ಶನಿವಾರ, ಮಳೆ ನಕ್ಷತ್ರ: ಉತ್ತರಭಾದ್ರ, 18.03.2023ರಿಂದ 30.03.2023
ಶ್ರೀ ಶೋಭಾಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಸಿರಿಧಾನ್ಯದ ಸಿರಿ, 6.40 ಹಾಡು ಹೇಳಿದ ಕಥೆ–ಲೇಖನ ಶ್ರೀನಿವಾಸ್ ಪ್ರಸಾದ್, 7.15 ಪ್ರಾಯೋಜಿತ ಕಾರ್ಯಕ್ರಮ ತ್ಯಾಜ್ಯ ನಿಭಾಯಿಸುವ ರೀತಿ–ಮನೆ ಬಾಗಿಲಿಗೆ ಸಮಗ್ರ ಮಾಹಿತಿ, 7.25 ಭಾವಗೀತೆಗಳು–ನಾಗಚಂದ್ರಿಕಾ ಭಟ್, 8.30 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ ಮಾಲಿಕೆಯಲ್ಲಿ ದೈತ್ಯ ಬರಹಗಾರ ಡಾ. ಪ್ರದೀಪ್ ಕುಮಾರ್ ಅವರೊಂದಿಗೆ ಸವಾದ. ನಡೆಸಿಕೊಡುವವರು– ದಿವಾಕರ ಹೆಗಡೆ, 10.00 ಸ್ಮಿಜಿ ಗುರುಪ್ರಸಾದ್ –ಸ್ಯಾಕ್ಸೋಫೋನ್ ವಾದನ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ–ಕೆ.ಆರ್. ಚದನ, 1.20 ಭಾವಗೀತೆ –ವಾಣಿ ಮರಡೂರ್, 3.30 ಮಕ್ಕಳ ಮಂಟಪ–ನಂದಗೋಕುಲ, ಪ್ರಸ್ತುತಿ– ಕೆ.ಬಿ. ಮೀನಾ, 4.00 ನಾಟಕ, 4.30 ನೆನಪಿನಂಗಳ–ತಮ್ಮ ಬದುಕು–ಬರಹ ಕುರಿತು ತ.ಸು.ಶ್ಯಾಮರಾಯರು ಮಾಡಿದ್ದ ಭಾಷಣ, 6.50 ಕೃಷಿರಂಗ–"ತೋರಣ ಹೂರಣ", 8.00 ಯುವವಾಣಿ, 9.15 ಒಡಹುಟ್ಟಿನ ನುಡಿಗಳು–ಮಾತನಾಡುತ್ತಾರೆ ಡಾ. ರೇಖಾ ಎಂ.ಪಿ., 9.30 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ–ಭಾಸ್ಕರ್ ನಾಥ್– ಷಹನಾಯ್ ವಾದನ

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್ :** 14ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30 ರಿಂದ ವಿವಿಧ ಗಣಪತಿ ಮತ್ತು ಶ್ರೀ ವಾಂಛಾಕಲ್ಪಲತಾ ಶ್ರೀ ವಿದ್ಯಾಗಣೇಶ ಪರ್ಯಾಯ ಹೋಮ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಲಿಖಿತ್ ಪ್ರಕಾಶನ:** ಡಾ. ಅವರೆಕಾಡು ವಿಜಯಕುಮಾರ್ ಅವರ 'ಮರೆಯದ ಮಾಣಿಕ್ಯ' ಕೃತಿಗಳ ಲೋಕಾರ್ಪಣೆ ಸಮಾರಂಭ ಕೃತಿ ಬಿಡುಗಡೆ: ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡ, ಮಾಜಿ ಸಚಿವ ಕೆ.ವೆಂಕಟೇಶ್, ಕರಾಮುವಿವಿ ಕುಲಸಚಿವ ಪ್ರೊ. ಕೆ.ಎಲ್.ಎನ್.ಮೂರ್ತಿ, ಮುಖ್ಯ ಅತಿಥಿಗಳು: ಮಾಜಿ ಸಚಿವ ಎ.ಮಂಜು, ಶ್ರೀಮತಿ ರೇಖಾ ಪುರುಷೋತ್ತಮ್ ಮತ್ತು ತ್ರಿಷತ್‌ಗೌಡ, ಲೇಖಕ ಅರ್ಜುನಹಳ್ಳಿ ಪ್ರಸನ್ನಕುಮಾರ್, ಪ್ರೊ. ಮೈಸೂರು ಕೃಷ್ಣಮೂರ್ತಿ, ಡಾ. ಟಿ.ಕೆ. ಕೆಂಪೇಗೌಡ, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ವೈ.ಡಿ. ರಾಜಣ್ಣ, ಮ.ನ. ಲತಾ ಮೋಹನ್, ಜಿ. ಪ್ರಕಾಶ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ವಸಂತ ವಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 10 ರಿಂದ.

■ **ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮತ್ತು ಎಂಎಂಸಿ ಅಲ್ಯೂಮ್ನಿ ಅಸೋಸಿಯೇಷನ್ :** ಶಸ್ತ್ರ ಚಿಕಿತ್ಸೆ ಪಿತಾಮಹ ಮಹರ್ಷಿ ಶುಶ್ರುತ ಪ್ರತಿಮೆ ಅನಾವರಣ ಕಾರ್ಯಕ್ರಮ, ಪ್ರತಿಮೆ ಅನಾವರಣ : ಮೈಸೂರು ವೈದ್ಯಕೀಯ ಕಾಲೇಜಿನ (1949 ಬ್ಯಾಚ್) 93 ವರ್ಷದ ಹಳೇ ವಿದ್ಯಾರ್ಥಿ ಮತ್ತು ನಿಮ್ಹಾನ್ಸ್‌ನ ನಿವೃತ್ತ ನಿರ್ದೇಶಕ ಡಾ. ಜಿ.ಎನ್. ನಾರಾಯಣ ರೆಡ್ಡಿ, ಗೌರವ ಅತಿಥಿಗಳು : ಬೆಳ್ಳೂರಿನ ಆದಿಚುಂಚನಗಿರಿ ವಿಶ್ವವಿದ್ಯಾನಿಲಯ ಉಪಕುಲಪತಿ ಡಾ. ಎಂ.ಎ. ಶೇಖರ್, ಪ್ರತಿಮೆ ದಾನಿಗಳಾದ ಡಾ. ಸಿ.ಜಿ. ನರಸಿಂಹನ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ನಿರ್ದೇಶಕರಾದ ಡಾ. ಕೆ.ಆರ್. ದಾಕ್ಷಾಯಿಣಿ ಮತ್ತು ಮಾ ಅಧ್ಯಕ್ಷ ಡಾ. ಎಸ್. ಚಂದ್ರಶೇಖರ್, ಸ್ಥಳ: ನೂತನವಾಗಿ ನಿರ್ಮಿಸಿರುವ ಅಕಾಡೆಮಿಕ್ ಕಾಂಪ್ಲೆಕ್ಸ್ (ಹಳೇ ಎಕ್ಸಿಬಿಷನ್ ಪ್ರದೇಶ), ಬೆಳಗ್ಗೆ 11ಕ್ಕೆ.

■ **ಎಸ್. ಪ್ರಕಾಶ್ ಪ್ರಿಯಾದರ್ಶನ್ ಸ್ನೇಹ ಬಳಗ :** ಉಚಿತ ಕುರಿ ಮರಿಗಳ ವಿತರಣಾ ಕಾರ್ಯಕ್ರಮ, ಸ್ಥಳ: ಆರಾಧ್ಯ ಮಹಾಸಭಾ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11.45ಕ್ಕೆ.

■ **ಮೈಸೂರು ಡಿಸ್ಟ್ರಿಕ್ಟ್ ಜನರಲ್ ಎಂಪ್ಲಾಯಿಸ್ ಯೂನಿಯನ್ :** ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಸ್ಥಳ: ಬುದ್ಧ ವಿಹಾರ, ಬಲ್ಲಾಳ್ ಸರ್ಕಲ್, ಕೃಷ್ಣಮೂರ್ತಿಪುರಂ, ಬೆಳಗ್ಗೆ 11.55ಕ್ಕೆ.

■ **ಹಿರಣ್ಮಯಿ ಪ್ರತಿಷ್ಠಾನ, ಕಾವೇರಿ ಬಳಗ :** ಜೀವನದಿ ಕಾವೇರಿ ಪ್ರಶಸ್ತಿ ಪ್ರದಾನ ಸಮಾರಂಭ, ಅಧ್ಯಕ್ಷತೆ: ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿ ಡಾ. ಎನ್. ಪ್ರಭಾ, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಪ್ರಶಸ್ತಿ ಪ್ರದಾನ : ಕಲಾವಿದ ಡಾ. ಜಮುನಾರಾಣಿ, ಸ್ಥಳ: ಅಕ್ಕನ ಬಳಗ, ತ್ಯಾಗರಾಜ ರಸ್ತೆ, ಸಂಜೆ 4ಕ್ಕೆ.

■ **ಎಟಿಎಂಇ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜು:** ಕಾಲೇಜು ವಾರ್ಷಿಕೋತ್ಸವ, ಪ್ರತಿಭಾ ಪ್ರದರ್ಶನ–ಟ್ಯಾಲೆಂಟ್ ಶೋ, ಫ್ಲಾಷ್‌ಮಾಬ್, ಕ್ಷಣಕ್ಕೊಂದು ನೃತ್ಯ, ಗಿಚ್ಚಿ ಗಿಲಿಗಿಲಿ ತಂಡದಿಂದ ಕಾಮಿಡಿ ಶೋ, ಡಿಜೆ ಸಂಗೀತ–ಸಿಟಿರಷ್–ಡಿಜೆ–ಅಶ್ವಿನ್ ಅವರಿಂದ, ಸ್ಥಳ: ಎಟಿಎಂಇ ಕಾಲೇಜು ಆವರಣ, ಸಂಜೆ 4.30 ರಿಂದ.

■ **ಸಾಮಾಜಿಕ ನ್ಯಾಯ ವೇದಿಕೆ, ಸಾಹಿತ್ಯ ಪ್ರಕಾಶನ :** ಅಜಕ್ಕಳ ಗಿರೀಶ ಭಟ್ ಅವರ ಕೃತಿ ಬಹುವಚನಕ್ಕೊಂದೇ ತತ್ತ್ವ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ : ಪದ್ಮಭೂಷಣ ಡಾ. ಎಸ್.ಎಲ್. ಭೈರಪ್ಪ, ಪುಸ್ತಕ ಕುರಿತು ಮಾತನಾಡುವವರು: ಚಿಂತಕ ರೋಹಿತ್ ಚಕ್ರವರ್ತಿ, ಉಪಸ್ಥಿತರು: ವಕೀಲ ಓ.ಶ್ಯಾಂ ಭಟ್, ಡಾ. ಎಸ್. ಮುರಳಿ, ಅಜಕ್ಕಳ ಗಿರೀಶ್ ಭಟ್, ಸ್ಥಳ: ಶ್ರೀ ಗೋಪಾಲಸ್ವಾಮಿ ವಿದ್ಯಾಸಂಸ್ಥೆ ಸಭಾಂಗಣ, ಸಂಜೆ 5ಕ್ಕೆ.

■ **ಗಣಪತಿ ಸೇವಾ ಮಂಡಳಿ ಟ್ರಸ್ಟ್ :** ಶ್ರೀ ರಾಮನವಮಿ ಕಾರ್ಯಕ್ರಮಗಳು, ಸಂಜೆ 6 ರಿಂದ ಕು. ಸಿಂಚನ ಅವರಿಂದ ದೇವರನಾಮಗಳು, ಸಂಜೆ 6.30 ರಿಂದ ನಟೇಶ್ ಅವರಿಂದ ಮಂಕುತಿಮ್ಮನ ಕಗ್ಗ ಕುರಿತು ಪ್ರವಚನ, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ ಐ ಬ್ಲಾಕ್, ರಾಮಕೃಷ್ಣನಗರ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಚಾರಿಟೆಬಲ್ ವಿಶ್ವಸ್ಥ ಮಂಡಳಿ :** ಶ್ರೀರಾಮೋತ್ಸವದ ಅಂಗವಾಗಿ ಸಂಗೀತ ಕಛೇರಿ, ಸಾಂಸ್ಕೃತಿಕ ಕಾರ್ಯಕ್ರಮ, ಶ್ರೀಮತಿ ಕೃಪಾ, ಶ್ಯಾಮಲ, ವಿಜಯ ಅವರಿಂದ ಸಂತರು ಕಂಡ ರಾಮ, ಹನುಮ–ಹಾಡುಗಾರಿಕೆ, ಸ್ಥಳ: ಸಮಾಜದ ಆವರಣ, ಸಂಜೆ 6ಕ್ಕೆ.

■ **ಜೆಎಸ್‌ಎಸ್ ಮಹಾವಿದ್ಯಾಪೀಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** ಶಿವಾನುಭವ ದಾಸೋಹ ಉಪನ್ಯಾಸ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪ್ರಾಧ್ಯಾಪಕರಾದ ಡಾ. ಎಚ್.ಎಂ. ಕಲಾಶ್ರೀ ಅವರಿಂದ ಸಮಾನತೆಯ ಹರಿಕಾರ ದೇವರ ದಾಸಿಮಯ್ಯ ಕುರಿತು ಉಪನ್ಯಾಸ, ಅಧ್ಯಕ್ಷತೆ: ರಂಗಭೂಮಿ ಕಲಾವಿದ ಹೆಚ್.ವಿಶ್ವನಾಥ್, ಸ್ಥಳ: 263, 2ನೇ ಹಂತ, ಸರ್ದಾರ್ ವಲ್ಲಭಬಾಯಿ ಪಟೇಲ್ ನಗರ, ಸಂಜೆ 6ಕ್ಕೆ

■ **ಶ್ರೀ ಕಾಶೀಮಠದ ಶ್ರೀರಾಮಮಂದಿರ:** ವಿಶೇಷ ಉತ್ಸವಗಳು, ಶ್ರೀ ಕಾಶೀಮಠ ಶ್ರೀ ರಾಮಮಂದಿರ ಮಹಿಳಾ ಭಜನಾ ಮಂಡಳಿ ಅವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ, ಶ್ರೀರಾಮಪೇಟೆ, ಸಂಜೆ 6.15ರಿಂದ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟೆಬಲ್ ಟ್ರಸ್ಟ್, ಮೈಸೂರು ಉತ್ತರ :** ಶ್ರೀ ರಾಮನವಮಿ ಸಂಗೀತೋತ್ಸವ, ವಿದುಷಿ ಕವಿತ ಮತ್ತು ವಿದುಷಿ ತ್ರಿವೇಣಿ (ಸರಳಾಯ ಸಹೋದರಿಯರು) ಅವರಿಂದ ದ್ವಂದ್ವ ಗಾಯನ, ವಿದುಷಿ ನಳಿನಾ ಮೋಹನ್–ಪಿಟೀಲು, ವಿದ್ವಾನ್ ಸಿ. ಚೆಲುವರಾಜು–ಮೃದಂಗ, ವಿದ್ವಾನ್ ಎನ್. ಗುರುಮೂರ್ತಿ –ಘಟ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಸಂಜೆ 6.15 ರಿಂದ.

■ **ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ :** ಮೈಸೂರು ರಂಗ ಹಬ್ಬ, ಜನಮನ ತಂಡದಿಂದ ಸಂಬಂಜ ಅನ್ನೋದು ದೊಡ್ಡದು ಕನಾ ನಾಟಕ ಪ್ರದರ್ಶನ, ಮೂಲಕಥೆ: ದೇವನೂರು ಮಹಾದೇವ, ರಂಗಪಠ್ಯ–ಡಾ.ರಾಜಪ್ಪ ದಳವಾಯಿ, ನಿರ್ದೇಶನ: ಹೆಚ್. ಜನಾರ್ಧನ್ (ಜನ್ನಿ), ಸ್ಥಳ: ಕಿರು ರಂಗಮಂದಿರ, ಸಂಜೆ 6.30ಕ್ಕೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷೀದಾರರಾದ ಬೆಂಗಳೂರು ನಗರ– 560037, ದೊಡ್ಡಣೆಕುಂದಿ, ಟೋಟಲ್ ಮಾಲ್‌ನ ಹಿಂಭಾಗ, ಔಟರ್‌ರಿಂಗ್ ರಸ್ತೆ, ಆಕ್ಮೆ ಬಲೆಟ್, ನಂ. ಈ – 203ರಲ್ಲಿ ವಾಸವಾಗಿರುವ ಶ್ರೀ ಆರ್.ಶ್ರೀನಿವಾಸ್‌ರವರ ಧರ್ಮ ಪತ್ನಿಯಾದ ಶ್ರೀಮತಿ ವಿ.ಸೌಮ್ಯ ಲಕ್ಷ್ಮಿರವರು, ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ರಂಗಸಮುದ್ರ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಗಂಗಾಧರ್ ರವರ ಮಗನಾದ ಶ್ರೀ ಜಿ. ಆನಂದ ರವರಿಂದ ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯುತ್ತಿದ್ದು, ಇದರ ಬಗ್ಗೆ ಸಾರ್ವಜನಿಕರಲ್ಲಿ, ಸಂಬಂಧಿಕರಲ್ಲಿ, ಏನಾದರೂ ತಂಟೆತಕರಾರುಗಳಿದ್ದಲ್ಲಿ ಈ ಪ್ರಕಟಣೆಯ 07 ದಿನಗಳಒಳಗಾಗಿ ನಮಗಾಗಲ್ಲಿ ನಮ್ಮ ಕಕ್ಷೀದಾರರಿಗಾಗಲಿ ತಿಳಿಸತಕ್ಕದ್ದು ಇಲ್ಲವಾದ ಪಕ್ಷದಲ್ಲಿ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ಯಾವುದೇ ತಕರಾರುಗಳಿಲ್ಲವೆಂದು ತೀರ್ಮಾನಿಸಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಐಟಂ ನಂ.1, ಮೈಸೂರು ಜಿಲ್ಲೆ. ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ರಂಗಸಮುದ್ರ ಗ್ರಾಮದ ಸರ್ವೆ ನಂಬರ್ 55/5, (ಹಳೇ ಸಂ. 55/1ಬಿ) ರಲ್ಲಿನ ವಿಸ್ತೀರ್ಣ 0.26 ಗುಂಟೆ (ಇಪ್ಪತ್ತಾರು ಗುಂಟೆ) ಖುಷ್ಕಿ ಜಮೀನಿನ ಸ್ವತ್ತಿಗೆ ಚೆಕ್ಕುಬಂದಿ.

ಪೂರ್ವಕ್ಕೆ – ಮಡುವೆ ಮತ್ತು ಮರಿಸ್ವಾಮಿ ರವರ ಜಮೀನು, ಪಶ್ಚಿಮಕ್ಕೆ : ರಸ್ತೆ ಮತ್ತು ಕಾಲುವೆ, ಉತ್ತರಕ್ಕೆ : ಕಾಲುವೆ, ದಕ್ಷಿಣಕ್ಕೆ : ಗಿರೀಶರವರ ಜಮೀನು,

ಐಟಂ ನಂ. 2, ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ರಂಗಸಮುದ್ರ ಗ್ರಾಮದ ಸರ್ವೆ ನಂಬರ್ 55/8, (ಹಳೇ ಸರ್ವೆ ನಂಬರ್ 55/2)ರಲ್ಲಿನ ವಿಸ್ತೀರ್ಣ 1.00 ಎಕರೆ (ಒಂದು ಎಕರೆ) ಖುಷ್ಕಿ ಜಮೀನಿನ ಸ್ವತ್ತಿಗೆ ಚೆಕ್ಕುಬಂದಿ.

ಪೂರ್ವಕ್ಕೆ : ಗಿರೀಶ ರವರ ಜಮೀನು, ಪಶ್ಚಿಮಕ್ಕೆ : ಗೌರಮ್ಮ ರವರ ಹಿಂದೆ ಭೋಗ್ಯವಾಗಿರುವ ಜಮೀನು, ಉತ್ತರಕ್ಕೆ : ನಾಲಾ ಏರಿ ಮತ್ತು 26 ಗುಂಟೆ ಆನಂದ. ಈ ರವರ ಜಮೀನು, ದಕ್ಷಿಣಕ್ಕೆ : ರಸ್ತೆ.

ಕಕ್ಷಿದಾರರು ಪರ ವಕೀಲರು
ಸಹಿ/– **ಡಿ.ಜಿ.ಯಶವಂತ ಗುರು**, ಬಿ.ಎ., ಎಲ್.ಎಲ್.ಬಿ.,
ವಕೀಲರು, ಕೆ.ಎ.ಆರ್. 1782/11
ನಂ. 283/1, ಉಪನೋಂದಣಾಧಿಕಾರಿಗಳ ಕಛೇರಿ
ಪಶ್ಚಿಮ ಕಟ್ಟಡ, ವಿಜಯನಗರ 2ನೇ ಹಂತ,
ಮೈಸೂರು–570017. ಮೊಬೈಲ್ ನಂ. 8123068123

AFFIDAVIT

I, K.Anil kumar, S/o Kanmal aged about 42 years, Residing at 1478, Shivarampet, Devaraja Mohalla, Mysuru, here by declare that my son's name is changed MAYANK to MAYANK JAIN, Vide Sworn affidavit made before IX Addl. Civil judge and JMFC Mysuru Dated 07.11.2022

Sd/- Anil Kumar

ನಕ್ಕರೆ ಅದೇ ಸ್ವರ್ಗ

ಹೆಂಡತಿ : (ಗಂಡನ ಸಮಾಧಿ ಬಳಿ ಬಿಕ್ಕಿ ಬಿಕ್ಕಿ ಅಳುತ್ತಾ) ರೀ ನಿಮ್ಮ ಮಗಳು ನೆಕ್ಲೆಸ್ ಕೇಳ್ತಿದ್ದಾಳೆ. ಎಲ್ಲಿಂದ ತಂದು ಕೊಡಲಿ. ನಿಮ್ಮ ಮಗ ಕಾರ್ ಕೇಳ್ತಿದ್ದಾನೆ, ಎಲ್ಲಿಂದ ತಂದು ಕೊಡಲಿ, ನಿಮ್ಮ ಎರಡನೆ ಮಗ ಬೈಕ್ ಕೇಳ್ತಿದ್ದಾನೆ. ಹೇಗೆ ಕೊಡಿಸಲಿ... ನನಗೂ ಒಂದು ಡೈಮಂಡ್ ನೆಕ್ಲೆಸ್ ಬೇಕು, ನಾನೇನ್ ಮಾಡ್ಲಿ...

ಗಂಡ : (ಸಮಾಧಿ ಒಳಗಿನಿಂದ) ಲೇ ನಾನು ಇರೋದು ಸಮಾಧಿಯಲ್ಲಿ ಸೌದಿಯಲ್ಲಿ ಅಲ್ಲ ಕಣೆ...

ಮೈಸೂರು ಮಿತ್ರ

ಶನಿವಾರ, 25 ಮಾರ್ಚ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಧೈರ್ಯದ ಸಹವಾಸ ಕಷ್ಟ. ಅದರ ಫಲ ಮಧುರ –ರೊಸೊ


ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಳಿಯುವುದು ಕಾಯ, ಉಳಿಯುವುದು ಕೀರ್ತಿ

ನಿಮ್ಮ ಪತ್ರಗಳು

ಕುಕ್ಕರಹಳ್ಳಿ ಕೆರೆಯ ಸ್ವಚ್ಛತೆ ಕಾಪಾಡಿ...!

ಮಾನ್ಯರೆ,

ಮೈಸೂರು ವಿಶ್ವವಿದ್ಯಾಲಯಕ್ಕೆ ಸೇರಿರುವ ಕುಕ್ಕರಹಳ್ಳಿ ಕೆರೆಗೆ ಯುಗ–ಯುಗಗಳಿಂದ ವಾಯು ವಿಹಾರಕ್ಕೆಂದು ದೇಶ–ವಿದೇಶಗಳಿಂದ ದಿನನಿತ್ಯ ಬೆಳಗ್ಗೆ–ಸಂಜೆ ತಪ್ಪದೇ ಸಾವಿರಾರು ಸಂಖ್ಯೆಯಲ್ಲಿ ವಾಯು ವಿಹಾರಿಗಳು, ಸಾಹಿತಿಗಳು,



ಸರ್ಕಾರಿ ಅಧಿಕಾರಿಗಳು, ವೃದ್ಧರು, ಹಿರಿಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ವಿದೇಶಿಯರು ಹಾಗೂ ಮತ್ತಿತರರು ಬರುತ್ತಾರೆ. ಸುಂದರವಾದ ಪರಿಸರದ ಜೊತೆಗೆ ವ್ಯಾಯಾಮ, ಧ್ಯಾನ, ಓಟ, ಆಟವನ್ನು ಆಡಿ ಆರೋಗ್ಯ ಕಾಪಾಡಿಕೊಳ್ಳಲು ಬರುವಾಗ ಕೆಲವು ಸಾರ್ವಜನಿಕರು ತಿಂಡಿ–ತಿನಿಸುಗಳನ್ನು ತಂದು ವಿಹಾರ ಮಾಡುವಾಗ ಅವೆಲ್ಲವನ್ನೂ ಖಾಲಿ ಮಾಡಿ ಪ್ಲಾಸ್ಟಿಕ್ ಕವರ್ ಮತ್ತು ಇತರೆ ವಸ್ತುಗಳನ್ನು ಕೆರೆಗೆ ಎಸೆಯುತ್ತಾರೆ. ನೀರಿನಲ್ಲಿ ಬಾತುಕೋಳಿಗೆ ಹಾಗೂ ಮತ್ತಿತರ ಪಕ್ಷಿಗೆ ಕಲ್ಲು ಎಸೆಯುವುದು ಮಾಡುತ್ತಾರೆ. ದಯವಿಟ್ಟು ಕೆರೆಯೊಳಗಿರುವ ಅನೇಕ ಜೀವಿಗಳಿಗೆ ಇದರಿಂದ ತೊಂದರೆಯಾಗುತ್ತಿದೆ. ಕೆರೆಗೆ ನಾಲ್ಕು ಮುಖ್ಯ ಬಾಗಿಲುಗಳಿದ್ದು, ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ವತಿಯಿಂದ ಕೆಲವು ನಿಯಮಗಳನ್ನು ಕುಲಪತಿಗಳು ಹಾಗೂ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಜಾರಿಗೆ ತಂದು ಮುಖ್ಯದ್ವಾರಗಳಲ್ಲಿ ಅಳವಡಿಸಿ ವಾಯು ವಿಹಾರ ಮಾಡಲು ಅವಕಾಶ ಕಲ್ಪಿಸಿ ಕೆರೆಯಲ್ಲಿ ಪ್ರಾಣಿ ಮತ್ತು ಪಕ್ಷಿ ಸಂಕುಲಕ್ಕೆ ರಕ್ಷಣೆ ನೀಡಬೇಕು. ಇದು ವಿಶ್ವವಿದ್ಯಾನಿಲಯದ ಪ್ರತಿಯೊಬ್ಬರ ಕರ್ತವ್ಯವೆಂದು ಪಾಲಿಸಬೇಕು ಹಾಗೂ ಮೈಸೂರಿನ ಜನತೆಯು ಸಹ ಸಹಕರಿಸಿ ಮೈಸೂರಿನ ಪರಿಸರಕ್ಕೆ ಮತ್ತು ವಾಯು ವಿಹಾರಕ್ಕೆ ಹೆಸರುವಾಸಿಯಾಗಿರುವ ಕುಕ್ಕರಹಳ್ಳಿ ಕೆರೆಯನ್ನು ಸಂರಕ್ಷಣೆ ಮಾಡಬೇಕು.

–ನಾಗೇಶ್, ಪರಿಸರ ಪ್ರೇಮಿ, ಮಾನಸಗಂಗೋತ್ರಿ

'ಪದ್ಮ ವಿಭೂಷಣ' ಎಸ್.ಎಂ.ಕೃಷ್ಣ ಕನ್ನಡಿಗರ ಕಣ್ಮಣಿ

ಮಾನ್ಯರೆ,

ಮುದ್ದಾದ ಊರು ಮದ್ದೂರಿನ ಸೌಜನ್ಯದ ಸಾಕಾರಮೂರ್ತಿ, ಮಿತ ಭಾಷಿಯಾದ,



ದೂರದೃಷ್ಟಿಯ ವ್ಯಕ್ತಿತ್ವವುಳ್ಳ ಸೋಮನಹಳ್ಳಿ ಮಲ್ಲಯ್ಯ ಕೃಷ್ಣ ಅವರು ರಾಷ್ಟ್ರದ ಎರಡನೇ ಅತ್ಯುತ್ತಮ ಗೌರವದ ಪದ್ಮ ವಿಭೂಷಣ ಪ್ರಶಸ್ತಿಗೆ ಪುರಸ್ಕೃತರಾಗಿರುವುದು ಕನ್ನಡಿಗರು ಹೆಮ್ಮೆ ಪಡುವ ಸಂಗತಿ.

ಕೃಷ್ಣ ಅವರು ಮುಖ್ಯಮಂತ್ರಿಯಾಗಿ ಬೆಂಗಳೂರನ್ನು ಸಿಲಿಕಾನ್ ಸಿಟಿಯನ್ನಾಗಿ ಮಾಡಿ ಸಿಲಿಕಾನ್ ವ್ಯಾಲಿ ಎಂದು ಹೆಸರುಗಳಿಸಲು ಕಾರಣರಾಗಿ ಇಡೀ ನಭೋ ಮಂಡಲವೇ ಬೆಂಗಳೂರಿನತ್ತ ನೋಡುವಂತೆ ಮಾಡಿದ ರೂವಾರಿ. ಅವರ ಯೋಜನೆಗಳಾದ ಸ್ತ್ರೀ ಶಕ್ತಿ ಸಂಘ, ಮಕ್ಕಳಿಗೆ ಅಕ್ಷರ ದಾಸೋಹ, ರೈತರಿಗೆ ಪಹಣಿ ಪತ್ರ ನೀಡುವ ಯೋಜನೆ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ಯಶಸ್ವಿನಿ ಯಂತಹ ಅತ್ಯುತ್ತಮ ಯೋಜನೆಗಳು ಬಹಳ ಯಶಸ್ವಿಯಾಗಿ ಇವತ್ತಿಗೂ ಜನಮಾನಸದಲ್ಲಿ ಪ್ರಜ್ವಲಿಸುತ್ತಿವೆ.

ಡಾ. ರಾಜಕುಮಾರ್ ಅವರನ್ನು ವೀರಪ್ಪನ್‌ನಿಂದ ಬಿಡುಗಡೆಗೊಳಿಸಲು ಹಾಗೂ ಕಾವೇರಿ ನದಿ ನೀರಿನ ನಿರ್ವಹಣೆಗೆ ಪಟ್ಟ ಪರಿಶ್ರಮ ಮರೆಯುವಂತಿಲ್ಲ. ಮನಮೋಹನ್ ಸಿಂಗ್ ಅವರ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿ ದ್ವಿಪಕ್ಷೀಯ ಸಂಬಂಧ, ರಾಜತಾಂತ್ರಿಕ ಬಾಂಧವ್ಯವನ್ನು ಬೆಸೆಯಲು ಕಾರಣರಾದ ರೀತಿ ಹಾಗೂ ಪಾಸ್‌ಪೋರ್ಟ್ ಸುಲಭವಾಗಿ ಸಿಗಲು ಪಾಸ್‌ಪೋರ್ಟ್ ಸೇವಾ ಪ್ರಕ್ರಿಯೆಯನ್ನು ಸರಳಗೊಳಿಸಿದ್ದನ್ನು ಯಾರೂ ಮರೆಯುವಂತಿಲ್ಲ. ಸರ್ ನೀವು ಕನ್ನಡಿಗರ ಹಾಗೂ ದೇಶದ ಕಣ್ಮಣಿ.

–ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ. ನಗರ, ಮೈಸೂರು.

ಉನ್ನತ ಶಿಕ್ಷಣ ಇಲಾಖೆಗಳ ಹುದ್ದೆ ಭರ್ತಿಯಾಗಲಿ

ಮಾನ್ಯರೆ,

ಪ್ರತಿ ವರ್ಷ ಲಕ್ಷಾಂತರ ವಿದ್ಯಾರ್ಥಿಗಳು ಪದವಿ ಗಳಿಸಿ ಹೊರ ಬರುತ್ತಿದ್ದು, ಹಲವಾರು ವಿದ್ಯಾರ್ಥಿಗಳಿಗೆ ಉದ್ಯೋಗ ಎಂಬುದು ಮರೀಚಿಕೆಯಾಗಿ ಉಳಿದಿದೆ. ಉನ್ನತ ವ್ಯಾಸಂಗ ಮಾಡಿದರೂ ಸರ್ಕಾರಿ ನೌಕರಿ ದೊರಕುವುದು ಅಸಾಧ್ಯವಾಗಿದೆ. ಹಣ ಅಥವಾ ಅಧಿಕಾರ ಉಳ್ಳವರಿಗೆ ಮಾತ್ರ ಸರ್ಕಾರಿ ಉದ್ಯೋಗ ದೊರಕುತ್ತಿರುವ ಇಂತಹ ಸಮಯದಲ್ಲಿ ಸಾಮಾನ್ಯ ಜನರ ಪಾಲಿಗೆ ಸರ್ಕಾರಿ ಉದ್ಯೋಗ ಬಿಸಿಲ ಕುದುರೆಯಾಗಿದೆ.

ಪ್ರಸ್ತುತ ಸಾವಿರಾರು ಉದ್ಯೋಗಗಳು ಉನ್ನತ ಶಿಕ್ಷಣ ಇಲಾಖೆಗಳಲ್ಲಿ ಖಾಲಿಯಿದ್ದು ಇವುಗಳ ಭರ್ತಿಗೆ ಶೀಘ್ರವಾಗಿ ಸರ್ಕಾರ ಗಮನ ಹರಿಸಬೇಕಾಗಿದೆ. ಮಾಹಿತಿಯ ಪ್ರಕಾರ ಕೇಂದ್ರ ಸರ್ಕಾರದ ಅನುದಾನದಲ್ಲಿ ನಡೆಯುವ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳಲ್ಲಿ 39000 ಉದ್ಯೋಗಗಳು ಖಾಲಿಯಿದ್ದು, ಇವುಗಳಲ್ಲಿ ವಿಶೇಷವಾಗಿ ಭೋದಕ ಹುದ್ದೆಗಳ ಸಂಖ್ಯೆ 13, 791 ಖಾಲಿಯಿರುವುದು ಸಂತಸದ ವಿಷಯವಾಗಿದ್ದು, ಸರ್ಕಾರ ಈ ಹುದ್ದೆಗಳ ಭರ್ತಿಗೆ ಯಾವುದೇ ಕ್ರಮ ಕೈಗೊಳ್ಳದಿರುವುದು ದುರದೃಷ್ಟಕರವಾಗಿದೆ.

ದೇಶದ 7 ಐಐಟಿ , 22 ಎನ್‌ಐಟಿ ಮತ್ತು 20 ಐಐಐಟಿ ಸಂಸ್ಥೆಗಳು ಮುಖ್ಯಸ್ಥರಿಲ್ಲದೆ ಕಾರ್ಯ ನಿರ್ವಹಿಸುತ್ತಿರುವುದು ಶೋಚನೀಯವಾಗಿದೆ. ಭೋದಕ ಮತ್ತು ಭೋದಕೇತರಿಲ್ಲದ ಶಿಕ್ಷಣದ ಮಟ್ಟ ಮತ್ತು ಕಚೇರಿಗಳಲ್ಲಿನ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ.

ಹಲವಾರು ವರ್ಷಗಳಿಂದ ಈ ವಿಭಾಗದ ಯಾವುದೇ ಹುದ್ದೆಗಳನ್ನು ಭರ್ತಿ ಮಾಡದೇ ಇರುವುದು ಇಷ್ಟು ಹುದ್ದೆ ಖಾಲಿಯಿರಲು ಮುಖ್ಯ ಕಾರಣವಾಗಿದೆ. ಮತ್ತು ಅತೀ ಶೀಘ್ರವಾಗಿ ಇಷ್ಟು ದೊಡ್ಡ ಪ್ರಮಾಣದ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳ ಕೊರತೆ ಕೂಡ ಎದ್ದು ಕಾಣುತ್ತಿದೆ.

ಕೇಂದ್ರ ಸರ್ಕಾರದ ಅನುದಾನದ ಶಿಕ್ಷಣ ಸಂಸ್ಥೆಗಳ ಸ್ಥಿತಿ ಹೀಗಿದ್ದರೆ, ರಾಜ್ಯ ಸರ್ಕಾರದ ಅಧೀನದ ಶಿಕ್ಷಣ ಸಂಸ್ಥೆಗಳ ಪಾಡು ಇದಕ್ಕಿಂತ ಶೋಚನೀಯವಾಗಿದೆ. ನಮ್ಮ ದೇಶದಲ್ಲಿ 11 ಲಕ್ಷ ಶಿಕ್ಷಕರ ಕೊರತೆಯಿರುವುದು ಯೋಚಿಸುವಂತಹ ವಿಷಯವಾಗಿದೆ.

2021ರ ಯುನೆಸ್ಕೊ ವರದಿಯ ಪ್ರಕಾರ ಭಾರತೀಯ ಶಿಕ್ಷಣ ಕ್ಷೇತ್ರಕ್ಕೆ ಶಿಕ್ಷಕರಾಗಲು ಅರ್ಹ ಅಭ್ಯರ್ಥಿಗಳ ಕೊರತೆಯ ಕುರಿತು ಗಮನಹರಿಸಬೇಕಾಗಿದೆ. ಹೀಗೆ ಅತಿದೊಡ್ಡ ಯುವಜನಾಂಗವನ್ನು ಹೊಂದಿರುವ ಭಾರತ ದೇಶದಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯತೆ ಕೊಡುವುದು ಅನಿವಾರ್ಯವಾಗಿದೆ.

ಯುವ ಜನಾಂಗಕ್ಕೆ ಮತ್ತು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡುವುದು ಸರ್ಕಾರದ ಕ್ರಮವಾಗಿದೆ ಹಾಗೂ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಖಾಲಿಯಿರುವ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರವಾಗಿ ಕ್ರಮಕೈಗೊಳ್ಳಬೇಕು ಎಂದೂ ರಾಷ್ಟದ ಯುವಜನತೆಯ ಪರವಾಗಿ ಅಗ್ರಹಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.



ಕಾರ್ಕಳ ಆನಂದಭಟ್
ಮೊ. 7676554198

ದಿಕ್ಕುದೆಸೆ

ಪ್ರಜಾಪ್ರಭುತ್ವಕ್ಕೆ ಅಂಟಿರುವ ವ್ಯಾಧಿ–ಪಕ್ಷಾಂತರ



"ಪಕ್ಷಾಂತರ ತಡೆಗಟ್ಟಲು ಕಾನೂನಿಗಿಂತ ನೈತಿಕ ನಿರ್ಬಂಧಗಳು ಹೆಚ್ಚು ಪರಿಣಾಮಕಾರಿಯಾಗಬಹುದು. ಮೂಲ ಪಕ್ಷದಿಂದ ಹೊಸ ಪಕ್ಷಕ್ಕೆ ಪಕ್ಷಾಂತರ ಮಾಡಿದಲ್ಲಿ ಮುಂದಿನ ಆರು ವರ್ಷಗಳ ಕಾಲ ಹೊಸ ಪಕ್ಷದಿಂದ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು. ಓರ್ವ ವ್ಯಕ್ತಿಗೆ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶವಿರಬಾರದು. ವಲಸೆ ಬಂದ ಪಕ್ಷದಿಂದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದ್ದಲ್ಲಿ ಪಕ್ಷಾಂತರಿಯಿಂದಲೇ ಸರಕಾರವು ಚುನಾವಣಾ ವೆಚ್ಚವನ್ನು ವಸೂಲಿ ಮಾಡಬೇಕು. ಕ್ರಿಮಿನಲ್‌ಗಳಿಗೆ, ಜನಸಾಮಾನ್ಯರನ್ನು ಪೀಡಿಸುವವರಿಗೆ ಯಾವುದೇ ಪಕ್ಷ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು. ಅದೇ ರೀತಿ ಪಕ್ಷಾಂತರಗೊಂಡು ವಲಸೆ ಬಂದ ಪಕ್ಷದಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ವಿಜಯಿಯಾದ ಶಾಸಕ, ಸಂಸದರಿಗೆ ಆ ಸಂಸತ್, ಶಾಸನ ಸಭೆಯ ಅವಧಿ ಮುಗಿಯುವವರೆಗೂ ಸಚಿವ ಸ್ಥಾನ ಅಥವಾ ನಿಗಮ, ಮಂಡಳಿಗಳಲ್ಲಿ ಸ್ಥಾನ ನೀಡಬಾರದು.

ಕರ್ನಾಟಕ ವಿಧಾನಸಭೆಗೆ ಮುಂದಿನ ಕೆಲವೇ ದಿನಗಳಲ್ಲಿ ಚುನಾವಣೆ ಘೋಷಣೆಯಾಗಲಿದೆ. ರಾಜ್ಯದಲ್ಲಿ ಪಕ್ಷಾಂತರದ ಪರ್ವ ಈಗಾಗಲೇ ಪ್ರಾರಂಭವಾಗಿದೆ. ತಮಗೆ, ತಮ್ಮ ಪರಿವಾರದವರಿಗೆ ಅಥವಾ ತಮ್ಮ ಆಯ್ಕೆಯ ಕ್ಷೇತ್ರಕ್ಕೆ ಟಿಕೆಟ್ ಸಿಗುವುದು ಅನುಮಾನವೆಂದು ಭಾವಿಸಿದವರು ಪಕ್ಷದ ನಾಯಕರನ್ನು ಬೆದರಿಸುವ, ಬ್ಲಾಕ್‌ಮೇಲ್ ಮಾಡುವ ತಂತ್ರಗಳನ್ನು ಪ್ರಾರಂಭಿಸುವುದರೊಂದಿಗೆ ಕ್ಷೇತ್ರದ ಜನರೆದುರು ಕಣ್ಣೀರು ಹಾಕಿ ಮತದಾರರ ಅನುಕಂಪಗಳಿಸುವ ತಂತ್ರಕ್ಕೂ ಶರಣಾಗಿದ್ದಾರೆ. ಈ ಬಾರಿ ಟಿಕೆಟ್ ಸಿಗುವುದು ಅಸಂಭವ ಎಂದು ಭಾವಿಸಿದವರು ಅನ್ಯ ಪಕ್ಷಗಳಲ್ಲಿರುವ ತಮ್ಮ ಸ್ನೇಹಿತರೊಂದಿಗೆ ಟಿಕೆಟ್‌ಗಾಗಿ ತೆರೆಯ–ಮರೆಯಲ್ಲಿ ಸಂಧಾನ ಶುರು ಮಾಡಿದ್ದಾರೆ. ಪಕ್ಷ ತ್ಯಜಿಸಲು ಹಳೆಯ ಸವಕಲು ಹೇಳಿಕೆಗಳನ್ನು ಕಂಠಪಾಠ ಮಾಡುತ್ತಿದ್ದಾರೆ. ತಾವು ಸೇರುವ ಪಕ್ಷದ ನಾಯಕರಲ್ಲಿರುವ ಅದ್ಭುತ ಗುಣಗಳ, ಸಾಮರ್ಥ್ಯಗಳ ಗುಣಗಾನ ಮಾಡಲಿದ್ದಾರೆ. ಮುಂದಿನ ದಿನಗಳಲ್ಲಿ ಸಿದ್ಧಾಂತಹೀನ ರಾಜಕಾರಣಿಗಳು ತಮ್ಮ ನಾಟಕಗಳ ಮೂಲಕ ಮತದಾರರಿಗೆ ಮನೋರಂಜನೆ ನೀಡಲಿದ್ದಾರೆ. ಪಕ್ಷದ ನಾಯಕರ ಸರ್ವಾಧಿಕಾರಿ ಮನೋಭಾವಕ್ಕೆ ಬೇಸತ್ತು, ಕೆಲವರು ಕ್ಷೇತ್ರಕ್ಕೆ ಸರಿಯಾದ ಅನುದಾನ ನೀಡಿಲ್ಲವೆಂದು ಪ್ರತಿಭಟಿಸಿ, ಇನ್ನು ಕೆಲವರು ಪಕ್ಷೀಯರು ನಿರ್ಲಕ್ಷಿಸಿದ್ದರಿಂದ ಮನನೊಂದು, ಮತ್ತೆ ಕೆಲವರು ಪಕ್ಷದಲ್ಲಿರುವ ಉಸಿರುಗಟ್ಟುವ ವಾತಾವರಣದಿಂದ ಹೊರಬರಲು (ರಾಜಕೀಯವಾಗಿ ಸಾಯದಂತೆ) ಎಂಬಿತ್ಯಾದಿ ಕಾರಣಗಳನ್ನು ನೀಡಿ ಪಕ್ಷಗಳನ್ನು ತ್ಯಜಿಸಲಿದ್ದಾರೆ. ಮುಂದಿನ ದಿನಗಳಲ್ಲಿ ಗೋಸುಂಬೆಗಳು ಗಾಬರಿಯಾಗುವ ರೀತಿಯಲ್ಲಿ ರಾಜಕಾರಣಿಗಳು ಬಣ್ಣ ಬದಲಿಸಲಿದ್ದಾರೆ. ಚುನಾವಣೆಗಳು ರಾಜಕಾರಣಿಗಳ ಸೇವೆಯ ಮುಖವಾಡ ಕಳಚಿ ಸ್ವಾರ್ಥದ ಮುಖ ತೋರಿಸುವ ಪ್ರಜಾ ಉತ್ಸವವಾಗಿದೆ.

ರಾಜಕೀಯದಲ್ಲಿ ಪಕ್ಷಾಂತರವೆಂದರೆ ಒಂದು ಗುಂಪನ್ನು ತೊರೆದು ಮತ್ತೊಂದು ಗುಂಪಿಗೆ ನಿಷ್ಠೆ ವ್ಯಕ್ತಪಡಿಸುವುದು. ಈ ಸಂದರ್ಭದಲ್ಲಿ ಮೊದಲ ಗುಂಪು ಈ ಪ್ರಕ್ರಿಯೆಯನ್ನು ಅಕ್ರಮವೆಂದು, ಅನೈತಿಕವೆಂದು ಪರಿಗಣಿಸುತ್ತದೆ. ಸಂಕ್ಷಿಪ್ತವಾಗಿ ಓರ್ವ ವ್ಯಕ್ತಿಯು ಯಾವುದೋ ಒಂದು ಪಕ್ಷ ಅಥವಾ ಸಂಘಟನೆಗೆ ಕರ್ತವ್ಯ, ನಿಷ್ಠೆ ಅಥವಾ ಸಿದ್ಧಾಂತದಿಂದ ಬಂಧಿಸಲ್ಪಟ್ಟಿದ್ದು, ಆ ಉದ್ದೇಶ ಅಥವಾ ಸಿದ್ಧಾಂತ ತ್ಯಜಿಸುವುದನ್ನು 'ಪಕ್ಷಾಂತರ' ಎನ್ನುತ್ತಾರೆ. ಪಕ್ಷದ ಅಥವಾ ಸಂಸ್ಥೆಯ ಸಂಘಟನೆಯ ಕಾರ್ಯ ನೀತಿಯ ವಿರುದ್ಧ ಮತ ಚಲಾಯಿಸುವುದರಿಂದ ಸ್ಥಾನ ಕಳೆದುಕೊಳ್ಳುವುದು ಅಥವಾ ಉಚ್ಚಾಟನೆಯಂತಹ ಪರಿಣಾಮಗಳು ಉಂಟಾಗಬಹುದು, ಅಸ್ಥಿರತೆಗೂ ಕಾರಣವಾಗಬಹುದು.

ಭಾರತದಲ್ಲಿ ಪಕ್ಷಾಂತರದ ಪಿಡುಗು: ರಾಮಾಯಣದಲ್ಲಿ ಸೀತಾಪಹರಣಕ್ಕೆ ಸಂಬಂಧಿಸಿದಂತೆ ಉಂಟಾದ ಭಿನ್ನಾಭಿಪ್ರಾಯದಿಂದ ವಿಭೀಷಣನು ರಾಮನ ಪಾಳಯ ಸೇರುತ್ತಾನೆ. ವಿಭೀಷಣ ಉದಾತ್ತ ಮೌಲ್ಯಗಳಿಗಾಗಿ ಪಕ್ಷಾಂತರ ಮಾಡಿದನೆನ್ನಬಹುದು. ಮಹಾಭಾರತದಲ್ಲಿ ದುರ್ಯೋಧನನ ಸೋದರ ಯುಯುತ್ಸು ಕುರುಕ್ಷೇತ್ರದಲ್ಲಿ ಯುದ್ಧಾರಂಭವಾಗುವ ಮೊದಲು ಪಾಂಡವರ ಪಕ್ಷ ಸೇರುತ್ತಾನೆ. ಪಾಂಡವರ ಪರ ಹೋರಾಡಲು ಬಂದ ಮದ್ರದೇಶಾಧಿಪತಿ ಶಲ್ಯನಿಗೆ ದುರ್ಯೋಧನನು ಮೋಸದ ಆತಿಥ್ಯ ನೀಡಿ ಕೌರವರ ಪರ ಹೋರಾಡಲು ವಿವಶಗೊಳಿಸುತ್ತಾನೆ. ಈ ರೀತಿ ಪುರಾಣ ಕಾಲದಲ್ಲಿ ಮೌಲ್ಯಾಧಾರಿತ ಪಕ್ಷಾಂತರಗಳು ನಡೆದ ಅನೇಕ ಘಟನೆಗಳಿವೆ. ಆದರೆ ಆಧುನಿಕ ಜಗತ್ತಿನಲ್ಲಿ ಪ್ರಸ್ತುತ ನಡೆಯುತ್ತಿರುವ ಪಕ್ಷಾಂತರಗಳಲ್ಲಿ ಮೌಲ್ಯ, ಸಿದ್ಧಾಂತಗಳು ಕಾಣೆಯಾಗಿವೆ.

ಸ್ವಾತಂತ್ರ್ಯೋತ್ತರ ಭಾರತದ ಸಂವಿಧಾನದಲ್ಲಿ ರಾಜಕೀಯ ಪಕ್ಷಗಳು ಮತ್ತು ಅವುಗಳ ಅಸ್ತಿತ್ವದ ಕುರಿತು ಯಾವುದೇ ಉಲ್ಲೇಖ ಹೊಂದಿಲ್ಲ. ಪಕ್ಷಾಂತರದ ಉಲ್ಲೇಖಗಳೂ ಇಲ್ಲ. ಆದರೆ **ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್**‌ರವರು ಭವಿಷ್ಯದಲ್ಲಿ ಪಕ್ಷಾಂತರಗಳ ಸಂಭಾವ್ಯತೆ ಅರಿತಿದ್ದರು ಎಂಬುದು ಅವರ ಈ ಹೇಳಿಕೆಯಿಂದ ತಿಳಿಯಬಹುದು. **"ಸಂವಿಧಾನ ಎಷ್ಟೇ ಒಳ್ಳೆಯದಾಗಿದ್ದರೂ, ಅದನ್ನು ಪಾಲಿಸುವ ಜನರು ಕೆಟ್ಟವರಾದರೆ ಸಂವಿಧಾನವು ನಿಷ್ಪ್ರಯೋಜಕವಾಗುತ್ತದೆ"**. ಅದೇ ರೀತಿ **"ಅನುಕೂಲ ಸಿಂಧು ರಾಜಕಾರಣದಿಂದ ಪ್ರಜಾಪ್ರಭುತ್ವಕ್ಕೆ ಹಾನಿ ನಿಶ್ಚಿತ"** ಎಂದು ಎಚ್ಚರಿಸಿ ದ್ದರು. **ಗಾಂಧೀಜಿಯವರು "ಪ್ರಜಾಸತ್ತೆಯಲ್ಲಿ ನಿಷ್ಠೆಯುಳ್ಳವರು ಪೂರ್ಣವಾಗಿ ನಿರಪೇಕ್ಷರಾಗಿರ ಬೇಕು"** ಎಂದು ಆಶಿಸಿದ್ದರು. **ಪ್ರಧಾನಿ ನೆಹರೂ** ರವರು **"ಪಟ್ಟಭದ್ರ ಹಿತಾಸಕ್ತಿ ಮತ್ತು ಮತ ಗಳಿಕೆಗಾಗಿ ಜನರನ್ನು ಸ್ವಾರ್ಥಕ್ಕಾಗಿ ಬಳಸಿದರೆ ಅದು ಖಂಡಿತವಾಗಿಯೂ ಧರ್ಮವೆನಿಸುವುದಿಲ್ಲ"** ಎಂದಿದ್ದರು.

1967ರ ಚುನಾವಣೆಗಳು ಮತ್ತು ಪಕ್ಷಾಂತರಗಳು: 1967ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆ ನಂತರ ಪಕ್ಷಾಂತರ ನಿಷೇಧ ಕಾನೂನು ಜಾರಿಯಾಗಬೇಕೆಂಬ ಚರ್ಚೆ ಆರಂಭವಾಯಿತು. ಈ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೂ ಸಂಸತ್ತಿನಲ್ಲಿ ಸಂಖ್ಯಾಬಲ ಹಿಂದಿನ ಲೋಕಸಭೆಯಲ್ಲಿದ್ದ 361 ರಿಂದ 283ಕ್ಕೆ ಕುಸಿದಿತ್ತು. ಇದೇ ವರ್ಷ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಯ್ಕೆಯಾದ ಸುಮಾರು 3500ರಲ್ಲಿ 550 ಶಾಸಕರು ತಮ್ಮ ಮೂಲ ಪಕ್ಷವನ್ನು ತ್ಯಜಿಸಿದರು. ಪರಿಣಾಮವಾಗಿ ಕಾಂಗ್ರೆಸ್ ಏಳು ರಾಜ್ಯಗಳಲ್ಲಿ ಅಧಿಕಾರ ಕಳೆದುಕೊಂಡಿತು. **ಹರಿಯಾಣದಲ್ಲಿ ಗಯಾಲಾಲ್** ಎಂಬ ಶಾಸಕರು ಒಂದೇ ದಿನದಲ್ಲಿ ಮೂರು ಬಾರಿ ಪಕ್ಷಾಂತರ ಮಾಡಿ ದಾಖಲೆ ನಿರ್ಮಿಸಿದ್ದರು. ಗಯಾಲಾಲ್‌ರ ಲಜ್ಜೆಗೆಟ್ಟ ಪಕ್ಷಾಂತರದಿಂದಲೇ **'ಆಯಾರಾಮ್ ಗಯಾರಾಮ್'** ಎಂಬ ವ್ಯಂಗ್ಯೋಕ್ತಿ ಚಾಲ್ತಿಗೆ ಬಂತು. ಈಗ ಪಲ್ಟೂರಾಮ್ ಎಂದೂ ಕರೆಯುತ್ತಿದ್ದಾರೆ. ಈ ಪಿಡುಗನ್ನು ನಿಯಂತ್ರಿಸುವ ಮೊದಲ ಯತ್ನ 1967ರಲ್ಲಿ ಆರಂಭವಾಯಿತು. ಕಾಂಗ್ರೆಸ್ ಸಂಸದ ಕರ್ನಾಟಕದ ರಾಜ್ಯಪಾಲರೂ ಆಗಿದ್ದ ಪಿ.ವೆಂಕಟಸುಬ್ಬಯ್ಯನವರು ಖಾಸಗಿ ಸದಸ್ಯರ ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿದ್ದರು. ಈ ಖಾಸಗಿ ಮಸೂದೆ ಮೇಲೆ ಲೋಕಸಭೆಯಲ್ಲಿ ತೀವ್ರ ತೆರನಾದ ಚರ್ಚೆಗಳು ನಡೆದವು. ಈ ಮಸೂದೆಗೆ 'ಕಾಂಗ್ರೆಸ್ ಉಳಿಸಿ' ಕಾಯ್ದೆ ಎಂಬ ಹೆಸರಿಡಬೇಕೆಂದು ಪ್ರತಿಪಕ್ಷಗಳು ವ್ಯಂಗ್ಯವಾಡಿದರೆ, ಆಡಳಿತ ಪಕ್ಷದ ಸದಸ್ಯರು, ಜನಪ್ರತಿನಿಧಿಗಳು ನಿಷ್ಠೆ ಬದಲಾಯಿಸಲು ವಿಪಕ್ಷಗಳು ಒತ್ತಡ ಹೇರುತ್ತಿವೆ ಎಂದು ದೂರಿದರು. ಆಗ ಪ್ರಧಾನಿಯಾಗಿದ್ದ ಇಂದಿರಾಗಾಂಧಿಯವರು ಆಸಕ್ತಿ ವಹಿಸಿ ಕೇಂದ್ರ ಸಚಿವ ವೈ.ಬಿ. ಚೌಹಾಣ್‌ರ ಅಧ್ಯಕ್ಷತೆಯಲ್ಲಿ 1967ರಲ್ಲಿ ಸಮಿತಿ ರಚಿಸಿದರು. ಈ ಸಮಿತಿಯು 1968ರಲ್ಲಿ ನೀಡಿದ ವರದಿಯ ಶಿಫಾರಸುಗಳ ಆಧಾರದಲ್ಲಿ ರಚಿಸಿದ **ಪಕ್ಷಾಂತರ ನಿಷೇಧ ಮಸೂದೆ** ಲೋಕಸಭೆಯಲ್ಲಿ ಚರ್ಚೆ ನಡೆದು ಮರುಪರಿಶೀಲನೆಗೆ ಜಂಟಿ ಸದನ ಸಮಿತಿಗೆ ಒಪ್ಪಿಸಲಾಯಿತು. ಆದರೆ ಆ ನಂತರ ಸರಕಾರವು ಆಸಕ್ತಿ ತೋರದ ಕಾರಣ ಚರ್ಚೆಯೇ ನಡೆಯಲಿಲ್ಲ. ಈ ರೀತಿ ಪಕ್ಷಾಂತರ ನಿಷೇಧ ಮಸೂದೆ ತರುವ ಮೊದಲ ಯತ್ನ ವಿಫಲವಾಯಿತು.

1977ರ ಚುನಾವಣೆಗಳು: 1977ರಲ್ಲಿ ಸುಮಾರು 16 ರಾಜ್ಯಗಳಲ್ಲಿ ಚುನಾವಣೆ ನಡೆಯಿತು. ಕಾಂಗ್ರೆಸ್‌ಗೆ ಕೇವಲ ಒಂದು ರಾಜ್ಯದಲ್ಲಿ ಮಾತ್ರ ಸರಕಾರ ರಚಿಸಲು ಸಾಧ್ಯವಾಯಿತು. ಈ ವರ್ಷದಿಂದ ಭಾರತದಲ್ಲಿ ಸಮ್ಮಿಶ್ರ ಸರಕಾರದ ಯುಗ ಆರಂಭಗೊಂಡಿತು. ಭಾರೀ ಪ್ರಮಾಣದಲ್ಲಿ ಪಕ್ಷಾಂತರಗಳು ನಡೆದವು. ಕೇವಲ ಒಂದು ವರ್ಷದಲ್ಲಿ 142 ಸಂಸದರು, 1900ಕ್ಕೂ ಹೆಚ್ಚು ಶಾಸಕರು ಮೂಲ ಪಕ್ಷಗಳಿಂದ ವಲಸೆ ಹೋದರು. ಇವರಲ್ಲಿ 212 ಶಾಸಕರಿಗೆ ಮಂತ್ರಿ ಪದವಿ ಲಭಿಸಿದರೆ 15 ಮಂದಿಗೆ ಮುಖ್ಯಮಂತ್ರಿಯಾಗುವ ಭಾಗ್ಯ ಲಭಿಸಿತು. 1978ರಲ್ಲಿ ಆಗಿನ ಪ್ರಧಾನಿ ಮೊರಾರ್ಜಿ ದೇಸಾಯಿಯವರು ಮಂಡಿಸಲು ಬಯಸಿದ ಪಕ್ಷಾಂತರ ನಿಷೇಧ ಕಾಯ್ದೆಯನ್ನು ಆಡಳಿತ ಹಾಗೂ ವಿರೋಧಿ ಪಕ್ಷಗಳು ವಿರೋಧಿಸಿದವು. ಕೊನೆಗೆ ಮೊರಾರ್ಜಿಯವರ ಸರಕಾರವೇ ಪಕ್ಷಾಂತರಗಳಿಂದ ಪತನಗೊಂಡಿತು.

ಯಶಸ್ವಿಯಾದ ಪ್ರಧಾನಿ ರಾಜೀವ್ ಗಾಂಧಿ: 1985ರಲ್ಲಿ ಪ್ರಧಾನಿಯಾಗಿದ್ದ ರಾಜೀವ್ ಗಾಂಧಿಯವರು ಪಕ್ಷಾಂತರ ನಿಷೇಧ ಕಾಯ್ದೆ ಜಾರಿಗೊಳಿಸುವಲ್ಲಿ ಯಶಸ್ವಿಯಾದರು. ರಾಜೀವ್ ಗಾಂಧಿಯವರು ಪಕ್ಷಾಂತರ ನಿಷೇಧಿಸಲು ಸಂವಿಧಾನದ 10 ಅನುಚ್ಛೇದಕ್ಕೆ 52ನೇ ತಿದ್ದುಪಡಿ ಸೇರಿಸುವಲ್ಲಿ ಯಶಸ್ವಿಯಾದರು. ಆ ನಂತರ ಸಂವಿಧಾನದ ಹತ್ತನೇ ಅನುಚ್ಛೇದವು (ಶೆಡ್ಯೂಲ್) ಪಕ್ಷಾಂತರ ವಿರೋಧಿಸುವ ಅಥವಾ ನಿಷೇಧಿಸುವ ಕಾಯ್ದೆ ಎಂದು ಭಾರತೀಯ ಸಂವಿಧಾನದ ಭಾಗವಾಯಿತು. ಈ ಕಾಯ್ದೆ ಅನುಮೋದನೆಯಾಗುವ ಸಂದರ್ಭದಲ್ಲಿ **ಹಿರಿಯ ಸಮಾಜವಾದಿ ಧುರೀಣ ಮಧುಲಿಮಯೆ** ಹಾಗೂ **ಸಂವಿಧಾನ ತಜ್ಞರಾಗಿದ್ದ ನಾನಿ ಪಾಲ್ಖಿವಾಲಾ** ರವರು ಸದಸ್ಯರಿಗೆ ತಮ್ಮ ಆತ್ಮಸಾಕ್ಷಿಗೆ, ವಿವೇಚನೆಗೆ ಅವಕಾಶ ನೀಡುವುದಿಲ್ಲ. ಇಂತಹ ಸಂದರ್ಭದಲ್ಲಿ ಸೈದ್ಧಾಂತಿಕ ನೆಲೆಯಲ್ಲಿ ಪಕ್ಷ ವಿಭಜನೆಗೆ ಅವಕಾಶ ನೀಡಬೇಕು. ಈ ಅವಕಾಶವಿಲ್ಲದಿದ್ದರೆ ಪಕ್ಷವನ್ನು ನಿಯಂತ್ರಿಸುವ ಕೆಲವೇ ಉನ್ನತ ನಾಯಕರ ಅಭಿಪ್ರಾಯಕ್ಕೆ ಆದೇಶಕ್ಕೆ ನಿರ್ಣಯಕ್ಕೆ ಬದ್ಧರಾಗಲು ವಿವಶಗೊಳಿಸುತ್ತದೆ. ಸದನದ ಸದಸ್ಯರ ಅಭಿವ್ಯಕ್ತಿಗೆ ಆತ್ಮಸಾಕ್ಷಿಗೆ ಅವಕಾಶ ನೀಡುವುದಿಲ್ಲವೆಂದು ವಾದಿಸಿದ್ದರು. ಚರ್ಚೆಯ ನಂತರ 1985ನೇ ಜನವರಿ 30ರಂದು ಲೋಕಸಭೆಯಲ್ಲಿ ಒಪ್ಪಿಗೆ ದೊರೆತು ಮರುದಿನ ರಾಜ್ಯಸಭೆಯಲ್ಲಿ ಅಂಗೀಕಾರ ದೊರೆಯಿತು. 1985ರ ಫೆಬ್ರವರಿ 15ರಂದು ರಾಷ್ಟ್ರಪತಿಯವರ ಅಂಕಿತವಾಗಿ ಮಾರ್ಚ್ 18 ರಿಂದ ಜಾರಿಗೊಂಡಿತು. ಈ ಕಾಯ್ದೆಯಂತೆ ಪ್ರತಿಯೊಬ್ಬರು ಪಕ್ಷದ 'ವಿಪ್' ಉಲ್ಲಂಘಿಸಿದರೆ ಮತ್ತು ಮೂಲ ಪಕ್ಷ ಬಿಟ್ಟು ಇನ್ನೊಂದು ಪಕ್ಷ ಸೇರಿದಲ್ಲಿ ಚುನಾಯಿತ ಸದಸ್ಯರು ತಮ್ಮ ಸ್ಥಾನ ಕಳೆದುಕೊಂಡು ಉಳಿದ ಅವಧಿಗೆ ಅನರ್ಹರಾಗುತ್ತಾರೆ. ಈ ಕಾಯ್ದೆಯು ಜಾರಿಗೆ ಬಂದ ನಂತರ ಪಕ್ಷಾಂತರದ ಪ್ರಮಾಣದಲ್ಲಿ ಸ್ವಲ್ಪ ಇಳಿಕೆಯಾದರೂ ಸಂಪೂರ್ಣ ಕೊನೆಗೊಳಿಸಲು ಸಾಧ್ಯವಾಗಿಲ್ಲ.

ಪಕ್ಷಾಂತರ ಮತ್ತೊಂದು ರೀತಿಯಲ್ಲಿ ಮುಂದುವರಿಯಿತು. ಈ ಕಾಯ್ದೆಯಲ್ಲಿದ್ದ ದುರ್ಬಲ ಕೊಂಡಿಯಾದ ಪಕ್ಷದ ಒಟ್ಟು ಸದಸ್ಯ ಬಲದ ಮೂರನೇ ಒಂದರಷ್ಟು ಸದಸ್ಯರು ಪಕ್ಷಾಂತರಗೊಂಡರೆ ಅವರನ್ನು ಪ್ರತ್ಯೇಕ ಬಣವಾಗಿ ಗುರುತಿಸಿದಲ್ಲಿ ಅನರ್ಹಗೊಳಿಸುವ ಅವಕಾಶವಿರುವುದಿಲ್ಲ. ಈ ಅವಕಾಶವು ವೈಯಕ್ತಿಕ ಪಕ್ಷಾಂತರದಿಂದ ಸಾಮೂಹಿಕ ಪಕ್ಷಾಂತರಕ್ಕೆ ಅವಕಾಶ ಮಾಡಿದೆ ಎಂಬ ಆಕ್ಷೇಪಕ್ಕೆ ಅವಕಾಶ ನೀಡಿತು. ಈ ಹಿನ್ನೆಲೆಯಲ್ಲಿ **2003ರಲ್ಲಿ ಅಟಲ್‌ಜೀ** ನೇತೃತ್ವದ ಎನ್‌ಡಿಎ ಸರಕಾರ ಸಂವಿಧಾನಕ್ಕೆ 91ನೇ ತಿದ್ದುಪಡಿ ಮಾಡುವ ಮೂಲಕ ಈ ವಾಮ ಮಾರ್ಗವನ್ನು ಮುಚ್ಚಲು ಯತ್ನಿಸಿತು. ಈ ಉದ್ದೇಶಕ್ಕಾಗಿ **ಪ್ರಣಬ್ ಮುಖರ್ಜಿ** ನೇತೃತ್ವದ ಸಮಿತಿಯು ನೀಡಿದ ಶಿಫಾರಸಿನಂತೆ ವಿಲೀನಗೊಳ್ಳಬೇಕಾದರೆ, ಸದಸ್ಯತ್ವ ಉಳಿಯಬೇಕಾದರೆ ಮೂರನೇ ಎರಡರಷ್ಟು ಸದಸ್ಯರು ಪಕ್ಷಾಂತರ ಮಾಡಿರಬೇಕೆಂದು ಈ ತಿದ್ದುಪಡಿ ಹೇಳಿದೆ. ಪ್ರಸ್ತುತ ಜನಪ್ರತಿನಿಧಿಗಳು ಒಂಟಿಯಾಗಿ ಅಥವಾ ಗುಂಪಿನಲ್ಲಿ ಪಕ್ಷಾಂತರಗೊಳ್ಳಲು ಶಾಸಕಾಂಗ ಸದಸ್ಯತ್ವಕ್ಕೆ ರಾಜೀನಾಮೆ ನೀಡಬೇಕು ಮತ್ತು ಮರುಚುನಾವಣೆ ಎದುರಿಸಬೇಕು. ಈ ಕಾಯ್ದೆಗಳ ನಂತರವೂ ದೇಶದಲ್ಲಿ ಪಕ್ಷಾಂತರ ನಿಂತಿಲ್ಲ. ಇದಕ್ಕೆ ಮುಖ್ಯ ಕಾರಣ ಕಾನೂನಿನಲ್ಲಿರುವ ದುರ್ಬಲ ಅಂಶಗಳು. ಕಾನೂನು ಚಾಪೆ ಅಡಿ ತೂರಿದರೆ ಜನಪ್ರತಿನಿಧಿಗಳು ರಂಗೋಲಿಯಡಿ ತೂರುತ್ತಿದ್ದಾರೆ.

ಪಕ್ಷಾಂತರ ತಡೆಗಟ್ಟಲು ಕಾನೂನಿಗಿಂತ ನೈತಿಕ ನಿರ್ಬಂಧಗಳು ಹೆಚ್ಚು ಪರಿಣಾಮಕಾರಿಯಾಗಬಹುದು. ಮೂಲ ಪಕ್ಷದಿಂದ ಹೊಸ ಪಕ್ಷಕ್ಕೆ ಪಕ್ಷಾಂತರ ಮಾಡಿದಲ್ಲಿ ಮುಂದಿನ ಆರು ವರ್ಷಗಳ ಕಾಲ ಹೊಸ ಪಕ್ಷದಿಂದ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು. ಓರ್ವ ವ್ಯಕ್ತಿಗೆ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಅವಕಾಶವಿರಬಾರದು. ವಲಸೆ ಬಂದ ಪಕ್ಷದಿಂದ ಉಪ ಚುನಾವಣೆಯಲ್ಲಿ ಸ್ಪರ್ಧಿಸಿದ್ದಲ್ಲಿ ಪಕ್ಷಾಂತರಿಯಿಂದಲೇ ಸರಕಾರವು ಚುನಾವಣಾ ವೆಚ್ಚವನ್ನು ವಸೂಲಿ ಮಾಡಬೇಕು. ಕ್ರಿಮಿನಲ್‌ಗಳಿಗೆ, ಜನಸಾಮಾನ್ಯರನ್ನು ಪೀಡಿಸುವವರಿಗೆ ಯಾವುದೇ ಪಕ್ಷ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ನೀಡಬಾರದು. ಅದೇ ರೀತಿ ಪಕ್ಷಾಂತರಗೊಂಡು ವಲಸೆ ಬಂದ ಪಕ್ಷದಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ವಿಜಯಿಯಾದ ಶಾಸಕ, ಸಂಸದರಿಗೆ ಆ ಸಂಸತ್, ಶಾಸನ ಸಭೆಯ ಅವಧಿ ಮುಗಿಯುವವರೆಗೂ ಸಚಿವ ಸ್ಥಾನ ಅಥವಾ ನಿಗಮ, ಮಂಡಲಿಗಳಲ್ಲಿ ಸ್ಥಾನ ನೀಡಬಾರದು. ಅತ್ಯಂತ ಪ್ರಮುಖವಾದ ಸಂಗತಿ ಎಂದರೆ ಕಾನೂನು ಮತ್ತು ಮತದಾರರು ಎಚ್ಚೆತ್ತು ಈ ಅನಿಷ್ಟವನ್ನು ಕೊನೆಗೊಳಿಸಬೇಕಾಗಿದೆ.

ಆದಿಚುಂಚನಗಿರಿ ಶ್ರೀಗಳ ಬಗ್ಗೆ ಲಘು ಹೇಳಿಕೆ

ರಂಗಾಯಣ ನಿರ್ದೇಶಕರ ವಿರುದ್ಧ ಒಕ್ಕಲಿಗರ ಪ್ರತಿಭಟನೆ

ಮೈಸೂರು, ಮಾ.24(ಎಸ್‌ಪಿಎನ್)–ಆದಿ ಚುಂಚನಗಿರಿ ಶ್ರೀಗಳ ಕುರಿತು ರಂಗಾಯಣ ನಿರ್ದೇಶಕರು ನೀಡಿರುವ ಹೇಳಿಕೆಯನ್ನು ಖಂಡಿಸಿ, ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಮೈಸೂರು ಮತ್ತು ಚಾಮರಾಜನಗರ ಘಟಕದ ಪದಾಧಿಕಾರಿಗಳು ಜಿಲ್ಲಾಧಿಕಾರಿಗಳ ಕಚೇರಿಗಳ ಬಳಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಸೇರಿದಂತೆ ಇತರೆ ಪದಾಧಿಕಾರಿಗಳು, ರಂಗಾಯಣ ನಿರ್ದೇಶಕರ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿದರಲ್ಲದೆ, ಸರ್ಕಾರ ಈ ಕೂಡಲೆ ರಂಗಾಯಣ ನಿರ್ದೇಶಕ ಸ್ಥಾನದಿಂದ ಅಡ್ಡಂಡ ಕಾರ್ಯಪ್ಪನವರನ್ನು ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.



ಆದಿಚುಂಚನಗಿರಿ ಮಠದ ಡಾ.ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ ರಾಜ್ಯ ಮತ್ತು ದೇಶಾದ್ಯಂತ ಅಪಾರ ಭಕ್ತ ವೃಂದವೇ ಇದೆ. ಶ್ರೀಗಳು ಕೇವಲ ಒಂದು ಸಮುದಾಯ ಇಲ್ಲವೇ ಒಂದು ಧರ್ಮಕ್ಕೆ ಸೀಮಿತವಾಗದೇ ಎಲ್ಲಾ ವರ್ಗದ ಬಡ ಮಕ್ಕಳಿಗೆ ಶಿಕ್ಷಣ, ದಾಸೋಹ, ವಸತಿ, ಆರೋಗ್ಯ ಕ್ಷೇತ್ರದಲ್ಲಿ ಅನನ್ಯ ಸೇವೆ ನೀಡುತ್ತ ಬಂದಿದ್ದಾರೆ. ಹಾಗಾಗಿ ಆದಿಚುಂಚನಗಿರಿ ಶ್ರೀಗಳ ಬಗ್ಗೆ ನೀಡಿರುವ ಹೇಳಿಕೆ ಹಿಂಪಡೆದು, ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು. ಇಲ್ಲದಿದ್ದರೆ, ಸರ್ಕಾರದ ವಿರುದ್ಧ ಉಗ್ರ ಹೋರಾಟ ಹಮ್ಮಿ ಕೊಳ್ಳಲಾಗುವುದು ಎಂದು ಒತ್ತಾಯಿಸಿದರು.

ವೇದಿಕೆಯಲ್ಲಿ ರವಿಕುಮಾರ ರಾಜಕೀಯ, ರಾಜ್ಯ ವಕ್ಕಲಿಗರ ಸಂಘದ ನಿರ್ದೇಶಕ ಡಾ.ಮಂಜೇಗೌಡ, ಮುಖಂಡರಾದ ಅನಿಲ್, ಗಿರೀಶ್ ಗೌಡ, ವಿಜಯನಗರ ಮಂಜು, ಹೇಮಾವತಿ, ಡಾ.ನರಸಿಂಹೇಗೌಡ, ಸತೀಶ್ ಗೌಡ, ಕುಮಾರ್ ಗೌಡ, ಶಿವಲಿಂಗಯ್ಯ, ದರ್ಶನಗೌಡ, ಆನಂದಗೌಡ, ಕೃಷ್ಣಪ್ಪ, ಹನುಮಂತಯ್ಯ, ಕೆ.ಪಿ.ನಾಗಣ್ಣ, ಸುಬ್ಬೇಗೌಡ, ದಿನೇಶ್‌ಗೌಡ ಉಪಸ್ಥಿತರಿದ್ದರು.

ಮೈಸೂರಿನ ಕೆಲವೆಡೆ ಎರಡು ದಿನ ನೀರು ಸರಬರಾಜು ವ್ಯತ್ಯಯ

ಮೈಸೂರು, ಮಾ.24– ಮೈಸೂರು ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕಬಿನಿ ನೀರು ಸರಬರಾಜು ಯೋಜನೆಯ ಯಂತ್ರಾಗಾರದಲ್ಲಿ ಹೊಸದಾಗಿ ಪ್ಯಾನಲ್ ಬೋರ್ಡ್ ಅಳವಡಿಸುವ ಕಾಮಗಾರಿಯನ್ನು ಕೈಗೆತ್ತಿಗೊಳ್ಳಲಾಗುವುದರಿಂದ ಮಾ.27ರಂದು ಮತ್ತು 28 ರಂದು ಕೆಜಿ.ಕೊಪ್ಪಲು, ಜನತಾನಗರ, ಶಾರದಾ ದೇವಿನಗರ, ದಟ್ಟಗಳ್ಳಿ 3ನೇ ಹಂತ, ಕುವೆಂಪು ನಗರ, ಜಯನಗರ, ಲಕ್ಷ್ಮೀಪುರಂ, ಸುಣ್ಣದಕೇರಿ, ಅಗ್ರಹಾರ, ಗುಂಡುರಾವ್‌ನಗರ, ಚಾಮುಂಡಿಪುರಂ, ಕೃಷ್ಣಮೂರ್ತಿಪುರಂ, ಕುವೆಂಪುನಗರ, ಸಿಐಟಿಬಿ, ರಾಮಕೃಷ್ಣ ನಗರ, ಕುವೆಂಪುನಗರ ಎಂ.ಬ್ಲಾಕ್, ಅಶೋಕಪುರಂ, ವಿದ್ಯಾರಣ್ಯಪುರಂ ಭಾಗಶಃ ಪ್ರದೇಶ, ವಿಶ್ವೇಶ್ವರ ನಗರ, ಜೆ.ಪಿ.ನಗರ, ಅರವಿಂದ ನಗರ, ಶ್ರೀರಾಂಪುರದಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪಾಲಿಕೆಯ ನೀರು ಸರಬರಾಜು ಮತ್ತು ಒಳ ಚರಂಡಿ ಪಶ್ಚಿಮ ವಿಭಾಗದ ಕಾರ್ಯ ಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಕೇಂದ್ರ ಸರ್ಕಾರಿ ನೌಕರಗೆ ತುಟ್ಟಿ ಭತ್ಯೆ ಶೇ.4ರಷ್ಟು ಹೆಚ್ಚಳ

ನವದೆಹಲಿ: ಸರ್ಕಾರಿ ನೌಕರರಿಗೆ ಕೇಂದ್ರ ಸರ್ಕಾರ ಶೇ.4ರಷ್ಟು ತುಟ್ಟಿ ಭತ್ಯೆ ಹೆಚ್ಚಳಕ್ಕೆ ಅನುಮೋದನೆ ನೀಡಿದೆ. ಕೇಂದ್ರ ಸರ್ಕಾರಿ ನೌಕರರು ಮತ್ತು ಪಿಂಚಣಿದಾರರಿಗೆ ಸಿಹಿಸುದ್ದಿ ನೀಡಲಾಗಿದ್ದು, ಶೇ.4ರಷ್ಟು ತುಟ್ಟಿಭತ್ಯೆ ಹೆಚ್ಚಿಸಲಾಗಿದೆ. ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕೇಂದ್ರ ಸರ್ಕಾರಿ ನೌಕರರಿಗೆ ತುಟ್ಟಿಭತ್ಯೆ ಹೆಚ್ಚಳದ ಘೋಷಣೆ ಮಾಡಲಾಗಿದೆ. ಕೇಂದ್ರ ಸರ್ಕಾರವು ತನ್ನ ಒಂದು ಕೋಟಿಗೂ ಮಿಕ್ಕಿ ಉದ್ಯೋಗಿಗಳಿಗೆ ತುಟ್ಟಿಭತ್ಯೆಯನ್ನು ಶೇಕಡಾ 4.ರಷ್ಟು ಹೆಚ್ಚಿಸಿದೆ. ಒಟ್ಟಾರೆಯಾಗಿ ತುಟ್ಟಿಭತ್ಯೆ ಹೆಚ್ಚಳ ಶೇಕಡಾ 38 ರಿಂದ ಶೇಕಡಾ 42 ಕ್ಕೆ ಏರಿಕೆಯಾಗಿದೆ ಎಂದು ತಿಳಿದುಬಂದಿದೆ.

ತುಟ್ಟಿಭತ್ಯೆ ಹೆಚ್ಚಳವನ್ನು ಪೂರೈಸಲು ಕೇಂದ್ರವು 12,815 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿದೆ. ತುಟ್ಟಿಭತ್ಯೆ ಹೆಚ್ಚಳವನ್ನು ಜನವರಿ 1, 2023 ರಿಂದಲೇ ಜಾರಿಗೆ ಬರುವಂತೆ ಆದೇಶ ಹೊರಡಿಸಲಾಗಿದೆ ಎಂದು ಕೇಂದ್ರ ಸಚಿವ ಅನುರಾಗ್ ಠಾಕೂರ್ ಹೇಳಿದ್ದಾರೆ.

ಏರುತ್ತಿರುವ ಬೆಲೆಗಳನ್ನು ಸರಿದೂಗಿಸಲು ಸರ್ಕಾರವು ತನ್ನ ಉದ್ಯೋಗಿಗಳಿಗೆ ಡಿಎ ಮತ್ತು ಪಿಂಚಣಿದಾರರಿಗೆ ತುಟ್ಟಿಭತ್ಯೆ ನೀಡುತ್ತದೆ. ಕೈಗಾರಿಕಾ ಕಾರ್ಮಿಕರ ಅಥವಾ CPI-IWಗಾಗಿ ಇತ್ತೀಚಿನ ಗ್ರಾಹಕ ಬೆಲೆ ಸೂಚ್ಯಂಕವನ್ನು ಆಧರಿಸಿ ಇದನ್ನು ಲೆಕ್ಕಹಾಕಲಾಗುತ್ತದೆ. ಇದು ಸುಮಾರು 47.58 ಲಕ್ಷ ಕೇಂದ್ರ ಸರ್ಕಾರಿ ನೌಕರರು ಮತ್ತು 69.76 ಲಕ್ಷ ಪಿಂಚಣಿದಾರರಿಗೆ ಪ್ರಯೋಜನವನ್ನು ನೀಡುತ್ತದೆ. ಈ ಹೆಚ್ಚಳವು 7ನೇ ಕೇಂದ್ರ ವೇತನ ಆಯೋಗದ ಶಿಫಾರಸುಗಳನ್ನು ಆಧರಿಸಿದ ಅಂಗೀಕೃತ ಸೂತ್ರಕ್ಕೆ ಅನುಗುಣವಾಗಿದೆ" ಎಂದು ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.

ಉಜ್ವಲ ಯೋಜನೆಯ ಫಲಾನುಭವಿಗಳಿಗೆ ವಾರ್ಷಿಕ 12 ಸಿಲಿಂಡರ್‌ಗೆ ತಲಾ ರೂ 200 ಸಬ್ಸಿಡಿ

ನವದೆಹಲಿ: ಮಹತ್ವದ ಬೆಳವಣಿಗೆಯಲ್ಲಿ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ವಾರ್ಷಿಕವಾಗಿ 12 ರೀಫಿಲ್‌ಗಳಿಗೆ ಪ್ರತಿ ಸಿಲಿಂಡರ್‌ಗೆ ರೂ 200 ಸಬ್ಸಿಡಿ ನೀಡಲು ಕೇಂದ್ರ ಸಂಪುಟ ಅನುಮೋದನೆ ನೀಡಿದೆ.

ಪ್ರಧಾನ ಮಂತ್ರಿ ಉಜ್ವಲ ಯೋಜನೆಯ (ಪಿಎಂಯುವೈ) ಫಲಾನುಭವಿಗಳಿಗೆ ಕೇಂದ್ರ ಸಚಿವ ಸಂಪುಟವು ಶುಕ್ರವಾರ 14.2 ಕೆಜಿ ಸಿಲಿಂಡರ್‌ಗೆ ವರ್ಷಕ್ಕೆ 12 ರೀಫಿಲ್‌ಗಳಿಗೆ ತಲಾ 200 ರೂ ಸಬ್ಸಿಡಿ ನೀಡಿಕೆಗೆ ಅನುಮೋದನೆ ನೀಡಿದೆ. ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿಯ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರವನ್ನು ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್ ಅವರು ಮಾಧ್ಯಮಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಮಾರ್ಚ್ 1, 2023 ರವರೆಗೆ ಈ ಯೋಜನೆಯು 9.59 ಕೋಟಿ ಫಲಾನುಭವಿಗಳಿದ್ದಾರೆ. 2022–23ರ ಹಣಕಾಸು ವರ್ಷದಲ್ಲಿ ಒಟ್ಟು ವೆಚ್ಚ 6,100 ಕೋಟಿ ರೂ. ಮತ್ತು 2023–24ಕ್ಕೆ 7,680 ಕೋಟಿ ರೂ ವೆಚ್ಚವಾಗಿದೆ. ಸಹಾಯಧನವನ್ನು ಅರ್ಹ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುತ್ತದೆ.

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಸರ್ವೆ ನಂ. 124, ಯಡಪುರ ಗ್ರಾಮ, ಕಸಬಾ ಹೋಬಳಿ, ಚಾಮರಾಜನಗರ–571 313

ಸಂಖ್ಯೆ: ಸಿಮ್ಸ್/ಟೆಂಡರ್/55/56/2022–23 ದಿನಾಂಕ: 23–03–2023

ಟೆಂಡರ್ ಅಧಿಸೂಚನೆ

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳಿಗೆ ಅಗತ್ಯವಿರುವ ವಿವಿಧ ಪರಿಕರಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಲಾಗುತ್ತಿದ್ದು, ಸದರಿ ಟೆಂಡರ್‌ಗಳ ವಿವರ ಕೆಳಕಂಡಂತಿರುತ್ತದೆ.

1) ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಹೊರಗುತ್ತಿಗೆ ಆಧಾರದಲ್ಲಿ ಎರಡು ಲಘು ವಾಹನ ಸೇವೆಯನ್ನು ಪಡೆಯಲು ಇ–ಟೆಂಡರ್ **(CIMS/Tender/Vehicle/55/2022-23)**, ಅಂದಾಜು ಮೊತ್ತ ರೂ. 9,60,000/–, ಇಎಂಡಿ ಮೊತ್ತ ರೂ. 24,000/–, ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 24–03–2023, ಬೆಳಿಗ್ಗೆ 10.00 ಗಂಟೆ ಹಾಗೂ ಕೊನೆಯ ದಿನಾಂಕ: 13–04–2023 ಸಂಜೆ 5.30 ಗಂಟೆ; ಮತ್ತು

2) ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಎಸ್‌ಸಿಪಿ / ಟಿಎಸ್‌ಪಿ ಯೋಜನೆಯಡಿಯಲ್ಲಿ ಪುಸ್ತಕಗಳ ಖರೀದಿಗಾಗಿ ಇ–ಟೆಂಡರ್ **(CIMS/Tender/SCST/Books/56/2022-23)**. ಅಂದಾಜು ಮೊತ್ತ ರೂ. 16.09 ಲಕ್ಷಗಳು, ಇಎಂಡಿ ಮೊತ್ತ ರೂ. 40,233/–, ಟೆಂಡರ್ ಸಲ್ಲಿಸಲು ಪ್ರಾರಂಭ ದಿನಾಂಕ: 24–03–2023, ಬೆಳಿಗ್ಗೆ 10.00 ಗಂಟೆ ಹಾಗೂ ಕೊನೆಯ ದಿನಾಂಕ: 13–04–2023 ಸಂಜೆ 5.30 ಗಂಟೆ.

ಹೆಚ್ಚಿನ ಮಾಹಿತಿಗಾಗಿ **www.eproc.karnataka.gov.in** ನಲ್ಲಿ ಸಂದರ್ಶಿಸುವುದು ಅಥವಾ ಕರ್ತವ್ಯದ ದಿನಗಳಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ: 5.00 ಗಂಟೆಯವರೆಗೆ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ಸಹಿ/– ನಿರ್ದೇಶಕರು ಹಾಗೂ ಡೀನ್
ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಚಾಮರಾಜನಗರ

ವಾ.ಸಾ.ಸಂ.ಇ/ಚಾ.ನಗರ 699/2022–23

ಕರ್ನಾಟಕ ಸರ್ಕಾರ

ಪುರಸಭಾ ಕಾರ್ಯಾಲಯ, ಹೆಚ್.ಡಿ.ಕೋಟೆ, ಮೈಸೂರು ಜಿಲ್ಲೆ

www.hdkotetown.mrc.gov.in Email Id: itstaff_ulb_hdkote@yahoo.com

Ph: 08228-255307

ಪುಸ:ಹೆಚ್.ಡಿ.ಕೋ:15ನೇ.ಹ.ಕಾ.ಯೋ/ಟ್ರಾಕ್ಟರ್–ಟ್ರೇಲರ್/ಸಿ.ಆರ್–37/2022–23 ದಿನಾಂಕ: 20.03.2023

ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಹೆಚ್.ಡಿ.ಕೋಟೆ ಪುರಸಭೆಯ ಘನತ್ಯಾಜ್ಯ ವಿಲೇವಾರಿ ಯೋಜನೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಾಹನ ಸರಬರಾಜು ಮಾಡಲು ಟೆಂಡರ್ ಆಹ್ವಾನಿಸಲಾಗಿದ್ದು. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿ: 15.04.2023 ಸಂಜೆ 5.30 ರವರೆಗೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ತೆರೆಯುವ ದಿ: 17.04.2023 ಬೆಳಿಗ್ಗೆ 11.30 (ಸಾಧ್ಯವಾಗದಿದ್ದಲ್ಲಿ ಮುಂದಿನ ದಿನಾಂಕ ತಿಳಿಸಿ ಟೆಂಡರ್ ಬಿಡ್‌ಗಳನ್ನು ತೆರೆಯಲಾಗುವುದು). ಹೆಚ್ಚಿನ ಮಾಹಿತಿಗಾಗಿ http://eproc. karnataka.gov.in ನಲ್ಲಿ ಲಾಗಿನ್ ಆಗಿ ಪಡೆಯಬಹುದಾಗಿದೆ.

ಕ್ರ.ಸಂ.1 ಕಾಮಗಾರಿಯ ಹೆಸರು: ಹೆಚ್.ಡಿ.ಕೋಟೆ ಪುರಸಭೆಯ ಘನತ್ಯಾಜ್ಯ ವಿಲೇವಾರಿಗೆ ಟ್ರಾಕ್ಟರ್ (40 ಹೆಚ್.ಪಿ) ವಿತ್ ಟ್ರೇಲರ್ ಸರಬಾಜು ಮಾಡುವ ಕಾಮಗಾರಿ Indent No:DMA/2022-23/IND15179 **ಅಂದಾಜು ಮೊತ್ತ** (ಲಕ್ಷಗಳಲ್ಲಿ): 10,87,778/– **ಮುಂಗಡ ಠೇವಣಿ ರೂ.ಗಳಲ್ಲಿ:** 27,500/– **ಟೆಂಡರ್ ದಸ್ತಾವೇಜಿನ ಬೆಲೆ:** ಇ–ಪ್ರೋಕ್ಯೂರ್‌ಮೆಂಟ್ ಪ್ರಕಾರ.

ಸಹಿ/– ಅಧ್ಯಕ್ಷರು ಪುರಸಭೆ, ಹೆಚ್.ಡಿ.ಕೋಟೆ	ಸಹಿ/– ಉಪಾಧ್ಯಕ್ಷರು ಪುರಸಭೆ, ಹೆಚ್.ಡಿ.ಕೋಟೆ	ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು ಪುರಸಭೆ, ಹೆಚ್.ಡಿ.ಕೋಟೆ	ಸಹಿ/– ಮುಖ್ಯಾಧಿಕಾರಿ ಪುರಸಭೆ, ಹೆಚ್.ಡಿ.ಕೋಟೆ

DIPR/DDMYS/KSMCA/1238/2022-23

ಮೈಸೂರು ಮಿತ್ರ ಶನಿವಾರ 25 ಮಾರ್ಚ್ 2023

ವಿ.ಪೇಟೆ: ವೈಭವದ ಮುತ್ತಪ್ಪ ದೇವಾಲಯದ ತೆರೆ ಮಹೋತ್ಸವ

ವಿರಾಜಪೇಟೆ, ಮಾ.24– ವಿರಾಜಪೇಟೆ ಪಟ್ಟಣದ ಮೀನುಪೇಟೆಯಲ್ಲಿರುವ 'ಚೈತನ್ಯ ಮಠ ಮರ ಶ್ರೀ ಮುತ್ತಪ್ಪ ದೇವಾಲಯದ 76ನೇ ವರ್ಷದ ತೆರೆ ಮಹೋತ್ಸವವು' ಶ್ರದ್ಧಾಭಕ್ತಿ ಮತ್ತು ವಿಜೃಂಭಣೆಯಿಂದ ನಡೆಯಿತು.



ಮಾ.22 ರಂದು ದೇವಾಲಯದಲ್ಲಿ ಶ್ರೀ ಮುತ್ತಪ್ಪ ವೇಳ್ಳಾಟಂ ನಂತರ ನಗರದ ತೆಲುಗರ ಬೀದಿಯಿಂದ ಹೊರಟ ಮೆರವಣಿಗೆಯಲ್ಲಿ ಮೊದಕಲಶ ತಾಲಪ್ಪೊಲಿ, ದೀಪದೊಂದಿಗೆ ನೃತ್ಯ, ಚಂಡೆ–ಮದ್ದಾಳೆ, ಮಹಿಳೆಯರು ಸೆಟ್ ಸ್ಯಾರಿ ಸಿಂಗಾರದೊಂದಿಗೆ ಜೈನರಬೀದಿ, ದೊಡ್ಡಟ್ಟಿಚೌಕಿ, ಗಡಿಯಾರ ಕಂಬದ ಬಳಿಯಿಂದ ಮಲಬಾರ್ ರಸ್ತೆಯಲ್ಲಿ ಸಾಗಿ ದೇವಾಲಯ ತಲುಪಿತು.

ಬಳಿಕ ರಾತ್ರಿ ವೇಳೆ ಕುಟ್ಟಿಚಾತನ್, ಗುಳಿಗ, ವಸೂರಿಮಾಲ, ಪೋಧಿ, ವಿಷ್ಣುಮೂರ್ತಿ ವೆಳ್ಳಾಟಂ ನಡೆದ ನಂತರ ಭಕ್ತಾದಿಗಳಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಇದಕ್ಕೂ ಮೊದಲು ಮಾ.21ರಂದು ಪ್ರಾತಃಕಾಲ ಗಣಪತಿ ಹೋಮ ನಂತರ ಧ್ವಜಾರೋಹಣ, ಮುತ್ತಪ್ಪ ವೆಳ್ಳಾಟಂ, ಅನ್ನಸಂತರ್ಪಣೆ ಬಳಿಕ ವೇದಿಕೆ ಕಾರ್ಯಕ್ರಮ ನಡೆಯಿತು. ಮಾ.23 ರಂದು ಪ್ರಾತಃಕಾಲ ಶಾಸ್ತಪ್ಪನ್ ಹಾಗೂ ಗುಳಿಗನ ಕೋಲ, ತಿರುವಪ್ಪನ್, ಭಗವತಿ [ಪೋದಿ], ವಸೂರಿಮಾಲ ತೆರೆ, ವಿಷ್ಣುಮೂರ್ತಿ ವಾರಣ ನಡೆಯಿತು.

ಈ ಸಂದರ್ಭ ದೇವಾಲಯ ಸಮಿತಿಯ ಆಡಳಿತ ಮಂಡಳಿಯ ಸದಸ್ಯರುಗಳು ಉಪಸ್ಥಿತರಿದ್ದರು. ಶ್ರೀ ಮುತ್ತಪ್ಪ ತೆರೆ ಮಹೋತ್ಸವದಲ್ಲಿ ನಗರ ಹಾಗೂ ಗ್ರಾಮೀಣ ಭಾಗದಿಂದಲೂ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ನೆರೆದಿದ್ದರು.

ಕುಶಾಲನಗರ ಪುರಸಭೆಯಲ್ಲಿ 25.56 ಲಕ್ಷ ರೂ. ಉಳಿತಾಯ ಬಜೆಟ್ ಮಂಡನೆ

ಕುಶಾಲನಗರ, ಮಾ.24– ಪುರಸಭೆ ವ್ಯಾಪ್ತಿಯ ಎಲ್ಲಾ ಬಡಾವಣೆಗಳ ಸಮಗ್ರ ಅಭಿವೃದ್ಧಿಯೊಂದಿಗೆ ವಿಶೇಷ ಯೋಜನೆಗಳನ್ನು ರೂಪಿಸುವ ಸಲುವಾಗಿ ಅಧ್ಯಕ್ಷ ಬಿ.ಜೈವರ್ಧನ್ 2023–24ನೇ ಸಾಲಿನ 25.56 ಲಕ್ಷರೂ. ಉಳಿತಾಯ ಬಜೆಟ್ ಮಂಡಿಸುವ ಮೂಲಕ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.



ಪಟ್ಟಣದ ಅಯ್ಯಪ್ಪ ಸ್ವಾಮಿ ದೇವಸ್ಥಾನ ರಸ್ತೆಯಲ್ಲಿರುವ ಪುರಸಭಾ ಸಭಾಂಗಣದಲ್ಲಿ ಅಧ್ಯಕ್ಷ ಜೈವರ್ಧನ್ ಪ್ರಸಕ್ತ ಸಾಲಿನ ಆಯವ್ಯಯವನ್ನು ಮಂಡಿಸಿದರು.

ರಾಜಸ್ವ ಸ್ವೀಕೃತಿ ರೂ.72,205,000, ಬಂಡವಾಳ ಸ್ವೀಕೃತಿ ರೂ.45,00,0000, ಅಸಾಧಾರಣ ಸ್ವೀಕೃತಿಗಳಿಂದ ರೂ.35,640,000 ನಿರೀಕ್ಷಿಸಲಾಗಿದೆ. ಅದೇ ರೀತಿ ರಾಜಸ್ವ ಪಾವತಿ ರೂ.58,510,000, ಬಂಡವಾಳ ಪಾವತಿಗಳು ರೂ.11,75,00,000 ಹಾಗೂ ಅಸಾಧಾರಣ ಪಾವತಿಗಳು ರೂ.60,790,000 ಆಗಿದ್ದು, ರೂ.25,56,928 ಉಳಿತಾಯವಾಗಿದೆ ಎಂದು ಸಭೆಗೆ ತಿಳಿಸಿದರು.


ಪುರಸಭೆ ವ್ಯಾಪ್ತಿಯ ಉದ್ಯಾನಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿ ಪಡಿಸಲು ಬಜೆಟ್ ವಿಶೇಷ ಅನುದಾನ ವನ್ನು ಕಾಯ್ದಿರಿಸಲಾಗಿದೆ. ಹೊಸ ಕ್ರೀಡಾಂಗಣ ನಿರ್ಮಾಣಕ್ಕೆ ರೂ.50 ಲಕ್ಷ, ಪಾರ್ಕ್‌ಗಳ ಅಭಿವೃದ್ಧಿಗೆ ರೂ.25 ಲಕ್ಷ, ಬೀದಿ ದೀಪಗಳ ನಿರ್ವಹಣೆ ಹಾಗೂ ವಿದ್ಯುತ್ ವೆಚ್ಚಕ್ಕಾಗಿ ರೂ.34.50,000, ಸಾರ್ವಜನಿಕ ಆರೋಗ್ಯದಡಿ ನಾಯಿ, ಕೋತಿಗಳ ನಿಯಂತ್ರಣಕ್ಕೆ ರೂ.2.5 ಲಕ್ಷ, ಸ್ವಚ್ಛ ಭಾರತ್ ಮಿಷನ್ ನಡಿ ಸಾರ್ವಜನಿಕ ಶೌಚಾಲಯಗಳ ದುರಸ್ತಿ ಮತ್ತು ನಿರ್ವಹಣೆಗೆ ರೂ.5 ಲಕ್ಷ, ಪರಿಶಿಷ್ಟ ಜಾತಿ, ಪಂಗಡದ, ಬಡಜನರಿಗಾಗಿ ಶವಸಂಸ್ಕಾರಕ್ಕೆ ರೂ.2.50,000, ನೈರ್ಮಲ್ಯ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆಗಾಗಿ ವೇತನ, ಯಂತ್ರೋಪಕರಣಗಳ ದುರಸ್ತಿ, ನಿರ್ವಹಣೆ, ಇಂಧನ ವೆಚ್ಚ ಇನ್ನಿತರ ಚಟುವಟಿಕೆಗಳಿಗಾಗಿ ರೂ.52,38,000 ಕುಡಿಯುವ ನೀರು ಸರಬರಾಜು, ವಿದ್ಯುತ್ ವೆಚ್ಚ, ದುರಸ್ತಿ ಮತ್ತು ನಿರ್ವಹಣೆಗಾಗಿ ರೂ.23,80,000 ರೂ.ಗಳನ್ನು ನಿಗದಿಪಡಿಸಲಾಗಿದೆ. ಪಪಂ ಸದಸ್ಯರಾದ ಡಿ.ಕೆ.ತಿಮ್ಮಪ್ಪ, ಬಿ.ಅಮೃತ್ ರಾಜ್, ಎಂ.ವಿ.ನಾರಾಯಣ್,ಕೆ.ಜಿ.ಮನು ಮಾತನಾಡಿ, ಅಧ್ಯಕ್ಷ ಜೈವರ್ಧನ್ ಅವರು ಮಂಡಿಸಿರುವ ಬಜೆಟ್ ಅಭಿವೃದ್ಧಿ ಪರವಾಗಿದೆ. ಪಟ್ಟಣ ಸಮಗ್ರ ಅಭಿವೃದ್ಧಿ ದೃಷ್ಟಿಕೋನದಲ್ಲಿ ಬಜೆಟ್ ಮಂಡಿಸಲಾಗಿದೆ ಎಂದು ಹೇಳಿದರು.

ಕಾಂಗ್ರೆಸ್ ವಿಪಕ್ಷ ನಾಯಕ ಪ್ರಮೋದ್ ಮುತ್ತಪ್ಪ ಮಾತನಾಡಿ, ಪುರಸಭೆ ವಾಣಿಜ್ಯ ಸಂಕೀರ್ಣ ಕಾಮಗಾರಿ ಪೂರ್ಣಗೊಳ್ಳದಿದ್ದರೂ ತರಾತುರಿಯಲ್ಲಿ ಶಾಸಕರಿಂದ ಉದ್ಘಾಟನೆ ಮಾಡಿರುವ ಕ್ರಮ ಖಂಡಿಸಿದರು.

ಜೆಡಿಎಸ್ ಸದಸ್ಯ ವಿ.ಎಸ್.ಆನಂದ್ ಕುಮಾರ್ ಮಾತನಾಡಿ, ಈ ಬಾರಿಯ ಬಜೆಟ್ ಜನರ ನಿರೀಕ್ಷೆಯನ್ನು ಹುಸಿಗೊಳಿಸಿದೆ.ಕಳೆದ ಬಾರಿ ಯೋಜನೆಗಳನ್ನು ಮತ್ತೆ ಪುನರ್ ವರ್ತಿಸಲಾಗಿದೆ. ಈ ಬಜೆಟ್ ನಿರಾಶಾದಾಯಕ ಬಜೆಟ್ ಆಗಿದೆ ಎಂದು ಟೀಕಿಸಿದರು. ಸಭೆಯಲ್ಲಿ ಪುರಸಭೆ ಉಪಾಧ್ಯಕ್ಷೆ ಸುರೇಯಾಬಾನು, ಮುಖ್ಯಾಧಿಕಾರಿ ಶಿವಪ್ಪನಾಯಕ್, ಎಂಜಿನಿಯರ್ ರಂಗರಾಮ್, ಆರೋಗ್ಯ ನಿರೀಕ್ಷಕ ಉದಯ್, ಸಿಬ್ಬಂದಿಗಳಾದ ಶಕೀಲ್, ನಂಜುಂಡ ಇದ್ದರು.

ವಾಸದ ಮನೆಯ ಹಿಂಭಾಗದಲ್ಲಿ ಬೀಡು ಬಿಟ್ಟಿದ್ದ ಹಾವು, ಮೊಟ್ಟೆಗಳ ಸಂರಕ್ಷಣೆ

ಸುಂಟಿಕೊಪ್ಪ, ಮಾ.24– ವಾಸದ ಮನೆಯ ಹಿಂಭಾಗದಲ್ಲಿ ಕಳೆದ 9 ತಿಂಗಳ ಹಿಂದೆ ಉರಗವೊಂದು ಬೀಡು ಬಿಟ್ಟಿದ್ದು ಉರಗ ತಜ್ಞ ಪ್ರವೀಣ್ ಅವರು ಹಾವು ಮತ್ತು ಮೊಟ್ಟೆಗಳನ್ನು ಸಂರಕ್ಷಿಸಿದ್ದಾರೆ.



ನಾಕೂರು ಶಿರಂಗಾಲ ಗ್ರಾಮದ ಪೂವಯ್ಯ ಕಾಲೋನಿಯ ನಿವಾಸಿ ಲೀಲಾಶಿ ಎಂಬವರ ಮನೆಯ ಹಿಂಭಾಗದಲ್ಲಿ 5 ಅಡಿ ಉದ್ದದ ನಾಗರ ಹಾವೊಂದು ಕಳೆದ 9 ತಿಂಗಳಿನಿಂದ ಕಂಡು ಬರುತ್ತಿತ್ತಲ್ಲದೇ ಉರಗ ಈ ಸ್ಥಳದಲ್ಲಿಯೇ ಮೊಟ್ಟೆಯೊಂದಿಗೆ ಬೀಡು ಬಿಟ್ಟಿತ್ತು ಇದನ್ನು ಅರಿತ ಮನೆಯ ಮಾಲೀಕ ಹೊಸಕೋಟೆಯ ಉರಗ ತಜ್ಞ ಪ್ರವೀಣ್ ಎಂಬುವರ ಗಮನಕ್ಕೆ ತಂದಿದ್ದಾರೆ. ಸ್ಥಳಕ್ಕೆ ಆಗಮಿಸಿದ್ದ ಪ್ರವೀಣ್ 26 ಮೊಟ್ಟೆ ಮತ್ತು ನಾಗರಹಾವನ್ನು ಸೆರೆ ಹಿಡಿಯುವ ಮೂಲಕ ಉರಗವನ್ನು ಸಂರಕ್ಷಿಸಿದ್ದಾರೆ.

ಶಾಲೆಯ ಬೀಗ ಮುರಿದು ದುಷ್ಕರ್ಮಿಗಳಿಂದ ಮೋಜು–ಮಸ್ತಿ

ಮಡಿಕೇರಿ, ಮಾ.24– ಶಾಲೆಯ ಬೀಗ ಒಡೆದು ಒಳ ನುಗ್ಗಿದ ದುಷ್ಕರ್ಮಿಗಳು ಮೋಜು ಮಸ್ತಿಯೊಂದಿಗೆ ಅನೈತಿಕ ಚಟುವಟಿಕೆ ನಡೆಸಿ ಪರಾರಿಯಾಗಿರುವ ಘಟನೆ ನಾಪೋಕ್ಲುವಿನಲ್ಲಿ ನಡೆದಿದೆ.

ನಾಪೋಕ್ಲು ಹಳೇ ತಾಲೂಕು ಮುಖ್ಯ ರಸ್ತೆಯಲ್ಲಿರುವ ಕರ್ನಾಟಕ ಪ್ರಾಥಮಿಕ ಪಬ್ಲಿಕ್ ಶಾಲೆಯ ಕೊಠಡಿಯ ಬೀಗ ಹೊಡೆದು ಒಳನುಗ್ಗಿದ ಕಿಡಿಗೇಡಿಗಳು ಅನೈತಿಕ ಚಟುವಟಿಕೆ ನಡೆಸಿದ ಕುರುಹುಗಳು ಪತ್ತೆಯಾಗಿದೆ. ಬೆಳಗ್ಗೆ ಮಕ್ಕಳು ಶಾಲೆಗೆ ಬಂದಾಗ ಶಾಲೆಯ ಒಳಾಂಗಣದ ಕೊಠಡಿಯ ಬೀಗ ಒಡೆದಿರುವುದು ಗೋಚರಿಸಿದೆ. ಈ ಬಗ್ಗೆ ಮಕ್ಕಳು ಶಿಕ್ಷಕರಿಗೆ ಮಾಹಿತಿ ನೀಡಿದ್ದು, ಶಿಕ್ಷಕರು ಪರಿಶೀಲಿಸಿದಾಗ ಶಾಲೆಯ ಮೇಲ್ಛಾವಣಿಯಲ್ಲಿ ಮಹಿಳೆ ಮತ್ತು ಗಂಡಸರ ಬಟ್ಟೆಗಳು ಹಾಗೂ ಧೂಮಪಾನ ಮಾಡಿ ಬಿಸಾಡಿದ ಸಿಗರೇಟ್ ತುಂಡುಗಳು ಪತ್ತೆಯಾಗಿದೆ.

ಘಟನೆ ಸಂಬಂಧ ಶಾಲೆಯ ಮುಖ್ಯೋಪಾಧ್ಯಾಯರು ನಾಪೋಕ್ಲು ಠಾಣೆಗೆ ದೂರು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಆಗಮಿಸಿದ ಠಾಣಾಧಿಕಾರಿ ಮಂಜುನಾಥ್ ಹಾಗೂ ಸಿಬ್ಬಂದಿಗಳು ಪರಿಶೀಲನೆ ನಡೆಸಿ ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಈ ಸಂದರ್ಭ ಶಾಲೆಯ ಮುಖ್ಯಶಿಕ್ಷಕಿ ಚಂದ್ರಕಲಾ, ಶಾಲೆಯ ಪ್ರೌಢಶಾಲಾ ವಿಭಾಗದ ಪ್ರಭಾರ ಉಪ ಪ್ರಾಂಶುಪಾಲ ಎನ್.ಎಸ್. ಶಿವಣ್ಣ, ಆಡಳಿತ ಮಂಡಳಿ ಸದಸ್ಯ ರಾಜೇಶ್, ಶಾಲೆಯ ಶಿಕ್ಷಕರು ಮತ್ತಿತರು ಹಾಜರಿದ್ದರು.



ಹಾರಂಗಿಯಲ್ಲಿ ಅಕ್ರಮ ಮದ್ಯ ಮಾರಾಟ: ವ್ಯಕ್ತಿ ಬಂಧನ

ಕುಶಾಲನಗರ, ಮಾ.24– ಸಮೀಪದ ಕೂಡು ಮಂಗಳೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಹಾರಂಗಿ(ಹುಲುಗುಂದ) ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಅಬಕಾರಿ ಇಲಾಖೆ ಸಿಬ್ಬಂದಿ ಬಂಧಿಸಿ ಮಾಲು ವಶ ಪಡಿಸಿಕೊಂಡಿರುವ ಘಟನೆ ಶುಕ್ರವಾರ ನಡೆದಿದೆ. ಹಾರಂಗಿ (ಹುಲುಗುಂದ)ಗ್ರಾಮದ ನಿವಾಸಿ ಲೇಟ್ ಈಶ್ವರ ಎಂಬುವರ ಪುತ್ರ ಸತ್ಯಕುಮಾರ್ ಬಂಧಿತ ಆರೋಪಿ. ಈತನ ಮನೆಯ ಮೇಲೆ ಸೋಮವಾರಪೇಟೆ ವಿಭಾಗದ ಅಬಕಾರಿ ಉಪ ಅಧೀಕ್ಷಕಿ ಆರ್.ಎಂ.ಚೈತ್ರಾ ನೇತೃತ್ವದಲ್ಲಿ ದಾಳಿ ಮಾಡಿದ ಸಿಬ್ಬಂದಿಗಳು ಅಕ್ರಮವಾಗಿ ಮಾರಾಟಕ್ಕೆ ಇಟ್ಟಿದ್ದ 3,060 ಲೀ. ಮದ್ಯವನ್ನು ವಶಪಡಿಸಿಕೊಂಡು ಆರೋಪಿ ಸತ್ಯ ಕುಮಾರ್ ವಿರುದ್ಧ ಕೇಸು ದಾಖಲಿಸಿಕೊಂಡು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಅಬಕಾರಿ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಮಾ.27ಕ್ಕೆ, ಸಾವಿರಾರು ಬೆಂಬಲಿಗರ ಸಮ್ಮುಖದಲ್ಲಿ 'ಕೈ' ಸೇರ್ಪಡೆ

ಜೆಡಿಎಸ್ ಹಿರಿಯ ನಾಯಕ ಬಿ.ಎಲ್.ದೇವರಾಜು ಘೋಷಣೆ



> ಜೆಡಿಎಸ್‌ನಲ್ಲಿ ಪಕ್ಷಕ್ಕಾಗಿ ದುಡಿದವರಿಗೆ ಬೆಲೆ ಇಲ್ಲ. ಬದಲಾಗಿ ಹಣಬಲ ಇದ್ದವರಿಗೆ ಮಾತ್ರ ಬೆಲೆ. ಕಳೆದ 43 ವರ್ಷಗಳಿಂದ ಪಕ್ಷಕ್ಕಾಗಿ ನಿಷ್ಠೆಯಿಂದ ದುಡಿದ ನನಗೆ ಟಿಕೆಟ್ ನೀಡದೇ, ಇತ್ತೀಚಿನ ವರ್ಷಗಳಲ್ಲಿ ಬಂದ ಹೆಚ್.ಟಿ.ಮಂಜುಗೆ ಟಿಕೆಟ್ ನೀಡುತ್ತಾರೆಂದರೆ ಪಕ್ಷದಲ್ಲಿ ಹಿರಿಯರಿಗೆ ಯಾವುದೇ ಬೆಲೆ ಇಲ್ಲದಂತಾಗಿದೆ. ಕಳೆದ ಉಪ ಚುನಾವಣೆಯಲ್ಲಿ ಕೇವಲ 4 ಸಾವಿರ ಅಂತರದಲ್ಲಿ ಸೋಲು ಅನುಭವಿಸಿದ್ದೆ. ಈ ಬಾರಿ ಸುಲಭವಾಗಿ ಗೆಲ್ಲುವ ಅವಕಾಶವಿತ್ತು. ಆದರೆ ಜೆಡಿಎಸ್ ವರಿಷ್ಠರು ಹಣಬಲವಿರುವ ಮಂಜುಗೆ ಮಣೆ ಹಾಕುವ ಮೂಲಕ ಚುನಾವಣೆಗೂ ಮುನ್ನವೇ ಪಕ್ಷವನ್ನು ಸೋಲಿನ ಸುಳಿಗೆ ತಳ್ಳಿದ್ದಾರೆ.
>
> - ಬಿ.ಎಲ್.ದೇವರಾಜು, *ಹಿರಿಯ ಜೆಡಿಎಸ್ ಮುಖಂಡ.*

ಕೆ.ಆರ್.ಪೇಟೆ, ಮಾ.24– ಜೆಡಿಎಸ್‌ನಲ್ಲಿ ಪ್ರಾಮಾಣಿಕರಿಗೆ, ನಿಷ್ಠಾವಂತರಿಗೆ ಬೆಲೆ ಇಲ್ಲದಂತಾಗಿದೆ. ಹೀಗಾಗಿ ಮಾ.27ರಂದು ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಅಧ್ಯಕ್ಷ ಡಿ.ಕೆ.ಶಿವ ಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ, ಹಿರಿಯ ನಾಯಕರಾದ ರೆಹಮಾನ್ ಖಾನ್ ಹಾಗೂ ಎನ್. ಚೆಲುವರಾಯಸ್ವಾಮಿ ಸೇರಿದಂತೆ ಸಾವಿರಾರು ಬೆಂಬಲಿಗರ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದೇನೆ ಎಂದು ಜೆಡಿಎಸ್ ಹಿರಿಯ ನಾಯಕ ಬಿ.ಎಲ್.ದೇವರಾಜು ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಮ್ಮ ಬೆಂಬಲಿಗರು ಹಾಗೂ ಹಿತೈಷಿಗಳ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸೇರ್ಪಡೆಯಾಗುವ ಮೂಲಕ ಮಾಜಿ ಪ್ರಧಾನಿ ದೇವೇಗೌಡರ 40 ವರ್ಷಗಳ ಸಂಬಂಧವನ್ನು ಕಡಿದುಕೊಳ್ಳುವುದಾಗಿ ತಿಳಿಸಿದರು.

ಪ್ರಸ್ತುತ ಜೆಡಿಎಸ್‌ನಲ್ಲಿ ಪಕ್ಷಕ್ಕೆ ಮತ ಹಾಕಿಸುವ ಹಿರಿಯ ಮುಖಂಡರಿಲ್ಲ. ಜೆಡಿಎಸ್ ವರಿಷ್ಠರಿಗೆ ತಾಲೂಕಿನಲ್ಲಿ ಪಕ್ಷ ಉಳಿಸುವ ಮನಸ್ಸಿಲ್ಲ. ಇದ್ದಿದ್ದರೇ 3 ಸಭೆ ನಡೆಸಿದ ನಮ್ಮನ್ನು ಕಡೆಗಣಿಸುತ್ತಿರಲಿಲ್ಲ. ಹೆಚ್.ಟಿ.ಮಂಜು 2018ರಲ್ಲಿ ನಾರಾಯಣಗೌಡರಿಗೆ ಬಿ.ಫಾರಂ ಕೈ ತಪ್ಪಿದಾಗ ದೇವೇಗೌಡರ ಫೋಟೋ ಸುಟ್ಟು, ಕಾಲಲ್ಲಿ ಒದ್ದು ಅವಮಾನ ಮಾಡಿದ. ಅಂತಹವರಿಗೆ ಪಕ್ಷದ ಬಿ.ಫಾರಂ ಸಿಗುತ್ತದೆ. ದೇವೇಗೌಡರೇ ನನ್ನ ರಾಜಕೀಯ ಗುರು ಎಂದು ಅವರನ್ನು ಕಳೆದ 40 ವರ್ಷಗಳಿಂದ ಪೂಜಿಸುತ್ತಿರುವ ನನ್ನಂತಹ ಪ್ರಾಮಾಣಿಕನಿಗೆ ಟಿಕೆಟ್ ಸಿಗಲ್ಲ. ಸಿಎಂ ಆಗಿದ್ದ ಕುಮಾರಸ್ವಾಮಿ ಸರ್ಕಾರವನ್ನು ಬೀಳಿಸಿದ ನಾರಾಯಣಗೌರನ್ನು ಉಪಚುನಾವಣೆಯಲ್ಲಿ ಸೋಲಿಸುವ ಬದಲು ಕೊನೆ ದಿನ ಬಹಿರಂಗ ಪ್ರಚಾರಕ್ಕೆ ಬಾರದೇ, ನನ್ನ ಸೋಲಿಗೆ, ನಾರಾಯಣಗೌಡರ ಗೆಲುವಿಗೆ ಮಂಜು ಕಾರಣರಾದರು. ಹೀಗಾಗಿ ಈ ಎಲ್ಲಾ ಘಟನೆಗಳಿಂದ ಮನನೊಂದು ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ಬೇಡಿಕೆ ಇಲ್ಲದೇ ಸೇರ್ಪಡೆಯಾಗುತ್ತಿದ್ದೇನೆ. ಪ್ರಸ್ತುತ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ ಕಾಂಗ್ರೆಸ್ ಪರ ಅಲೆ ಇದ್ದು, ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್ ಮಾತನಾಡಿ, ಜೆಡಿಎಸ್ ಹಿರಿಯ ಮುಖಂಡ ಬಿ.ಎಲ್.ದೇವರಾಜು ಕಾಂಗ್ರೆಸ್ ಸೇರ್ಪಡೆಗೊಳ್ಳುತ್ತಿರುವುದು ಪಕ್ಷಕ್ಕೆ ಆನೆ ಬಲಬಂದಂತಾಗಿದೆ ಎಂದರು. ಇದೇ ವೇಳೆ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್, ಮಾಜಿ ಶಾಸಕ ಬಿ.ಪ್ರಕಾಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರೇಶ್, ನಾಗೇಂದ್ರ ಕುಮಾರ್, ಹಿರಿಯ ಮುಖಂಡ ಎಂ.ಡಿ.ಕೃಷ್ಣಮೂರ್ತಿ, ಬಿ.ಎಲ್ ದೇವರಾಜು ಕೈ ಮೇಲ ಕೈತ್ತುವ ಮೂಲಕ ಒಗ್ಗಟ್ಟು ಪ್ರದರ್ಶಿಸಿದರು.

ಈ ವೇಳೆ ಹಿರಿಯ ಮುಖಂಡರಾದ ಬಸ್ ಕೃಷ್ಣೇಗೌಡ, ಸುಬ್ಬೇಗೌಡ, ಬಿಸಿಎಂ ಈರಪ್ಪಗೌಡ, ಜಿಪ ಮಾಜಿ ಸದಸ್ಯ ರಾಮದಾಸ್, ಟಿಎಪಿಸಿಎಂಎಸ್ ನಿರ್ದೇಶಕ ಸಂಗಾಪುರ, ಎಪಿಎಂಸಿ ಮಾಜಿ ಅಧ್ಯಕ್ಷ ಅಶೋಕ್, ಅಶೋಕ್, ಪಠಾಣ್ ಬಾಬು, ಎ. ರಾಜು, ಪವನ್, ರಂಗರಾಜು, ಲೋಕೇಶ್, ಶಿವಕುಮಾರ್, ವಕೀಲರಾದ ಎಂ.ಎಲ್.ಸುರೇಶ್, ಪಾಂಡು, ಯೋಗೇಶ್, ಪ್ರಭಾಕರ್, ಯೋಗೇಶ್ ಸೇರಿದಂತೆ ನೂರಾರು ಮಂದಿ ಸಭೆಯಲ್ಲಿದ್ದರು.

ಚುನಾವಣೆ ವೇಳೆ ನನ್ನ ವಿರುದ್ಧ ಎಲ್ಲಾ ಪಕ್ಷಗಳು ಒಂದಾಗುತ್ತವೆ

ಪಾಂಡವಪುರ, ಮಾ.24– ಚುನಾವಣೆ ವೇಳೆ ಕ್ಷೇತ್ರದಲ್ಲಿ ನನ್ನ ವಿರುದ್ಧ ಎಲ್ಲಾ ಪಕ್ಷಗಳು ಒಂದಾಗುತ್ತವೆ. 2004ರಿಂದಲೂ ಇದೇ ಪರಿಸ್ಥಿತಿಯಲ್ಲಿ ಚುನಾವಣೆ ಎದುರಿಸಿಕೊಂಡು ಬಂದಿದ್ದೇನೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ಗುಡುಗಿದರು.



ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ನಡೆದ ಪಾಂಡವಪುರ ಪಟ್ಟಣ ವ್ಯಾಪ್ತಿಯ ಜೆಡಿಎಸ್ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದ ಅವರು, ಕ್ಷೇತ್ರದ ರೈತ ಸಂಘದ ಅಭ್ಯರ್ಥಿಗೆ ಕಾಂಗ್ರೆಸ್ ಮತ್ತು ಬಿಜೆಪಿ ಬೆಂಬಲ ನೀಡಿ ತಮ್ಮ ಬೆಂಬಲಿತ ಅಭ್ಯರ್ಥಿಯನ್ನಾಗಿ ಮಾಡಿಕೊಳ್ಳಬೇಕು ಎಂಬ ಹುನ್ನಾರ ನಡೆಸುತ್ತಿವೆ. ಇದಕ್ಕೆಲ್ಲ ಪಕ್ಷದ ಕಾರ್ಯಕರ್ತರು, ಮುಖಂಡರು ತಲೆಕೆಡಿಸಿಕೊಳ್ಳಬಾರದು. ಕಳೆದ ಚುನಾವಣೆಯಲ್ಲಿ ಅನುಕಂಪದ ಅಲೆ ನಡುವೆಯೂ ನನ್ನನ್ನು ಅಧಿಕ ಮತಗಳ ಅಂತರದಿಂದ ಗೆಲ್ಲಿಸಿ ಇತಿಹಾಸ ನಿರ್ಮಿಸಿದ್ದೀರಿ. ಅದೇ ರೀತಿ ನಮ್ಮ ಪಕ್ಷದ ಕಾರ್ಯಕರ್ತರು ಪ್ರತಿ ಬೂತ್ ಮಟ್ಟದಲ್ಲಿ ಕೆಲಸ ಮಾಡುವ ಮೂಲಕ ಚುನಾವಣೆಯಲ್ಲಿ ಅಧಿಕ ಮತಗಳ ಅಂತರದಿಂದ ಗೆಲುವು ಸಾಧಿಸಲು ಸಹರಿಸಬೇಕೆಂದು ಮನವಿ ಮಾಡಿದರು.

ಶಾಸಕನಾಗಿ ನಾನು ಮಾಡಿರುವ ಅಭಿವೃದ್ಧಿ ಕಾರ್ಯಗಳು ಚುನಾವಣೆ ವೇಳೆ ನನ್ನ ಕೈ ಹಿಡಿಯಲಿವೆ. ಪಾಂಡವಪುರದ ಅಭಿವೃದ್ಧಿಗಾಗಿ 105.60 ಕೋಟಿ ಅನುದಾನವನ್ನು ಸರ್ಕಾರದಿಂದ ತಂದು ಅಭಿವೃದ್ಧಿ ಪಡಿಸಿದ್ದೇನೆ. ಪಟ್ಟಣದ ಜನತೆಗೆ ಅಗತ್ಯವಿರುವ ಎಲ್ಲಾ ರೀತಿಯ ಸೌಕರ್ಯ, ರಸ್ತೆ, ಕುಡಿಯುವ ನೀರು, ಮೂಲ ಸೌಕರ್ಯ ಒದಗಿಸಿ ಕೊಟ್ಟಿದ್ದೇನೆ. ಕಳೆದ 17 ವರ್ಷಗಳಿಂದ ನೆನೆಗುದಿಗೆ ಬಿದಿದ್ದ ಯುಜಿಡಿ ಸಮಸ್ಯೆ ಬಗೆಹರಿಸಿ ಬಗೆಹರಿಸಿ ರೈತರಿಗೆ ಭೂ ಪರಿಹಾರವನ್ನು ಪ್ರತಿ ಎಕರೆ 4 ಕೋಟಿ ಹಣ ಬಿಡುಡುಗೆ ಮಾಡಿಸಿದ್ದೇನೆ. ಮುಂದಿನ 25 ವರ್ಷಗಳವರೆಗೂ ಪಟ್ಟಣದ ಜನತೆಗೆ ಯುಜಿಡಿ ಸಮಸ್ಯೆಯಾಗದಂತೆ 24 ಕೋಟಿ ವೆಚ್ಚದಲ್ಲಿ ಯುಜಿಡಿ ಘಟಕ ನಿರ್ಮಾಣಕ್ಕೆ ಹಣ ಮಂಜೂರು ಮಾಡಿಸಿದ್ದು, ಹೊಸ ಟೆಕ್ನಾಲಜಿ ಮೂಲಕ ಕಾಮಗಾರಿ ನಡೆಯಲಿದೆ ಎಂದರು.

ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್ ಮಾತನಾಡಿದರು. ಇದಕ್ಕೂ ಮುನ್ನ ಅದ್ದೂರಿಯಾಗಿ ಪಟ್ಟಣದ ಐದುದೀಪ ವೃತ್ತದಿಂದ ವಿವಿಧ ರಸ್ತೆಗಳಲ್ಲಿ ಮೆರವಣಿಗೆ ಮಾಡುವ ಶಾಸಕ ಸಿ.ಎಸ್. ಪುಟ್ಟರಾಜು ಅವರನ್ನು ವೇದಿಕೆಗೆ ಕರೆತರಲಾಯಿತು.

ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಂ.ಸಿ.ಯಶವಂತ್ ಕುಮಾರ್, ಪುರಸಭಾಧ್ಯಕ್ಷೆ ಅರ್ಚನ ಚಂದ್ರು, ಉಪಾಧ್ಯಕ್ಷೆ ಶ್ವೇತ, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಮನ್‌ಮುಲ್ ಮಾಜಿ ಅಧ್ಯಕ್ಷ ವೈರಮುಡಿಗೌಡ, ಮುಖಂಡರಾದ ನಂಜೇಗೌಡ, ಲಿಂಗರಾಜು, ಸಗಾಯಂ, ಬಿ.ಎಸ್.ಜಯರಾಮು, ಸಮಿಯುಲ್ಲ ಸೇರಿದಂತೆ ಎಲ್ಲಾ ಪುರಸಭೆ ಸದಸ್ಯರು, ಮುಖಂಡರು, ಕಾರ್ಯಕರ್ತರು ಹಾಜರಿದ್ದರು.



ಸಂಸದರ ಅನುದಾನದಿಂದ 4 ಆಂಬುಲೆನ್ಸ್ ವಿತರಣೆ

ಮಂಡ್ಯ, ಮಾ.24– ಸಂಸದರ ಅನುದಾನದಡಿ 96 ಲಕ್ಷ ರೂ. ವೆಚ್ಚದಲ್ಲಿ 4 ಆಂಬುಲೆನ್ಸ್‌ಗಳನ್ನು ಸಂಸದೆ ಸುಮಲತಾ ಅಂಬರೀಷ್ ಶುಕ್ರವಾರ ಜಿಲ್ಲಾಧಿಕಾರಿ ಕಚೇರಿ ಎದುರು ಆರೋಗ್ಯ ಇಲಾಖೆಗೆ ಹಸ್ತಾಂತರಿಸಿದರು. ಈ ವೇಳೆ ಜಿಲ್ಲಾಧಿಕಾರಿ ಡಾ. ಹೆಚ್.ಎನ್. ಗೋಪಾಲಕೃಷ್ಣ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಟಿ. ಎನ್.ಧನಂಜಯ ಸೇರಿದಂತೆ ಇನ್ನಿತರರಿದ್ದರು.

ಅಮಚವಾಡಿ–ಚನ್ನಪ್ಪನಪುರದಲ್ಲಿ ಸೋಮಣ್ಣ ಗೋ ಬ್ಯಾಕ್ ಚಳವಳಿ

ಭರವಸೆ ಈಡೇರಿಸದಿದ್ದಕ್ಕೆ ಸಚಿವರ ವಿರುದ್ಧ ಗ್ರಾಮಸ್ಥರ ಆಕ್ರೋಶ

ಸೋಮಣ್ಣನವರ ವಿಶೇಷಾಧಿಕಾರಿ ಆಶ್ವಾಸನೆ ಮೇರೆಗೆ ಚಳವಳಿ ಕೈಬಿಟ್ಟ ಗ್ರಾಮಸ್ಥರು

ಚಾಮರಾಜನಗರ, ಮಾ.24– ತಾಲೂಕಿನ ಅಮಚವಾಡಿ– ಚನ್ನಪ್ಪನಪುರ ಗುಡ್ಡಮಠ ಶ್ರೀವೀರಭದ್ರಸ್ವಾಮಿ ದೇವಸ್ಥಾನ ಅಭಿವೃದ್ಧಿ ಹಾಗೂ ರಥ ನಿರ್ಮಿಸಲು ಜಿಲ್ಲಾ ಉಸ್ತುವಾರಿ ಸಚಿವ ಸೋಮಣ್ಣ ನೀಡಿದ ಭರವಸೆ ಈಡೇರಿಸುವಲ್ಲಿ ವಿಫಲರಾಗಿದ್ದಾರೆ ಎಂದು ಅಸಮಾಧಾನಗೊಂಡಿರುವ ಗ್ರಾಮಸ್ಥರು ಶ್ರೀ ವೀರಭದ್ರೇಶ್ವರ ದೇವಸ್ಥಾನದ ಅಭಿವೃದ್ಧಿ ಸೇವಾ ಸಮಿತಿಯ ನೇತೃತ್ವದಲ್ಲಿ ದೇವಸ್ಥಾನದ ಆವರಣದಲ್ಲಿ ಗೋ ಬ್ಯಾಕ್ ಸೋಮಣ್ಣ ಚಳವಳಿಯ ಸಭೆ ನಡೆಸಿದರು.



ಈ ವೇಳೆ ಎಲ್ಲಾ ಕೋಮಿನ ಉಪಾಧ್ಯಕ್ಷ ಮಹದೇವಸ್ವಾಮಿ ಗೋ ಬ್ಯಾಕ್ ಸೋಮಣ್ಣ ಎಂದು ನಾಲ್ಕು ಬಾರಿ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಚಿವ ವಿಶೇಷಾಧಿಕಾರಿ ಭೇಟಿ: ಗ್ರಾಮಸ್ಥರು ಸಭೆ ನಡೆಸುತ್ತಿರುವ ವಿಚಾರ ತಿಳಿದ ವಿ. ಸೋಮಣ್ಣ ಅಭಿಮಾನಿಗಳಾದ ಎಪಿಎಂಸಿ ಅಧ್ಯಕ್ಷ ಎಂ. ಮನೋಜ್ ಪಟೇಲ್, ತಾಪಂ ಮಾಜಿ ಉಪಾಧ್ಯಕ್ಷ ಪಿ.ಎನ್. ದಯಾನಿಧಿ, ಕೊತ್ತಲವಾಡಿ ಕುಮಾರ್ ಹಾಗೂ ಸಚಿವ ಸೋಮಣ್ಣ ಅವರ ವಿಶೇಷಾಧಿಕಾರಿ ಸ್ವಾಮಿ ಭೇಟಿ ನೀಡಿ ಶೀಘ್ರವೇ ಸಚಿವರನ್ನು ಕರೆತರುವ ಆಶ್ವಾಸನೆ ನೀಡಿದ ಮೇರೆಗೆ ಗ್ರಾಮಸ್ಥರು ಅಭಿಯಾನ ಕೈ ಬಿಟ್ಟರು.

ಈ ವೇಳೆ ಸ್ವಾಮಿ ಮಾತನಾಡಿ, ಸಚಿವ ಸೋಮಣ್ಣ ಅವರು ದೇವಸ್ಥಾನ ಅಭಿವೃದ್ಧಿಗಾಗಿ 3.50 ಕೋಟಿ ರೂ. ಬಿಡುಗಡೆ ಪ್ರಯತ್ನ ಮಾಡಿದ್ದಾರೆ. 45 ವರ್ಷಗಳ ರಾಜಕಾರಣ ಅನುಭವ ಹೊಂದಿದ್ದಾರೆ. ದೇವಸ್ಥಾನದ ಅಭಿವೃದ್ಧಿಗೆ ಸೋಮಣ್ಣ ಅವರ ಸಹಕಾರ ಸದಾ ಇರುತ್ತದೆ. ಭಾನುವಾರ ಅಥವಾ ಸೋಮವಾರ ದೇವಸ್ಥಾನಕ್ಕೆ ಸೋಮಣ್ಣ ಅವರನ್ನು ಕರೆದುಕೊಂಡು ಬಂದು ನಿಮ್ಮ ಬೇಡಿಕೆಗಳನ್ನು ಈಡೇರಿಸಲಾಗುವುದು. ಸೋಮಣ್ಣ ಗೋ ಬ್ಯಾಕ್ ಚಳವಳಿ ಕೈ ಬಿಡುವಂತೆ ಮನವಿ ಮಾಡಿದರು. ಅವರ ಮನವಿಗೆ ಸ್ಪಂದಿಸಿದ ಗ್ರಾಮಸ್ಥರು ಚಳವಳಿ ಹಿಂಪಡೆದರು.

ಎರಡ್ಮೂರು ದಿನಗಳ ಕಾಲಾವಧಿ: ಅಮಚವಾಡಿ ಗ್ರಾಮದ ಎಲ್ಲಾ ಕೋಮಿನ ಅಧ್ಯಕ್ಷ ಶ್ರೀಕಾಂತ್ ಅರಸ್ ಮಾತನಾಡಿ, ಶ್ರೀವೀರಭದ್ರೇಶ್ವರ ದೇವಸ್ಥಾನದ ಅಭಿವೃದ್ಧಿ ಹಾಗೂ ರಥ ನಿರ್ಮಾಣ ಮಾಡಿಕೊಡುವಲ್ಲಿ ನುಡಿದಂತೆ ಸಚಿವ ಸೋಮಣ್ಣ ನಡೆದಿಲ್ಲ. ಹೀಗಾಗಿ ಅವರ ವಿರುದ್ಧ ಅಮಚವಾಡಿ, ಚನ್ನಪ್ಪನಪುರ ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಸೇರಿ ಗೋ ಬ್ಯಾಕ್ ಸೋಮಣ್ಣ ಚಳವಳಿ ಹಮ್ಮಿಕೊಂಡಿದ್ದು, ಸೋಮಣ್ಣ ಅವರ ವಿಶೇಷ ಆಪ್ತ ಸಹಾಯಕ ಸ್ವಾಮಿ ಹಾಗೂ ಹಲವು ಮುಖಂಡರು ಭೇಟಿ ನೀಡಿ, ಎರಡು, ಮೂರು ದಿನದಲ್ಲಿ ಸಚಿವರನ್ನು ದೇವಸ್ಥಾನಕ್ಕೆ ಕರೆದುಕೊಂಡು ಬಂದು ಅಭಿವೃದ್ಧಿ ಕಾರ್ಯಗಳಿಗೆ ಕೈಜೋಡಿಸುವುದಾಗಿ ಆಶ್ವಾಸನೆ ನೀಡಿದ್ದಾರೆ. ಹೀಗಾಗಿ, ಇಂದಿನ ಗೋ ಬ್ಯಾಕ್ ಸೋಮಣ್ಣ ಚಳವಳಿ ಕೈ ಬಿಡಲಾಗಿದೆ ಎಂದರು. ಇನ್ನೆರಡು, ಮೂರು ದಿನದಲ್ಲಿ ನಮ್ಮ ಭರವಸೆ ಈಡೇರಿಸದಿದ್ದರೆ ಉಗ್ರ ಹೋರಾಟ ನಡೆಸುವ ಜೊತೆಗೆ ಚುನಾವಣೆ ಬಹಿಷ್ಕರಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಗೋ ಬ್ಯಾಕ್ ಸೋಮಣ್ಣ ಘೋಷಣೆ: ಈ ವೇಳೆ ಎಲ್ಲಾ ಕೋಮಿನ ಉಪಾಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, ಭರವಸೆಗಳನ್ನು ಕೇಳಿ ಸುಸ್ತಾಗಿದ್ದೇವೆ. ರಥ ನಿರ್ಮಿಸಿ ದೇವಸ್ಥಾನ ಮುಂಭಾಗದಲ್ಲಿ ನಿಲ್ಲಿಸುವ ತನಕ ಹೋರಾಟ ನಿಲ್ಲಿಸುವುದಿಲ್ಲ. ಎಂದು ಪಟ್ಟು ಹಿಡಿದ ಅವರು 4 ಬಾರಿ ಗೋ ಬ್ಯಾಕ್ ಸೋಮಣ್ಣ ಘೋಷಣೆ ಕೂಗಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ಅಧ್ಯಕ್ಷ ಶ್ರೀಕಾಂತ್ ಅರಸ್ ಒಂದೆರಡು ದಿನ ಕಾಲಾವಕಾಶ ನೀಡೋಣ. ಸಚಿವರು ಇನ್ನೆರಡು ದಿನದಲ್ಲಿ ಬಂದು ದೇವಸ್ಥಾನ ಅಭಿವೃದ್ಧಿಗೆ ಕ್ರಮಕೈಗೊಳ್ಳದಿದ್ದರೆ ಹೋರಾಟ ಮುಂದುವರಿಸೋಣ ಎಂದು ತಿಳಿಸಿದರು.

ಸಭೆಯಲ್ಲಿ ಶ್ರೀವೀರಭದ್ರೇಶ್ವರ ದೇವಸ್ಥಾನದ ಅಭಿವೃದ್ಧಿ ಸೇವಾ ಸಮಿತಿ ಅಧ್ಯಕ್ಷ ನಂಜುಂಡಸ್ವಾಮಿ, ಉಪಾಧ್ಯಕ್ಷ ಶೇಖರ್, ಮುಖಂಡರಾದ ಬಸವರಾಜು, ವಡ್ಗಲ್ಪುರ ಲೋಕೇಶ್, ಮಹೇಶ್, ಸಂಪತು, ವೀರಭದ್ರ, ಅಮಚವಾಡಿ ಹಾಗೂ ಚನ್ನಪ್ಪನಪುರ ಗ್ರಾಮಸ್ಥರು ಭಾಗವಹಿಸಿದ್ದರು.

ಸಿದ್ದು ಸೋಲಿಸಲು ಕಾಂಗ್ರೆಸ್‌ನ ಒಂದು ಬಣವೇ ಸಿದ್ಧವಾಗಿದೆ

ಬಿಜೆಪಿ ಯುವ ಸಂಕಲ್ಪ ಸಮಾವೇಶದಲ್ಲಿ ಬಿ.ವೈ.ವಿಜಯೇಂದ್ರ ಆಪಾದನೆ



ಗುಂಡ್ಲುಪೇಟೆ, ಮಾ.24– ಸಿದ್ದರಾಮಯ್ಯನವರನ್ನು ಸೋಲಿಸಲು ಕಾಂಗ್ರೆಸ್‌ನ ಒಂದು ಬಣ ಪಣ ತೊಟ್ಟಿದೆ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಪಾದಿಸಿದ್ದಾರೆ.

ಪಟ್ಟಣದ ದೇವರಾಜು ಅರಸು ಕ್ರೀಡಾಂಗಣದಲ್ಲಿ ನಡೆದ ಬಿಜೆಪಿ ಜಿಲ್ಲಾ ಯುವ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ಚುನಾವಣೆಗೆ ಇನ್ನು ಕೇವಲ 45 ದಿನಗಳನ್ನು ಬಾಕಿ ಇದ್ದು ಕಾಂಗ್ರೆಸ್ ಯಾವುದೇ ಕಾರಣಕ್ಕೂ ಅಧಿಕಾರಕ್ಕೆ ಬರುವುದಿಲ್ಲ. ಅದರಲ್ಲಿಯೇ ಒಂದು ಬಣ ಸಿದ್ದರಾಮಯ್ಯ ಅವರನ್ನು ಸೋಲಿಸಲು ಪಣ ತೊಟ್ಟಿದೆ ಎಂದರು. ಇನ್ನು ಜೆಡಿಎಸ್ ಅತಂತ್ರ ವಿಧಾನ ಸಭೆ ಸೃಷ್ಟಿಯಾಗಿ ನಮಗೆ ಅವಕಾಶ ಸಿಗುತ್ತದೆ ಎಂದು ಕನಸು ಕಾಣುತ್ತಿದೆ. ಇದು ಸಾಧ್ಯವಾಗುವುದಿಲ್ಲ ಬಿಜೆಪಿ 140 ರಿಂದ 150 ಸ್ಥಾನಗಳು ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಮಾತನಾಡಿ, ಪಟ್ಟಣದ ಕುಡಿಯುವ ನೀರು ಸರಬರಾಜು ಮಾಡಲು ಎಕ್ಸಪ್ರೆಸ್ ಲೈನ್ ಕಾಮಗಾರಿಗಾಗಿ 127 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಇದಲ್ಲದೇ ಎಲ್ಲಾ ವರ್ಗದವರ ಅಭಿವೃದ್ಧಿಗಾಗಿ 800 ಕೋಟಿ ರೂಪಾಯಿಗಳ ಅಭಿವೃದ್ಧಿ ಕಾಮಗಾರಿಯನ್ನು ಕ್ಷೇತ್ರದಲ್ಲಿ ಮಾಡಿದ್ದೇನೆ. ಮತ್ತೊಮ್ಮೆ ಅವಕಾಶ ನೀಡುವುದರೊಂದಿಗೆ ತಮ್ಮ ಸೇವೆ ಅವಕಾಶ ಮಾಡಿ ಕೊಡಿ ಎಂದರು.

ಅದ್ದೂರಿ ಬೈಕ್ ರ‍್ಯಾಲಿ: ತಾಲೂಕಿನ ಬೇಗೂರಿ ನಲ್ಲಿ ಯುವ ಸಮಾವೇಶದ ಬೈಕ್ ರ‍್ಯಾಲಿಗೆ ವಿಜಯೇಂದ್ರ ಚಾಲನೆ ನೀಡಿದರು. ನಂತರ ಸಹಸ್ರಾರು ಬಿಜೆಪಿ ಕಾರ್ಯಕರ್ತರು ಬೈಕ್ ರ‍್ಯಾಲಿ ಮುಖಾಂತರ ತೆರೆದ ವಾಹನದಲ್ಲಿ ಅವರನ್ನು ವೇದಿಕೆ ಬರಮಾಡಿಕೊಳ್ಳಲಾಯಿತು.

ಸಮಾವೇಶದಲ್ಲಿ ಸುರಪುರ ಶಾಸಕ ರಾಜು ನರಸಿಂಹನಾಯಕ, ರಾಜ್ಯ ಯುವ ಘಟಕದ ಅಧ್ಯಕ್ಷ ಸಂದೀಪ್, ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ನಾರಾಯಣ ಪ್ರಸಾದ್, ಮುಖಂಡರಾದ ಕೌಟಿಲ್ಯ ರಘು, ಪುರಸಭೆ ಅಧ್ಯಕ್ಷ ಪಿ.ಗಿರೀಶ್, ಯುವ ಮೋರ್ಚಾ ಅಧ್ಯಕ್ಷ ಪ್ರಣಯ್ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಜಿಲ್ಲಾ ಡ್ರಗ್ಸ್ ವಿಲೇವಾರಿ ಸಮಿತಿಯಿಂದ ಅಕ್ರಮ ಗಾಂಜಾ ನಾಶ

ಚಾಮರಾಜನಗರ, ಮಾ.24– ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ 14 ಪ್ರಕರಣಗಳಲ್ಲಿ ವಶಪಡಿಸಿಕೊಂಡಿದ್ದ 20 ಕೆ.ಜಿ.848 ಗ್ರಾಂ.ಅಕ್ರಮ ಗಾಂಜಾವನ್ನು ಜಿಲ್ಲಾ ಡ್ರಗ್ಸ್ ವಿಲೇವಾರಿ ಸಮಿತಿಯು ಮೈಸೂರು ಜಿಲ್ಲೆಯ ಜಯಪುರ ಹೋಬಳಿಯ ಗುಜ್ಜೇಗೌಡನಪುರ ಗ್ರಾಮದಲ್ಲಿರುವ ಬಯೋಟೆಕ್ ಕುಲುಮೆಯಲ್ಲಿ ನಾಶಗೊಳಿಸಿದೆ.

ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮವಾಗಿ ಗಾಂಜಾ ಬೆಳೆಯುತ್ತಿದ್ದ, ಸಾಗಾಣಿಕೆ, ಮಾರಾಟ ಮಾಡುತ್ತಿದ್ದವರ ಮೇಲೆ ದಾಳಿ ನಡೆಸಿ ಎನ್.ಡಿ.ಪಿ.ಎಸ್. ಕಾಯ್ದೆಯಡಿ ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣ ದಾಖಲಿಸಿ 6.98,950 ರೂ ಮೌಲ್ಯದ 20 ಕೆ.ಜಿ.848 ಗ್ರಾಂ ಗಾಂಜಾ ವಶಪಡಿಸಿಕೊಳ್ಳಲಾಗಿತ್ತು. ಇಂದು ಮೈಸೂರಿನ ದಕ್ಷಿಣ ವಲಯದ ಐ.ಜಿ.ಪಿ.ಪ್ರವೀಣ್ ಮಧುಕರ್ ಪವಾರ್ ಅವರ ನೇತೃತ್ವದಲ್ಲಿ ಚಾಮರಾಜನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾ ಡ್ರಗ್ಸ್ ವಿಲೇವಾರಿ ಸಮಿತಿ ಅಧ್ಯಕ್ಷರಾದ ಪದ್ಮಿನಿ ಸಾಹು, ಡಿವೈಎಸ್ಪಿ ಪ್ರಿಯದರ್ಶಿನಿ ಸಾಣೆ ಕೊಪ್ಪ, ಮೈಸೂರಿನ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದ ಸಹಾಯಕ ನಿರ್ದೇಶಕ ಎಸ್.ಎಂ. ಭಾರ್ಗವಿ, ಚಾಮರಾಜನಗರ ಜಿಲ್ಲಾ ಡಿ.ಎಸ್.ಬಿ. ವಿಭಾಗದ ಪೊಲೀಸ್ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಇಂದು ಚಾ.ನಗರಕ್ಕೆ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರು

ಚಾಮರಾಜನಗರ, ಮಾ.24– ಕರ್ನಾಟಕ ರಾಜ್ಯ ಸಫಾಯಿ ಕರ್ಮ ಚಾರಿಗಳ ಆಯೋಗದ ಅಧ್ಯಕ್ಷ ಎಂ. ಶಿವಣ್ಣ ಕೋಟೆ ಅವರು ಮಾ.25 ರಂದು ಚಾಮರಾಜನಗರಕ್ಕೆ ಭೇಟಿ ನೀಡಲಿದ್ದಾರೆ. ಅಂದು ಬೆಳಿಗ್ಗೆ 10 ಗಂಟೆಗೆ ಚಾಮರಾಜನಗರಕ್ಕೆ ಆಗಮಿಸುವ ಅವರು ಬೆಳಗ್ಗೆ 10.30 ಗಂಟೆಗೆ ಪೌರ ಕಾರ್ಮಿಕರ ಕುಂದು ಕೊರತೆಗಳ ಕುರಿತು ಪೌರಕಾರ್ಮಿಕ ಮುಖಂಡರೊಂದಿಗೆ ಸಭೆ ನಡೆಸುವರು. ಮಧ್ಯಾಹ್ನ 12 ಗಂಟೆಗೆ ದಾವಣಗೆರೆಗೆ ತೆರಳುವರು ಎಂದು ಪ್ರಕಟಣೆ ತಿಳಿಸಿದೆ.

Promotional Feature



ಯುಗಾದಿ ಹಬ್ಬದಂದು ಶಾಸಕ ರವೀಂದ್ರ ಶ್ರೀಕಂಠಯ್ಯ ಶ್ರೀರಂಗಪಟ್ಟಣದ ಮೊಗರಹಳ್ಳಿ ಗ್ರಾಮದ ಜನತೆಗೆ ಬಂಪರ್ ಕೊಡುಗೆ ನೀಡುವ ಮೂಲಕ ಆಶ್ರಯದಾತರಾಗಿದ್ದಾರೆ.

10–20 ಲಕ್ಷ ರೂ. ಬೆಲೆ ಬಾಳುವ ನಿವೇಶನಗಳ ಹಕ್ಕು ಪತ್ರಗಳನ್ನ ಸ್ವತಃ ಮನೆ, ಮನೆಗೆ ತೆರಳಿ ಶಾಸಕ ರವೀಂದ್ರ ಶ್ರೀಕಂಠಯ್ಯ ಹಂಚುವ ಮೂಲಕ 60 ವರ್ಷಗಳಿಂದ ಅಭದ್ರತೆಯಿಂದ ವಾಸಿಸುತ್ತಿದ್ದ ಜನತೆಗೆ ಭದ್ರತೆ ನೀಡಿದ್ದಾರೆ. ಕಳೆದ 50–60 ವರ್ಷಗಳಿಂದ ಹೋರಾಟ ನಡೆಸಿ, ಯಾವೊಬ್ಬ ಜನಪ್ರತಿನಿದಿಗಳು ಸಹ ಇಲ್ಲಿನ ನಿವಾಸಿಗಳಿಗೆ ಹಕ್ಕು ಪತ್ರ ಕೊಡಿಸಲು ಸಾಧ್ಯವೆ ಇಲ್ಲ ಎಂದು ಹೇಳಿ ಕೈಚೆಲ್ಲಿ, ಸಹಾಯಕ್ಕೆ ಬಾರದೆ ಕುಳಿತಿದ್ದ ಕೆಲಸವನ್ನು ಇದೂ ಸಾಧ್ಯ ಎಂದು ಶಾಸಕ ರವೀಂದ್ರ ಶ್ರೀ ಕಂಠಯ್ಯ ಇತಿಹಾಸ ಸೃಷ್ಟಿಸಿದ್ದಾರೆ.

ಮೊಗರಹಳ್ಳಿ ಮಂಟಿ ಗ್ರಾಮವು ಹೆಚ್ಚಾಗಿ ಕಲ್ಲಿನಿಂದ ಕೂಡಿದ್ದು, ಕಲ್ಲನ್ನು ಒಡೆದು ಜಲ್ಲಿಕಲ್ಲು ಮಾಡಿ ಸೈಜು ಹಾಗೂ ಬೋಡ್ರಸ್ ಮಾಡಿ ಮಾರಾಟ ಮಾಡಲು ಪ್ರಾರಂಬಿಸಿ ಕಲ್ಲಿನಿಂದಲೇ ತಮ್ಮ ಬದುಕನ್ನು ಕಟ್ಟಿಕೊಂಡರು ಹಾಗಾಗಿ ಈ ಗ್ರಾಮ ಕಲ್ಲು ಮಂಟಿ ಎಂದೇ ಪ್ರಖ್ಯಾತಿ ಪಡೆದಿದೆ. ಕೆಳ ಮಂಟಿ ಗ್ರಾಮದಲ್ಲಿ ಅಂಗವಿಕಲರು, ವೃದ್ಧರು, ಕೂಲಿ ಕಾರ್ಮಿಕರು ಸೇರಿದಂತೆ ಸುಮಾರು ವರ್ಷಗಳಿಂದ ತಮ್ಮ ಮೂಲ ಭೂತ ಹಕ್ಕು ಹಾಗೂ ಹಕ್ಕು–ಪತ್ರಗಳಗಾಗಿ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಸರ್ಕಾರಗಳಿಗೆ ಮನವಿ ಸಲ್ಲಿಸುವುದರಲ್ಲೇ ಬೆಸತ್ತಿದ್ದರು, ನಂತರ ಅಧಿಕಾರಕ್ಕೆ ಬಂದ ಜನಪ್ರತಿನಿಧಿಗಳು ಈ ಜಮೀನು ಖಾಸಗಿಯವರ ಆಸ್ತಿ ಆಗಿರುವುದರಿಂದ ನೀವು ಅನಧಿಕೃತವಾಗಿ ಮನೆ ಕಟ್ಟಿಕೊಂಡಿದ್ದು ಈ ಮನೆಗಳನ್ನು ಸಕ್ರಮಗೊಳಿಸಲು ಸರ್ಕಾರದ ಮಟ್ಟದಲ್ಲೂ ಸಾಧ್ಯವಿಲ್ಲವೆಂದು ಇವರ ಹಲವಿ ವರ್ಷಗಳ ಬೆಡಿಕೆಗಳನ್ನು ಇಡೇರಿಸದೆ ಬರಿ ಭರವಸೆಯಲ್ಲೇ ಅವರ ರಾಜಕೀಯ ಬೇಳೆ ಬೆಯಿಸಿಕೊಳ್ಳುತ್ತಿದ್ದರು. ಈ ಕೀಳು ರಾಜಕೀಯದಿಂದ ಬೇಸತ್ತು ಹೋಗಿದ್ದ ಜನರು, ಕಳೆದ 2018ರ ವಿಧಾನಸಭಾ ಚುನಾವಣೆ ವೇಳೆ ಮೊಗರಹಳ್ಳಿ ಮಂಟಿ ಗ್ರಾಮಕ್ಕೆ ಮತಯಾಚನೆಗೆ ಬಂದಿದ್ದ ಹಾಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರ ಬಳಿ ತಮ್ಮ ಅಳಲನ್ನು ತೋಡಿಕೊಂಡು ಕಣ್ಣೀರಿಟ್ಟಿದ್ದರು.

ಈ ಬಾರಿ ನೀವು ನನಗೆ ಆಶೀರ್ವದಿಸಿ, ಗೆಲ್ಲಿಸಿದ್ದೇ ಆದಲ್ಲಿ ನಿಮಗೆ ಹಕ್ಕು ಪತ್ರ, ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಡುವುದಾಗಿ ಶಾಸಕರು ಭರವಸೆ ನೀಡಿದ್ದರು. ಅದರಂತೆಯೇ ಸತತ ನಾಲ್ಕು ವರ್ಷಗಳ ಕಾಲ ಸರ್ಕಾರ ಹಾಗೂ ಅಧಿಕಾರಿಗಳ ಜೊತೆ ಮಾತುಕತೆ ನಡೆಸಿ ಈಗ ಅಧಿಕೃತವಾಗಿ ಸರ್ಕಾರದಿಂದ ನಿಯಮಾನುಸಾರ ಇಲ್ಲಿನ ವಾಸಿಗಳಿಗೆ ಹಕ್ಕು ಪತ್ರ ವಿತರಿಸಿ, ಹಲವಾರು ವರ್ಷಗಳಿಂದ ಯಾವುದೇ ಆಧಾರವಿಲ್ಲದೆ ವಾಸಿಸುತ್ತಿದ್ದ ಬಡ ಕುಟುಂಬಗಳಿಗೆ ಶಾಸಕ ರವೀಂದ್ರ ಶ್ರೀಕಂಠಯ್ಯ ನೇರನುಡಿ ವ್ಯಕ್ತಿತ್ವದ ಮಾತಿನಲ್ಲಿ ಸಿಟ್ಟು ಕಂಡು ಬಂದರೂ ಜನರಿಗೆ ನೀಡಿದ ಮಾತಿನಂತೆ ನಂಬಿಕೆಯನ್ನು ಉಳಿಸಿಕೊಂಡಿರುವುದು. ನಿವಾಸಿಗಳಲ್ಲಿ ಸಂತಸವನ್ನುಂಟು ಮಾಡಿದೆ.



"ಕೆಳ ಮಂಟಿ ಗ್ರಾಮಸ್ಥರು ಅವರ ಹಲವು ವರ್ಷಗಳ ಬೇಡಿಕೆಯಾದ ಹಕ್ಕು ಪತ್ರದ ಸಮಸ್ಯೆಯನ್ನು ನನ್ನ ಬಳಿ ಹೇಳಿ ಕೊಂಡಾಗ ನಾನು ಸರ್ಕಾರದ ಉನ್ನತ ಅಧಿಕಾರಿಗಳ ಬಳಿ ಚರ್ಚಿಸಿದೆ ಆದರೇ ಇದು ತುಂಬಾ ಕ್ಲಿಷ್ಟಕರ ಸಮಸ್ಯೆಯಾಗಿದ್ದು ಇದರ ನಿವಾರಣೆಗೆ ಹಲವು ವರ್ಷಗಳೇ ಬೇಕಾಗುತ್ತದೆ ಎಂದು ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ ಆದರೇ ನಾನು ನಮ್ಮ ತಾಲೂಕಿನ ನಿಷ್ಠಾವಂತ ದಕ್ಷ ಅಧಿಕಾರಿಗಳ ತಂಡವನ್ನು ಕಟ್ಟಿಕೊಂಡು ನಿರಂತರ ಪ್ರಯತ್ನದಿಂದ ಕೆಳ ಮಂಟಿ ಗ್ರಾಮದ 300 ಫಲಾನುಭವಿಗಳಿಗೆ ಇಂದು ಹಕ್ಕು ಪತ್ರ ವಿತರಿಸಿದ್ದು ಒಂದು ಇತಿಹಾಸವೇ ಸರಿ.

ಈ ಹಿಂದೇ ಕೆಆರ್‌ಎಸ್ ಗ್ರಾಮವನ್ನು ಕಂದಾಯ ಗ್ರಾಮವನ್ನಾಗಿ ಮಾಡಿರುವುದು ರಾಜ್ಯದಲ್ಲೇ ಮೊದಲಾಗಿದ್ದು, ಇದೇ ಮಾದರಿಯನ್ನು ರಾಜ್ಯದ ಹಲವು ಜಿಲ್ಲೆಯ ಶಾಸಕರು ಹಾಗೂ ಅಧಿಕಾರಿಗಳು ನನ್ನ ಹಾಗೂ ನನ್ನ ತಾಲ್ಲೂಕಿನ ಅಧಿಕಾರಿಗಳ ಬಳಿ ಸಲಹೆ ಪಡೆದು ಅಲ್ಲಿನ ಹಲವು ವರ್ಷಗಳ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುತ್ತಿರುವುದು ನಮಗೆ ಹೆಮ್ಮೆಯ ವಿಷಯ.

– ಶಾಸಕ ರವೀಂದ್ರ ಶ್ರೀಕಂಠಯ್ಯ

ತಾಲ್ಲೂಕಿನ ಬಡ ನಿವಾಸಿಗಳ ಅತಂತ್ರ ಬದುಕಿಗೆ ಮುಕ್ತಿ ಕೊಟ್ಟ ಶಾಸಕ ರವೀಂದ್ರ ಶ್ರೀಕಂಠಯ್ಯ



ಶಾಸಕರಿಗೆ ಆರತಿ ಎತ್ತಿ, ಪೂರ್ಣಕುಂಬ ಕಳಶದೊಂದಿಗೆ ಸ್ವಾಗತ

ಶಾಸಕ ರವೀಂದ್ರ ಶ್ರೀಕಂಠಯ್ಯರವರಿಗೆ ಗ್ರಾಮಸ್ಥರು ಆರತಿ ಎತ್ತಿ, ಪೂರ್ಣಕುಂಬ ಕಳಶದೊಂದಿಗೆ ಮಹಿಳೆಯರು ಸ್ವಾಗತಿಸಿದರು. ಊರಿನ ಪ್ರಮುಖ ರಸ್ತೆಗಳಲ್ಲಿ ತಳಿರು–ತೋರಣಗಳಿಂದ ಸಿಂಗರಿಸಿ ಪ್ರತೀ ಮನೆಯ ಮುಂದೆಯೂ ವಿಶೇಷ ರೀತಿಯ ರಂಗೋಲಿಗಳೊಂದಿಗೆ ಶಾಸಕರನ್ನು ಸ್ವಾಗತಿಸಿ ಪುಷ್ಪಾರ್ಚನೆ ಮೂಲಕ ಹೂವಿನ ಮಳೆಗೈದರು. ಫಲಾನುಭವಿಗಳ ಪ್ರತೀ ಮನೆಗಳಿಗೂ ಭೇಟಿ ನೀಡಿ ಖುದ್ದು ಫಲಾನುಭವಿಗಳಿಗೆ ಹಕ್ಕು–ಪತ್ರ ವಿತರಿಸಿ ಕಾನೂನು ಪ್ರಕಾರವಾಗಿ ಮುಂದಿನ ದಾಖಲಾತಿಗಳನ್ನು ಪಡೆದುಕೊಳ್ಳುವಂತೆ ಸೂಚನೆ ನೀಡಿದ ಶಾಸಕರು ವರ್ಷದ ಮೊದಲ ಹಬ್ಬ ಯುಗಾದಿ ಹಬ್ಬವನ್ನು ಮೊಗರಳ್ಳಿ(ಮಂಟಿ) ಗ್ರಾಮದಲ್ಲಿ ಗ್ರಾಮಸ್ಥರೊಂದಿಗೆ ಆಚರಿಸಿಕೊಂಡರು.



"ಹಲವು ವರ್ಷಗಳಿಂದ ನೂರಾರು ಕುಟುಂಬಗಳು ತಮ್ಮ ಸೂರಿನ ದಾಖಲೆಗಳಿಲ್ಲದೆ ಅತಂತ್ರ ಸ್ಥಿತಿ ಎದುರಿಸುತ್ತಿದ್ದರು. ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಲಿ ಹಾಗೂ ಅವರ ವ್ಯವಹಾರಿಕ ಕೆಲಸಕ್ಕಾಗಲಿ ಅವರ ಮನೆಯ ದಾಖಲಾತಿಗಳನ್ನು ನೀಡಲು ಸಾಧ್ಯವಾಗದೇ ನಿತ್ಯ ನರಕ ಅನುಭವಿಸುತ್ತಿದ್ದರು ಆದರೇ ಇಂದು ಶಾಸಕರು ಇಷ್ಟೊಂದು ಕ್ಲಿಷ್ಟಕರ ಸಮಸ್ಯೆಯನ್ನು ಅವರಿಗೆ ಸಿಕ್ಕ ಅವಧಿಯಲ್ಲಿ ಕಾನೂನಾತ್ಮಕ ತೊಡಕುಗಳನ್ನು ನಿವಾರಣೆ ಗೊಳಿಸಿ ಇಂದು ಕೆಳಮಂಟಿ ಗ್ರಾಮಸ್ಥರಿಗೆ ಹಕ್ಕು ಪತ್ರ ವಿತರಿಸುವ ಮೂಲಕ ಈ ಬಡಕುಟುಂಬಗಳು ನೆಮ್ಮದಿಯಾಗಿ ಬದುಕಲು ಅನುವು ಮಾಡಿಕೊಟ್ಟಿದ್ದಾರೆ.

ಈ ಹಕ್ಕು ಪತ್ರ ವಿತರಣಾ ವಿಚಾರವಾಗಿ ಶಾಸಕರು ಪಕ್ಷ ಭೇದ ಮರೆತು ನಿಜವಾದ ಫಲಾನುಭವಿಯನ್ನು ದಕ್ಷ ಅಧಿಕಾರಿಗಳನ್ನು ಇಟ್ಟುಕೊಂಡು ಮೂರು ನಾಲ್ಕು ಬಾರಿ ಸರ್ವೆ ನಡೆಸಿ ನಿಜವಾದ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಿವುದು ನನ್ನನ್ನೂ ಒಳಗೊಂಡಂತೆ ಇಡೀ ಗ್ರಾಮಸ್ಥರು ಹರ್ಷಗೊಂಡಿದ್ದಾರೆ. ಈ ಗ್ರಾಮಸ್ಥರು ಎಂದೆಂದಿಗೂ ಶಾಸಕ ರವೀಂದ್ರ ಶ್ರೀಕಂಠಯ್ಯ ರವರಿಗೆ ಆಭಾರಿಯಾಗಿರುತ್ತೇವೆ."

– ವಿವೇಕ್ ಗ್ರಾಮಸ್ಥ

ಮಂಟಿ ಗ್ರಾಮದ ಇತಿಹಾಸ

ಮಂಡ್ಯ ಹಾಗೂ ಮೈಸೂರು ಜಿಲ್ಲೆಯ ಗಡಿ ಭಾಗದಲ್ಲಿರುವ ಗ್ರಾಮವೇ ಮೊಗರಹಳ್ಳಿ(ಮಂಟಿ) ಗ್ರಾಮ, 1930ರ ಹಾಸುಪಾಸಿನಲ್ಲಿ ಕೆ.ಆರ್. ಎಸ್ ಅಣೆಕಟ್ಟೆಯಲ್ಲಿ ಕೆಲಸ ಮಾಡಲು ಬಂದ ಜನರು ಇಲ್ಲಿ ಗುಂಪುಗುಂಪಾಗಿ ವಾಸ ಮಾಡಲು ಪ್ರಾರಂಭಿಸಿದರು.ಅಣೆಕಟ್ಟೆಯಲ್ಲಿ ಕಲ್ಲು ಹೊಡೆಯುವ ಕೆಲಸದಲ್ಲೇ ಇಲ್ಲಿನ ಜನರು ಇದ್ದ ಕಾರಣ ಮಂಟಿ ಕೂಡ ಬೃಹತ್ ಬಂಡೆಗಳಿಂದ ಕೂಡಿದ ಗ್ರಾಮವಾಗಿತ್ತು, ಆದ ಕಾರಣ ಈ ಜನರು ಕಲ್ಲುಗಳನ್ನು ಒಡೆದು ಮನೆಕಟ್ಟಲು ಬೇಕಾದ ಸಾಮಾಗ್ರಿಗಳಾದ ಜಲ್ಲಿಕಲ್ಲು, ಸೈಸು ಹಾಗೂ ಬೋಟ್ರೋಸ್ ಗಳನ್ನು ಒಡೆದು ವ್ಯಾಪಾರ ಮಾಡಿ ಜೀವನ ಸಾಗಿಸಿ ಕಲ್ಲಿನಿಂದಲೇ ಬದುಕನ್ನು ಕಟ್ಟಿಕೊಂಡರು ಕಾಲ ಕ್ರಮೇಣ ಈ ಸ್ಥಳವು ಕಲ್ಲು ಮಂಟಿ ಎಂದೇ ಜನ ಕರೆಯಲು ಪ್ರಾರಂಭಿಸಿದರು.

ಅಂದಾಜು 4 ಸಾವಿರ ಜನ ಮಂಟಿ ಗ್ರಾಮದಲ್ಲಿ ವಾಸ ಮಾಡುತಿದ್ದು ಇವರೆಲ್ಲರೂ ಕೂಡ ಅನೇಕ ವರ್ಷಗಳಿಂದ ಕೆಳ ಮಂಟಿಗ್ರಾಮದಲ್ಲಿ ಅನಧಿಕೃತವಾಗಿ ಗುಡಿಸಲುಗಳನ್ನು ಹಾಕಿಕೊಂಡು ವಾಸಿಸಲು ಪ್ರಾರಂಭಿಸಿದರು, ನಂತರ ಕಾಲ ಬದಲಾದಂತೆ ಆ ಗುಡಿಸಲುಗಳು ಕಣ್ಮರೆಯಾಗಿ ಶೀಟ್ ಮನೆಗಳು ತಲೆ ಎತ್ತಿದ್ದವು ಇಷ್ಟೆಲ್ಲಾ ಸಾವಿರಾರು ಜನ 80 ವರ್ಷಗಳಷ್ಟು ವಾಸವಿದ್ದ ಪ್ರದೇಶಕ್ಕೆ ಇವರಿಗೆ ಯಾವುದೇ ದಾಖಲೆಗಳಿರಲ್ಲಿಲ್ಲಾ ಆದರೂ ಸರ್ಕಾರ ಹಾಗೂ ಸ್ಥಳೀಯ ಗ್ರಾ.ಪಂ ಇವರಿಗೆ ಕುಡಿಯಲು ನೀರು ಹಾಗೂ ವಿದ್ಯುತ್ ನೀಡಿದ್ದನ್ನು ಬಿಟ್ಟರೆ ಈ ಗ್ರಾಮಕ್ಕೆ ಮತ್ತೆಯಾವ ಸೌಕರ್ಯಗಳನ್ನು ನೀಡಿರಲಿಲ್ಲಾ, ಸೂಕ್ತ ಕುಡಿಯುವ ನೀರು, ಚರಂಡಿ ವ್ಯವಸ್ಥೆ, ರಸ್ತೆ, ವ್ಯವಸ್ಥೆಗಳಿಲ್ಲದೆ ಈ ಜನ ನಿತ್ಯ ನರಕದಲ್ಲಿ ಜೀವನ ಸಾಗಿಸುತ್ತಿದ್ದರು. ಇಷ್ಟು ವರ್ಷಗಳ ಕಾಲ ಇಲ್ಲಿ ಅಧಿಕಾರ ನಡೆಸಿದ ರಾಜಕಾರಣಿಗಳು ಕೂಡ ಇವರಿಗೆ ಮೂಲಭೂತ ಸೌಲಭ್ಯಗಳನ್ನು ಕೊಡುವಲ್ಲಿ ವಿಫಲರಾಗಿದ್ದರು.





"ಮೊಗರಹಳ್ಳಿ ಮಂಟಿಯ ನಿವಾಸಿ ಅನಿಲ್ ಕುಮಾರ್ ಮಾತನಾಡಿ ನನಗೀಗ 42 ವರ್ಷ ವಯಸ್ಸು ಕಳೆದ 60 ವರ್ಷಗಳಿಂದ ನಮ್ಮ ಅಜ್ಜ, ಅಜ್ಜಿ, ತಂದೆ ಇಲ್ಲಿಯೇ ವಾಸವಾಗಿದ್ದರು, ನಮಗೆ ಹಕ್ಕು ಪತ್ರ ನೀಡಿ ಎಂದು ಹಲವು ಬಾರಿ ಅನೇಕ ಹೋರಾಟ ಹಾಗೂ ಮನವಿ ಪತ್ರ ಕೊಟ್ಟಿದ್ದರೂ ಕೂಡ ಅದು ಪ್ರಯೋಜನವಾಗಿರಲಿಲ್ಲಾ ಶಾಸಕ ರವೀಂದ್ರ ಅವರ ಬಳಿ ಮನವಿ ಮಾಡಿದ್ದವು ಅವರು ನನ್ನ ಅವಧಿಯಲ್ಲಿ ನಿಮಗೆ ಹಕ್ಕು ಪತ್ರ ಕೊಡಿಸುತ್ತೇನೆ ಎಮದು ಹೇಳಿದ್ದರು ನುಡಿದಂತೆ ಅವರು ಈಗ ಅತಂತ್ರ ನಿವಾಸಿಗಳ ಬದುಕಿಗೆ ಆಸರೆಯಾಗಿ ನಮಹೆ ಹಕ್ಕು ಪತ್ರ ಕೊಡಿ ಸಿದ್ದಾರೆ ನಮಗೆ ಮಾತ್ರವಲ್ಲಾ ತಾಲೂಕಿನ ಕೆ.ಆರ್.ಎಸ್, ಬೆಳಗೊಳ, ಹೊಸ ಆನಂದೂರು ಗ್ರಾಮಗಳಿಗೂ ಹಕ್ಕು ಪತ್ರ ಕೊಡಿಸಿದ್ದಾರೆ.

–ಅನಿಲ್ ಕುಮಾರ್





ಯುಗಾದಿ ಹಬ್ಬದ ದಿನದಂದು ಶಾಸಕರು ಹಕ್ಕು ಪತ್ರ ನೀಡಿದ್ದು ನಮಗೆ ಪುನರ್ಜನ್ಮ ನೀಡಿದಂತಾಗಿದ್ದು, ಕತ್ತಲೆಯಲ್ಲಿದ್ದ ನಮ್ಮ ಬದುಕಿಗೆ ಈಗ ಬೆಳಕು ಬಂದಂತಾಗಿದ್ದು ಇನ್ನು ಮುಂದೆ ನಾವು ನೆಮ್ಮದಿಯಿಂದ ನಮ್ಮ ಮನೆಗಳಲ್ಲಿ ಜೀವನ ಸಾಗಿಸ ಬಹುದಾಗಿದೆ, ಇನ್ನು ಮುಂದೆ ನಮ್ಮ ಮಕ್ಕಳು ಅತಂತ್ರರಾಗ ಬೇಕಿಲ್ಲಾ ನಮಗೆ ನಿಜವಾದ ಸ್ವಾತಂತ್ರ್ಯ ಈ ಹಕ್ಕು ಪತ್ರದ ಮೂಲಕ ಸಿಕ್ಕಿದ್ದು, ಶಾಸಕ ರವೀಂದ್ರ ಶ್ರೀಕಂಠಯ್ಯ ಅವರಿಂದ ನಮ್ಮ ಬದುಕಿಗೆ ಈಗ ನಿಜವಾದ ಅರ್ಥ ಬಂದಂತಾಗಿದೆ.

ಮುಂದೆಯೂ ಇವರೇ ನಮ್ಮ ಶಾಸಕರಾಗಲಿ

ಗ್ರಾ.ಪಂ ಮಾಜಿ ಸದಸ್ಯೆ ಸುಂದರಮ್ಮ ಹಕ್ಕು ಪತ್ರ ಪಡೆದು ನಂತರ ಮಾತನಾಡಿ ನಮ್ಮ ಮನೆಯಲ್ಲಿ ಆರು ಮಂದಿ ವಾಸಮಾಡುತ್ತಿದ್ದು ನನಗೆ 10 ವರ್ಷ ಇದ್ದಾಗ ಇಲ್ಲಿಗೆ ಬಂದೆವು, ಈಗ ನನಗೆ 52 ವರ್ಷ ಈ ಹಿಂದೆ ಆಡಳಿತ ನಡೆಸಿದ ಹಲವರು ನಮಗೆ ಹಕ್ಕು ಪತ್ರ ಕೊಡಿಸುವುದಾಗಿ ಭರವಸೆ ನೀಡುತ್ತಿದ್ದರು ಆದರೆ, ಯಾರೂ ಕೂಡ ಕೊಡಿಸಲಿಲ್ಲಾ, ನಮ್ಮ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ನುಡಿದಂತೆ ಹಕ್ಕು ಪತ್ರ ನೀಡಿದ್ದಾರೆ. ಆದ್ದರಿಂದ ಬಡ ಜನರ ಮತಷ್ಟು ಉದ್ಧಾರಕ್ಕೆ ಮುಂದಿನ ಚುನಾವಣೆಯಲ್ಲಿ ನಮ್ಮ ರವೀಂದ್ರ ರವರೇ ಶಾಸಕರಾಗಿ ಬರಲಿ ಎಂದು ಹಾರೈಸಿದರು.



"ಅನೇಕ ವರ್ಷಗಳಿಂದ ನಾವು ಇಲ್ಲಿ ವಾಸವಿದ್ದೇವೆ ಈ ಗ್ರಾಮದಲ್ಲಿ ನಾವು ಕಡು ಬಡತನದಲ್ಲಿ ಜೀವನ ಸಾಗಿಸುತ್ತಿದ್ದೇವೆ ಅನೇಕ ವರ್ಷಗಳಿಂದ ರಾಜಕಾರಣಿಗಳು ನಮಗೆ ಬರೀ ಭರವಸೆ ನೀಡುತ್ತಿದ್ದರು ಆದರೆ ನಮಗೆ ಹಕ್ಕು ಪತ್ರ ಕೊಡಿಸಿರಲಿಲ್ಲಾ, ನಮ್ಮ ಮನೆಗೆ ಸರಿಯಾದ ದಾಖಲೆಗಳಿಲ್ಲದೆ ನಮಗೆ ಯಾವುದೇ ಬ್ಯಾಂಕ್‌ಗಳಲಿಯೂ ಸಾಲ ಸೌಲಭ್ಯ ಸಿಗುತ್ತಿರಲಿಲ್ಲಾ ಆದರೆ ಶಾಸಕರು ಇಂದು ನಮ್ಮ ಬೇಡಿಕೆ ಈಡೇರಿಸಿ ನಾವೆಲ್ಲಾ ನೆಮ್ಮದಿಯಾಗಿ ನಮ್ಮ ಮನೆಗಳಲ್ಲಿ ನಮ್ಮ ಗ್ರಾಮದಲ್ಲಿ ವಾಸ ಮಾಡಲು ಅನುವು ಮಾಡಿಕೊಟ್ಟಿದ್ದಾರೆ ಅವರು ಮುಂದಿನ ಬಾರಿಯೂ ಶಾಸಕರಾಗಿ ಸಚಿವರಾಗಲಿ ಎಂಬುದು ನಮ್ಮ ಗ್ರಾಮದವರ ಬಯಕೆಯಾಗಿದೆ ಎಂದರು.

–ನದೀಮ್ ಆಟೋ ಚಾಲಕ

ಸ್ವಾತಂತ್ರ್ಯ ಸಿಕ್ಕಿದೆ

ಮಂಟಿ ಗ್ರಾಮದ ಹೊನ್ನಮ್ಮ ಮಾತನಾಡಿ ನಾನು 40 ವರ್ಷಗಳ ಹಿಂದೆ ತಮಿಳು ನಾಡಿನ ಈರೋಡ್ ನಿಂದ ಇಲ್ಲಿಗೆ ಕೂಲಿ ಕೆಲಸಕ್ಕೆ ಇಲ್ಲಿಗೆ ಬಂದೆವು ಅಂದಿನಿಂದ ಇಂದಿನ ವರೆಗೂ ನಮಗೆ ಯಾವುದೇ ಹಕ್ಕು ಪತ್ರ ಸಿಕ್ಕಿರಲಿಲ್ಲಾ ಕೂಲಿ ಕೆಲಸ ಮಾಡುವ ನಮ್ಮಂಥ ಬಡವರಿಗೆ ಇಂದು ನಿಜವಾದ ಸ್ವಾತಂತ್ರ್ಯ ಸಿಕ್ಕಂತಾಗಿದೆ. ಇನ್ನು ಮುಂದೆ ನಾವು ನೆಮ್ಮದಿಯಾಗಿ ಜೀವನ ಸಾಗಿಸ ಬಹುದು ಹಾಗೂ ನಮ್ಮ ಮಕ್ಕಳ ಭವಿಷ್ಯದ ಬಗ್ಗೆ ಯೋಚಿಸ ಬಹುದು ಎಂದರು.

"ಈ ಗ್ರಾಮ ಕಳೆದ 50–60 ವರ್ಷಗಳ ಹಿಂದೆ ಸಂಪೂರ್ಣ ಗುಡಿಸಲಿನಿಂದ ಕೂಡಿತ್ತು, ಇಲ್ಲಿ ಹಕ್ಕು ಪತ್ರಕ್ಕಾಗಿ ಜನರು ಅನೇಕ ಪ್ರತಿಭಟನೆ ಹಾಗೂ ಅಧಿಕಾರಿಗಳಿಗೆ ಹಾಗೂ ಜನ ಪ್ರತಿನಿಧಿಗಳಿಗೆ ಮನವಿ ಪತ್ರ ಕೊಟ್ಟರೂ ಇಲ್ಲಿಯವರೆಗೂ ಯಾವುದೇ ಪ್ರಯೋಜನವಾಗಿರಲಿಲ್ಲ. ಆದರೆ ನುಡಿದಂತೆ ನಡೆಯುತ್ತಿರುವ ಶಾಸಕ ರವೀಂದ್ರ ಶ್ರೀಕಂಠಯ್ಯ ನಮ್ಮ ಮನೆ ಬಾಗಿಲಿಗೆ ಬಂದು ಹಕ್ಕು ಪತ್ರಕೊಟ್ಟಿದ್ದಾರೆ. ಇದು ನಮ್ಮ ಸೌಭಾಗ್ಯವೇ ಸರಿ, ಗ್ರಾಮ ಪಂಚಾಯ್ತಿಯಲ್ಲೇ ನಮ್ಮ ಗ್ರಾಮ ನತದೃಷ್ಠ ಗ್ರಾಮವಾಗಿತ್ತು ಯಾವುದೇ ಜನ ಪ್ರತಿನಿಧಿಯಾಗಲಿ ನಮ್ಮ ಗ್ರಾಮಕ್ಕೆ ಹೆಚ್ಚು ಸಮಸ್ಯೆ ಇದ್ದರೂ ಕೂಡ ಅನುದಾನ ನೀಡುತ್ತಿರಲಿಲ್ಲಾ ಆದರೆ ಶಾಸಕ ರವೀಂದ್ರ ಶ್ರೀಕಂಠಯ್ಯನವರು ಕೋಟ್ಯಾಂತರ ರೂಗಳ ಅನುದಾನಕೊಟ್ಟು ಹಿಂದೆಂದೂ ನಮ್ಮ ಗ್ರಾಮ ಕಂಡರಿಯದ ಅಭಿವೃದ್ಧಿ ಮಾಡಿ ಇಂದು ನಾವೆಲ್ಲಾ ಸಂತೋಷದಿಂದ ಹೆಮ್ಮೆ ಪಡುವಂತೆ ಮಾಡಿದ್ದಾರೆ.

–ಡಾನ್ ಹೆನ್ರಿ ಗ್ರಾ.ಪಂ ಮಾಜಿ ಸದಸ್ಯ

ಮೈಸೂರು ಮಿತ್ರ

ಒಂದನೇ ಪುಟದಿಂದ

ಮೀಸಲಾತಿ ಹೆಚ್ಚಳ

ದಲಿತರನ್ನು 4 ಗುಂಪುಗಳಾಗಿ ವಿಂಗಡಿಸಿ ಒಟ್ಟಾರೆ ಶೇ. 17ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದೆ. ಪರಿಶಿಷ್ಟ ಜಾತಿ ಎಡ ಸಮು ದಾಯಕ್ಕೆ ಶೇ. 6, ಬಲ ಸಮುದಾಯಕ್ಕೆ ಶೇ. 5.5, ಬೋವಿ, ಬಂಜಾರ ಹಾಗೂ ಕೊರಚ ಸಮುದಾಯಕ್ಕೆ ಶೇ.4.5 ಹಾಗೂ ಇತರೆ ಅಲೆಮಾರಿ ಸಮುದಾಯಕ್ಕೆ ಶೇ. 1ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದೆ. ಸಚಿವ ಸಂಪುಟ ಸಭೆ ನಂತರ ಸಾಮಾನ್ಯವಾಗಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಸುದ್ದಿಗೋಷ್ಠಿ ನಡೆಸಿ ಸಂಪುಟಸಭೆಯ ನಿರ್ಧಾರಗಳನ್ನು ತಿಳಿಸುತ್ತಾರೆ. ಆದರೆ, ಇಂದು ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ಸಂಪುಟ ಸಭೆಯ ನಿರ್ಧಾರಗಳನ್ನು ವಿವರಿಸಿದರು.

ಜಯಪ್ರಕಾಶ್ ಹೆಗಡೆ ವರದಿಯನ್ನಾಧರಿಸಿ ಮೀಸಲಾತಿ ಹಂಚಿಕೆ ವಿಷಯವನ್ನು ಬೆಳಗಾವಿ ಅಧಿವೇಶನದಲ್ಲೇ ಪ್ರಸ್ತಾವನೆ ಮಾಡಿದ್ದೆವು. ಇಂದು ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಂಡಿದ್ದೇವೆ. ಅದರಂತೆ ಪ್ರವರ್ಗ '2ಬಿ'ಯನ್ನು ರದ್ದುಮಾಡಿದ್ದೇವೆ. ಆ ಪ್ರವರ್ಗದಡಿ ಶೇ. 5ರಷ್ಟು ಮೀಸಲಾತಿ ಪಡೆಯುತ್ತಿದ್ದ ಲಿಂಗಾಯತರನ್ನು ಹೊಸದಾಗಿ ಸೃಷ್ಟಿಸಿರುವ ಪ್ರವರ್ಗ '2ಡಿ'ಗೆ ಸೇರಿಸಿ ಶೇ. 7ರಷ್ಟು ಮೀಸಲಾತಿ ನೀಡಲು ನಿರ್ಧರಿಸಲಾಗಿದೆ. ಅದೇ '2ಬಿ' ಪ್ರವರ್ಗದಡಿ ಧಾರ್ಮಿಕ ಅಲ್ಪಸಂಖ್ಯಾತರು ಶೇ. 4ರಷ್ಟು ಮೀಸಲಾತಿ ಪಡೆಯುತ್ತಿದ್ದರು. ಆದರೆ, ಧಾರ್ಮಿಕ ಅಲ್ಪಸಂಖ್ಯಾತರಿಗೆ ಹಿಂದುಳಿದ ವರ್ಗದಡಿ ಮೀಸಲಾತಿ ನೀಡಲಾಗದು. ಈಗಾಗಲೇ ಏಳು ರಾಜ್ಯಗಳಲ್ಲಿ ಧಾರ್ಮಿಕ ಅಲ್ಪ ಸಂಖ್ಯಾತರಿಗೆ ಹಿಂದುಳಿದ ವರ್ಗದಡಿ ನೀಡುತ್ತಿದ್ದ ಮೀಸಲಾತಿಯನ್ನು ರದ್ದುಪಡಿಸಲಾಗಿದೆ. ಆದರೆ, ಅವರಿಗೆ ಅನ್ಯಾಯವಾಗಬಾರದೆಂದು ಅವರನ್ನೂ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಸೇರಿಸಲಾಗಿದೆ. ಇದರಿಂದಾಗಿ ಅವರಿಗೆ ಈ ಹಿಂದಿಗಿಂತ ಹೆಚ್ಚಿನ ಸೌಲಭ್ಯಗಳು ದೊರೆಯಲಿವೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಕಾಡುಗೊಲ್ಲರ ಬಗ್ಗೆ ಅಭಿಪ್ರಾಯ ತಿಳಿಸಲು ಕೇಂದ್ರ ಸರ್ಕಾರ ಸೂಚಿಸಿದೆ. ಕೋಲಿ ಸಮುದಾಯದ ವಿಚಾರವೂ ಕೂಡ ಕೇಂದ್ರ ಸರ್ಕಾರದ ಮುಂದಿದೆ. ಕಾಡು ಕುರುಬ ಮತ್ತು ಗೊಂಡ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಬಗ್ಗೆಯೂ ಚರ್ಚೆಯಾಗಿದೆ. ಆ ಸಂಬಂಧ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಅಲ್ಲದೇ, ಯಾವುದೇ ವರ್ಗಕ್ಕೆ ಸೇರದೇ ಇರುವ ಸಣ್ಣ ಸಣ್ಣ ಸಮುದಾಯಗಳ ಬಗ್ಗೆ ವರದಿ ಪಡೆಯಲಾಗಿದೆ. ಅದನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿ ಮುಂದಿನ ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗುವುದು ಎಂದರು. ಜಂಗಮರನ್ನು ಪರಿಶಿಷ್ಟ ಜಾತಿಗೆ ಸೇರಿಸುವ ವಿಚಾರವಾಗಿ ಸಮಿತಿ ರಚಿಸಲಾಗಿದೆ ಎಂದು ಮುಖ್ಯಮಂತ್ರಿಗಳು ಹೇಳಿದರು.

> **"ರಾಜ್ಯ ಸರ್ಕಾರ ಘೋಷಿಸಿರುವ ಪರಿಷ್ಕೃತ ಮೀಸಲಾತಿ 'ಕನ್ನಡಿಯೊಳಗಿನ ಗಂಟು' ಅಷ್ಟೇ. ಚುನಾವಣೆಯಲ್ಲಿ ರಾಜಕೀಯ ಲಾಭದ ದುರುದ್ದೇಶದಿಂದ ಪ್ರಕಟವಾಗಿರುವ ಈ ಮೀಸಲಾತಿಯಿಂದ ಯಾವುದೇ ಸಮುದಾಯಕ್ಕೂ ಲಾಭ ಇಲ್ಲ. ಇಂತಹ ಗಿಮಿಕ್‌ಗಳಿಗೆ ಜನ ಬಲಿಯಾಗಬಾರದು. ಹಿಂದುಳಿದ ವರ್ಗಗಳ ಗುಂಪಿನಲ್ಲಿದ್ದ ಮುಸ್ಲಿಂ ಸಮುದಾಯಕ್ಕೆ ನೀಡಲಾಗುತ್ತಿದ್ದ ಶೇ. 4ರಷ್ಟು ಮೀಸಲಾತಿಯನ್ನು ರದ್ದುಗೊಳಿಸಿ ಅದನ್ನು ಒಕ್ಕಲಿಗರು ಮತ್ತು ಲಿಂಗಾಯತರಿಗೆ ಹಂಚಲಾಗಿದೆ. ಒಬ್ಬರಿಂದ ಕಿತ್ತು ಇನ್ನೊಬ್ಬರಿಗೆ ನೀಡುವ ಮೂಲಕ ಸಮುದಾಯಗಳ ನಡುವೆ ವೈಮನಸ್ಸು ಬೆಳೆಯುವಂತೆ ಮಾಡುವುದು ಬಿಜೆಪಿಯ ದುರುದ್ದೇಶ. ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಅನುಷ್ಠಾನ ಸುದೀರ್ಘ ಪ್ರಕ್ರಿಯೆ. ಇದಕ್ಕಾಗಿ ಸಂವಿಧಾನದ ಪರಿಚ್ಛೇಧನ 341ಕ್ಕೆ ತಿದ್ದುಪಡಿ ಮಾಡಬೇಕಾಗುತ್ತದೆ. ಈ ಬಗ್ಗೆ ಸಂಪುಟ ಕೈಗೊಂಡಿದ್ದ ತೀರ್ಮಾನವನ್ನು ಇಲ್ಲಿಯವರೆಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸದೇ ಇರುವುದು ರಾಜ್ಯ ಸರ್ಕಾರದ ಅಪ್ರಾಮಾಣಿಕತೆಗೆ ಸಾಕ್ಷಿ. ಮುಸ್ಲಿಮರಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ನೀಡಲಾಗುವ ಮೀಸಲಾತಿಯನ್ನು ವಿಸ್ತರಿಸಲಾಗುವುದು ಎಂದು ಮುಖ್ಯಮಂತ್ರಿಗಳು ಹೇಳಿದ್ದರೂ ಇದು ಸುಲಭಸಾಧ್ಯ ಅಲ್ಲ. ಬೇರೆ ರಾಜ್ಯಗಳಲ್ಲಿಯೂ ಮುಸ್ಲಿಮರು ಇರುವ ಕಾರಣ ಒಂದು ರಾಜ್ಯದ ವ್ಯಾಪ್ತಿಯಲ್ಲಿ ಮೀಸಲಾತಿ ಮರು ಹಂಚಿಕೆ ಮಾಡಲು ಸಾಧ್ಯವಿಲ್ಲ.**
>
> 
>
> – ವಿಪಕ್ಷ ನಾಯಕ ಸಿದ್ದರಾಮಯ್ಯ ಟ್ವೀಟ್

ನಾವು ಅಧಿಕಾರ ಹಿಡಿಯಲೇಬೇಕು...!

ಜೊತೆಗಿದೆ ಎಂಬುದನ್ನು ತೋರಿಸುವ ಉದ್ದೇಶದಿಂದ ಅಮಿತ್ ಷಾ ತಾವು ಭಾಗವಹಿಸಬೇಕಾಗಿದ್ದ ಕಾರ್ಯಕ್ರಮಕ್ಕೂ ಮುನ್ನ ಅವರ ಮನೆಗೆ ತೆರಳಿ ಉಪಹಾರ ಸೇವಿಸಿದ್ದಲ್ಲದೆ, ಚುನಾವಣೆ ಸಂಬಂಧ ಅಲ್ಲಿಯೇ ಚರ್ಚೆ ನಡೆಸಿದರು. ಚುನಾವಣೆವರೆಗೂ ಒಬ್ಬರ ವಿರುದ್ಧ ಒಬ್ಬರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಒಗ್ಗಟ್ಟಿನಿಂದ ಕೆಲಸ ಮಾಡಿ. ನಮ್ಮ ಗುರಿ 113 ಸಂಖ್ಯೆ ದಾಟುವುದು. ಇದುವರೆಗೂ ನಾವು ಬಹುಮತವನ್ನು ಗಳಿಸಲು ಸಾಧ್ಯವಾಗಿಲ್ಲ. ಈ ಬಾರಿ ನಿಮ್ಮ ಬೆನ್ನಹಿಂದೆ ನಾವು ನಿಂತು ಕೆಲಸ ಮಾಡುತ್ತೇವೆ. ಗುರಿಯನ್ನೂ ಮುಟ್ಟೋಣ. ಪಕ್ಷವನ್ನು ಅಧಿಕಾರಕ್ಕೆ ತರೋಣ.

ನಾವು ಏನು ಮಾರ್ಗದರ್ಶನ ಮಾಡುತ್ತೇವೋ ಅದನ್ನು ಮಾಡಿ, ಅಧಿಕಾರಕ್ಕೆ ಏಕೆ ಬರಲು ಸಾಧ್ಯವಿಲ್ಲ ಎನ್ನುವುದನ್ನು ನೋಡುತ್ತೇನೆ. ಚುನಾವಣೆಗೆ ತಂತ್ರಗಾರಿಕೆ ಮುಖ್ಯ. ಇದನ್ನೇ ಎಲ್ಲ ರಾಜಕೀಯ ಪಕ್ಷಗಳು ಮಾಡುತ್ತವೆ. ನಾವು ವಿಭಿನ್ನವಾಗಿ ಮಾಡಿ ತೋರಿಸೋಣ. ರಾಜ್ಯದ 224 ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆ ನೋಡಿದ ನಂತರ ನಿಮಗೆ ಇದರ ಅರಿವಾಗುತ್ತದೆ. ಪಕ್ಷಕ್ಕೆ ದುಡಿದ ಯಾವುದೇ ಕಾರ್ಯಕರ್ತರನ್ನು ಕಡೆಗಾಣಿಸುವುದಿಲ್ಲ. ಜೊತೆ ಜೊತೆಯಲ್ಲೇ ಜನತೆಗೆ ಹೊಸ ಮುಖಗಳನ್ನು ನೀಡೋಣ ಎಂದಿದ್ದಾರೆ. ಉಪಹಾರ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿಜಯೇಂದ್ರ, ಕೇಂದ್ರ ನಾಯಕರು ರಾಜ್ಯದ ರಾಜಕೀಯ ಪರಿಸ್ಥಿತಿಗಳ ಬಗ್ಗೆ ಮುಖ್ಯಮಂತ್ರಿ, ರಾಜ್ಯಾಧ್ಯಕ್ಷರು, ಯಡಿಯೂರಪ್ಪನವರೊಂದಿಗೆ ಸಮಾಲೋಚನೆ ನಡೆಸಿದ್ದಾರೆ. ಮುಂದಿನ ಚುನಾವಣೆಯಲ್ಲಿ ಅತಂತ್ರ ಪರಿಸ್ಥಿತಿ ಸೃಷ್ಟಿಸಲು ಬಿಡಲ್ಲ ಎಂದು ಷಾ ತಿಳಿಸಿದ್ದಾರೆ. ಅಷ್ಟೇ ಅಲ್ಲ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ಮನೆ ಮನೆಗೆ ತಲುಪಿಸುವ ಕಾರ್ಯವಾಗಬೇಕು ಎಂದು ಕಿವಿಮಾತು ಹೇಳಿದ್ದಾರೆ. ರಾಜಕೀಯ ಬಿಟ್ಟು ಇಲ್ಲಿ ಬೇರೆ ಚರ್ಚೆ ನಡೆಯಲಿಲ್ಲ.

ವರುಣಾ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧೆ ವಿಚಾರವಾಗಿ ಮಾತನಾಡಿ, ಈ ಬಗ್ಗೆ ಕೇಂದ್ರ ನಾಯಕರು ತೀರ್ಮಾನ ಮಾಡಬೇಕು. ಈಗಾಗಲೇ ನಾನು ಶಿಕಾರಿಪುರ ಕ್ಷೇತ್ರದಲ್ಲಿ ಒಂದು ಸುತ್ತು ಪ್ರವಾಸ ಮಾಡಿದ್ದೇನೆ. ಶೀಘ್ರದಲ್ಲೇ ಶಿಕಾರಿಪುರದಲ್ಲಿ ಮತ್ತೊಂದು ಸುತ್ತಿನ ಪ್ರವಾಸ ಆರಂಭಿಸುತ್ತೇನೆ. ನಮ್ಮ ತಂದೆ ಯಡಿಯೂರಪ್ಪನವರನ್ನು ಬಿಜೆಪಿ ಪಕ್ಷದಲ್ಲಿ ಕಡೆಗಣಿಸಲಾಗುತ್ತಿದೆ, ಅವರಿಗೆ ಪ್ರಾಮುಖ್ಯತೆ ನೀಡುತ್ತಿಲ್ಲ, ಅವರನ್ನು ಹೈಕಮಾಂಡ್ ಸೈಡ್ ಲೈನ್ ಮಾಡುತ್ತಿದೆ ಎಂಬಿತ್ಯಾದಿ ಮಾತುಗಳು, ಚರ್ಚೆಗಳೆಲ್ಲವೂ ಸುಳ್ಳು. ಯಡಿಯೂರಪ್ಪನವರಿಗೆ ಪಕ್ಷದಲ್ಲಿ ಹೈಕಮಾಂಡ್ ಸೂಕ್ತ ಸ್ಥಾನಮಾನ ನೀಡುತ್ತಿದೆ ಎಂದರು.

ಚಾಣಾಕ್ಷ ನಡೆ: ಬಿಎಸ್‌ವೈ ತಬ್ಬಿಬ್ಬು!

ಕಡೆಯಿಂದ ನನಗೆ ಕೊಡಿಸಿ ಎಂದರು. ಇದರಿಂದ ತಬ್ಬಿಬ್ಬಾದ ಯಡಿಯೂರಪ್ಪನವರು ಏನು ತಿಳಿಯದೇ ತಬ್ಬಿಬ್ಬಾದರು. ಬದಿಯಲ್ಲೇ ಇದ್ದ ಮುಖ್ಯಮಂತ್ರಿಯವರು

ಯಡಿಯೂರಪ್ಪನವರಿಗೆ ಮನವರಿಕೆ ಮಾಡಿಕೊಟ್ಟ ನಂತರ ತಮ್ಮ ಪುತ್ರನಿಗೆ ಹೂಗುಚ್ಛ ಹಸ್ತಾಂತರಿಸಿದರು. ವಿಜಯೇಂದ್ರ ಅವರಿಂದ ಹೂಗುಚ್ಛ ಸ್ವೀಕರಿಸಿದ ಷಾ, ತಂದೆಯ ಮುಂದೆಯೇ ಅಪ್ಪಿಕೊಳ್ಳುವುದರ ಮೂಲಕ ನಿಮ್ಮ ಕುಟುಂಬವನ್ನು ಪಕ್ಷ ಕಡೆಗಾಣಿಸಿಲ್ಲ ಎಂಬ ಸಂದೇಶವನ್ನು ಯಡಿಯೂರಪ್ಪ ಮತ್ತು ರಾಜ್ಯದ ಜನತೆಗೆ ನೀಡುವಲ್ಲಿ ಯಶಸ್ವಿಯಾದರು. ಅಷ್ಟೇ ಅಲ್ಲ ಉಪಹಾರ ಸಂದರ್ಭದಲ್ಲೂ ವಿಜಯೇಂದ್ರ ಅವರಿಂದಲೇ ವಿವಿಧ ಖಾದ್ಯಗಳನ್ನು ತರಿಸಿಕೊಂಡು ಸೇವನೆ ಮಾಡಿದರು.

ಸಂಸದ ಸ್ಥಾನದಿಂದ ರಾಹುಲ್ ಗಾಂಧಿ ಅನರ್ಹ

ತಮ್ಮ ಸ್ಥಾನದಿಂದ ಅನರ್ಹಗೊಂಡಿದ್ದರು. ಲಕ್ಷದ್ವೀಪ ಸಂಸದರಾಗಿದ್ದ ಮೊಹಮ್ಮದ್ ಫೈಝಲ್ ಅವರು ಕೊಲೆ ಯತ್ನ ಪ್ರಕರಣದಲ್ಲಿ ಜೈಲು ಶಿಕ್ಷೆಗೆ ಒಳಗಾಗಿ ಸದಸ್ಯತ್ವ ಕಳೆದುಕೊಂಡಿದ್ದಾರೆ. 2023ರ ಜನವರಿ 13ಕ್ಕೆ ಅವರಿಗೆ ಶಿಕ್ಷೆ ಪ್ರಕಟವಾಗಿತ್ತು. ಹಾಗೆಯೇ ಮೇವು ಹಗರಣದಲ್ಲಿ ಶಿಕ್ಷೆಗೆ ಗುರಿಯಾಗಿ ಆರ್‌ಜೆಡಿ ಮುಖ್ಯಸ್ಥ ಲಲ್ಲೂಪ್ರಸಾದ್ ಯಾದವ್ ತಮ್ಮ ಲೋಕಸಭಾ ಸದಸ್ಯತ್ವವನ್ನು ಕಳೆದುಕೊಂಡಿದ್ದರು. (2013) ಹಾಗೂ ದ್ವೇಷ ಭಾಷಣ ಪ್ರಕರಣ ಸಂಬಂಧ ಸಮಾಜವಾದಿ ಸಂಸದ ಅಜಂ ಖಾನ್ ಅವರನ್ನು 2019ರಲ್ಲಿ ಕೋರ್ಟ್ ಶಿಕ್ಷೆ ನೀಡಿತ್ತು. ಹೀಗಾಗಿ ತಮ್ಮ ಸದಸ್ಯತ್ವದಿಂದ ಅನರ್ಹಗೊಂಡಿದ್ದರು. ಇವರು ಮಾತ್ರ ಅಲ್ಲದೇ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ, ರಾಜ್ಯಸಭಾ ಸಂಸದ ರಶೀದ್‌ಮಸೂದ್, ಹಾಗೂ ಶಾಸಕ ಅಬ್ದುಲ್ಲಾ ಅಜಂ ಖಾನ್ ಅನರ್ಹಗೊಂಡಿದ್ದರು.

ಭಾರತದಲ್ಲಿ ಪ್ರಜಾಪ್ರಭುತ್ವ ಸತ್ತು ಹೋಗಿದೆ: ಲೋಕಸಭಾ ಸದಸ್ಯ ಸ್ಥಾನದಿಂದ ರಾಹುಲ್ ಗಾಂಧಿ ಅನರ್ಹತೆ ಕುರಿತು ಪ್ರತಿಕ್ರಿಯಿಸಿರುವ ಕಾಂಗ್ರೆಸ್, ಕಾನೂನು ಮತ್ತು ರಾಜಕೀಯವಾಗಿ ಹೋರಾಟ ನಡೆಸುವುದಾಗಿ ಹೇಳಿದೆ. ಈ ಕುರಿತು ಟ್ವೀಟ್ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ನಾವು ಹೆದರುವುದು ಅಥವಾ ಮೌನವಾಗಿರುವುದಿಲ್ಲ, ಪ್ರಧಾನಿ ಮೋದಿ– ಅದಾನಿ ನಡುವಿನ ಮಹಾ ಮೆಗಾ ಹಗರಣದ ಬಗ್ಗೆ ಜೆಪಿಸಿ ತನಿಖೆಗೆ ವಹಿಸುವ ಬದಲು ರಾಹುಲ್ ಗಾಂಧಿ ಅವರನ್ನು ಅನರ್ಹಗೊಳಿಸಲಾಗಿದೆ. ಭಾರತದ ಪ್ರಜಾಪ್ರಭುತ್ವ ಸತ್ತು ಹೋಗಿದೆ ಎಂದಿದ್ದಾರೆ. ರಾಹುಲ್ ಗಾಂಧಿ ವಿರುದ್ಧದ ಕ್ರಮದಿಂದ ದಿಗ್ಭ್ರಮೆಗೊಂಡಿದ್ದೇನೆ ಎಂದು ಹಿರಿಯ ಕಾಂಗ್ರೆಸ್ ನಾಯಕ ಶಶಿ ತರೂರ್ ಹೇಳಿದ್ದಾರೆ. ರಾಜಕೀಯ ಕಾರಣದಿಂದ ಹೀಗೆ ಮಾಡಲಾಗಿದ್ದು, ನಮ್ಮ ಪ್ರಜಾಪ್ರಭುತ್ವಕ್ಕೆ ಕೆಟ್ಟದ್ದನ್ನು ಸೂಚಿಸುತ್ತದೆ ಎಂದು ಅವರು ಹೇಳಿದ್ದಾರೆ.

ವರುಣಾ ಕ್ಷೇತ್ರದಿಂದ ಸ್ಪರ್ಧಿಸ್ತೇನೆ...!

ರಹದಾರಿ ಮಾಡಿಕೊಟ್ಟಿದ್ದಾರೆ. ಆದರೆ ಸಿದ್ದರಾಮಯ್ಯ ಎರಡು ಕ್ಷೇತ್ರಗಳಿಂದ ಸ್ಪರ್ಧಿಸುವ ಬಗ್ಗೆ ಸುಳಿವು ನೀಡಿದ್ದಾರೆ. ಆ ಕ್ಷೇತ್ರ ಯಾವುದು ಎಂಬುದರ ಬಗ್ಗೆ ಕುತೂಹಲ ಮೂಡಿದೆ. ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಅವರ ರಾಜಕೀಯ ಭವಿಷ್ಯದ ಹಿತದೃಷ್ಟಿಯಿಂದ ವರುಣಾದಲ್ಲಿ ಸ್ಪರ್ಧಿಸುವ ಬಗ್ಗೆ ಈ ಮೊದಲು ಸಿದ್ದರಾಮಯ್ಯ ಚಿಂತಿತರಾಗಿದ್ದರು. ಆದರೆ ಇದೀಗ ಪಕ್ಷದ ಮುಖಂಡರ ಸಲಹೆ ಮೇರೆಗೆ ವರುಣಾ ಕ್ಷೇತ್ರವನ್ನು ಒಪ್ಪಿಕೊಂಡಿದ್ದಾರೆ.

ಕಾಂಗ್ರೆಸ್‌ನಿಂದ ರಾಜಭವನ ಚಲೋ; ಸರ್ಕಾರದ ವಜಾಕ್ಕೆ ಆಗ್ರಹಿಸಿ ರಾಜ್ಯ ಕಾಂಗ್ರೆಸ್ ಮನವಿ

ರಾಜ್ಯದ ಪರಿಶಿಷ್ಟ ಸಮುದಾಯಗಳಿಗೆ ಬಿಜೆಪಿ ಸರ್ಕಾರದಿಂದ ದ್ರೋಹ ಆರೋಪ

ಬೆಂಗಳೂರು, ಮಾ. 24 (ಕೆಎಂಶಿ)–ಮೀಸಲಾತಿ ಹೆಚ್ಚಳ ವಿಚಾರವಾಗಿ ರಾಜ್ಯ ಬಿಜೆಪಿ ಸರ್ಕಾರ ಕರ್ನಾಟಕದ ಪರಿಶಿಷ್ಟ ಜಾತಿ ಹಾಗೂ ಪಂಗಡದ ಸಮುದಾಯಗಳಿಗೆ ಮಾಡುತ್ತಿರುವ ದ್ರೋಹವನ್ನು ಖಂಡಿಸಿ ಕಾಂಗ್ರೆಸ್ ಪಕ್ಷ ಇಂದು ರಾಜಭವನ ಚಲೋ ಹಮ್ಮಿಕೊಂಡಿತ್ತು.



ಕೆಪಿಸಿಸಿ ಕಚೇರಿಯಿಂದ ಪ್ರತಿಭಟನಾ ರ್‍ಯಾಲಿ ನಡೆಸಿ, ರಾಜ್ಯಪಾಲರನ್ನು ಭೇಟಿ ಮಾಡಿ ಶೋಷಿತ ಸಮುದಾಯಗಳಿಗೆ ಮೋಸ ಮಾಡಿರುವ ಬಿಜೆಪಿ ಸರ್ಕಾರವನ್ನು ವಜಾಗೊಳಿಸಬೇಕು ಎಂದು ಮನವಿ ಸಲ್ಲಿಸಿದರು.

ರಾಜ್ಯಪಾಲರಿಗೆ ಮನವಿ ಸಲ್ಲಿಸಿ ಹೊರಬಂದ ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ರಾಜ್ಯದ ಎಲ್ಲ ಪರಿಶಿಷ್ಟ ಜಾತಿ ಹಾಗೂ ಪಂಗಡದ ಸಮುದಾಯಗಳ ಮೀಸಲಾತಿ ಹಾಗೂ ಸಮಸ್ಯೆಗಳ ಅಧ್ಯಯನ ಮಾಡಲು ಕಾಂಗ್ರೆಸ್ ಸರ್ಕಾರ ನಾಗಮೋಹನ್ ದಾಸ್ ಅವರ ಸಮಿತಿ ರಚನೆ ಮಾಡಿತ್ತು. ಈ ಸಮಿತಿ ಶಿಫಾರಸ್ಸು ಬಂದ ನಂತರ ಇದು ಜಾರಿ ಆಗಬೇಕು. ಪರಿಶಿಷ್ಟ ಸಮುದಾಯಗಳಿಗೆ ನ್ಯಾಯ ಸಿಗಬೇಕು ಎಂದು ನಾವು ಆಗ್ರಹ ಮಾಡಿದೆವು.

ನಮ್ಮ ಒತ್ತಡಕ್ಕೆ ಮಣಿದ ಸರ್ಕಾರ ಸಂಪುಟದಲ್ಲಿ ತೀರ್ಮಾನ ಮಾಡಿ ಸುಗ್ರೀವಾಜ್ಞೆ ಹೊರಡಿಸಿ ಅದನ್ನು ರಾಜ್ಯಪಾಲರಿಗೆ ಕಳುಹಿಸಿತ್ತು ನಂತರ ವಿಧಾನ ಮಂಡಲ ಅಧಿವೇಶನದಲ್ಲಿ ಈ ವಿಚಾರವಾಗಿ ಕಾನೂನು ತಂದಾಗ ನಾವು ಒಮ್ಮತದ ಬೆಂಬಲ ನೀಡಿ ಅನುಮೋದನೆ ನೀಡಿದ್ದೆವು. ನಂತರ ರಾಜ್ಯ ಸರ್ಕಾರ ಇದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಬೇಕಿತ್ತು. ಕಳೆದ ನಾಲ್ಕೈದು ತಿಂಗಳಿಂದ ಕೇಂದ್ರ ಸರ್ಕಾರಕ್ಕೆ ಈ ಕುರಿತು ಪ್ರಸ್ತಾವನೆ ಸಲ್ಲಿಸಲಿಲ್ಲ.

ಈ ವಿಚಾರವಾಗಿ ಸಂಸತ್ತಿನಲ್ಲಿ ಪ್ರಶ್ನಿಸಿದಾಗ, ಕೇಂದ್ರ ಮಂತ್ರಿಗಳಿಂದಲೇ ರಾಜ್ಯ ಸರ್ಕಾರದಿಂದ ಯಾವುದೇ ಪ್ರಸ್ತಾವನೆ ಬಂದಿಲ್ಲ ಎಂಬ ಸತ್ಯಾಂಶ ಹೊರಬಂದಿತು. ಪರಿಶಿಷ್ಟ ಜನರಿಗೆ ದೊಡ್ಡ ಸಹಾಯ ಮಾಡಿದ್ದೇವೆ ಎಂದು ಸುಳ್ಳು ಹೇಳುವ ಮೂಲಕ ಬಿಜೆಪಿ ಸರ್ಕಾರ ಅವರಿಗೆ ದ್ರೋಹ ಮಾಡಿದೆ.

ರಾಜ್ಯದ ಜನರಿಗೆ ದ್ರೋಹ ಬಗೆದಿರುವ ಹಿನ್ನೆಲೆಯಲ್ಲಿ ಈ ಸರ್ಕಾರ ಅಧಿಕಾರದಲ್ಲಿ ಮುಂದುವರಿಯಬಾರದು. ಕೂಡಲೇ ಈ ಸರ್ಕಾರವನ್ನು ವಜಾಗೊಳಿಸಬೇಕು ಎಂದು ರಾಜ್ಯಪಾಲರನ್ನು ಕೇಳಿದ್ದು, ಈ ವಿಚಾರವಾಗಿ ಪರಿಶೀಲನೆ ನಡೆಸುತ್ತೇವೆ ಎಂದು ಅವರು ಭರವಸೆ ನೀಡಿದ್ದಾರೆ.

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳವನ್ನು ಶೆಡ್ಯೂಲ್ 9ಕ್ಕೆ ಸೇರ್ಪಡೆಗೊಳಿಸಿ

ಕೇಂದ್ರಕ್ಕೆ ರಾಜ್ಯ ಸರ್ಕಾರ ಪತ್ರ

ಬೆಂಗಳೂರು, ಮಾ.24– ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳವನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರ್ಪಡೆಗೊಳಿಸುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಪತ್ರ ಬರೆದಿದೆ.

ರಾಜ್ಯ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಬಲ್ಲಾ ಅವರಿಗೆ ಪತ್ರ ಬರೆದು ಪ್ರಸ್ತಾವನೆ ಸಲ್ಲಿಸಿದ್ದಾರೆ. ಆ ಮೂಲಕ ಮೀಸಲಾತಿ ಹೆಚ್ಚಳಕ್ಕೆ ಕಾನೂನು ಬಲ ನೀಡಲು ಶೆಡ್ಯೂಲ್ 9 ಸೇರ್ಪಡೆ ಮಾಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ.

ಫೆ. 9ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ, 2022 (ಕರ್ನಾಟಕ ಕಾಯ್ದೆ 01 2023) ನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡಲು ತೀರ್ಮಾನಿಸಲಾಗಿತ್ತು. ಮೀಸಲಾತಿ ಹೆಚ್ಚಳದ ಈ ವಿಧೇಯಕಕ್ಕೆ 2023ರ ಜನವರಿ 11ರಂದು ರಾಜ್ಯಪಾಲರಿಂದ ಒಪ್ಪಿಗೆ ಪಡೆಯಲಾಗಿತ್ತು.

ಅದರಂತೆ ರಾಜ್ಯ ಸರ್ಕಾರ ಮೀಸಲಾತಿ ಪ್ರಮಾಣವನ್ನು ಪರಿಶಿಷ್ಟ ಜಾತಿ(ಎಸ್‌ಸಿ)ಗೆ ಶೇ.15ರಿಂದ ಶೇ.17 ಹಾಗೂ ಪರಿಶಿಷ್ಟ ಪಂಗಡ(ಎಸ್‌ಟಿ)ಕ್ಕೆ ಶೇ.3ರಿಂದ ಶೇ.7ಕ್ಕೆ ಹೆಚ್ಚಳ ಮಾಡಿ ಬೆಳಗಾವಿ ಅಧಿವೇಶನದಲ್ಲಿ ವಿಧೇಯಕ ಮಂಡಿಸಿ ಅನುಮೋದನೆ ಪಡೆದಿತ್ತು. ಆದರೆ, ಈ ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಕಾನೂನು ಬಲ ನೀಡಲು ಸಂವಿಧಾನದ ಶೆಡ್ಯೂಲ್ 9ಕ್ಕೆ ಸೇರ್ಪಡೆ ಮಾಡಬೇಕಾಗಿತ್ತು. ಈ ಸಂಬಂಧ ಸಚಿವ ಸಂಪುಟ ಸಭೆಯಲ್ಲಿ ಕೇಂದ್ರಕ್ಕೆ ಶಿಫಾರಸು ಮಾಡಲು ನಿರ್ಧರಿಸಲಾಗಿತ್ತು.

ಇದೀಗ ಸರ್ಕಾರ ಮೀಸಲಾತಿ ಹೆಚ್ಚಳ ಪ್ರಕ್ರಿಯೆಯನ್ನು ಮತ್ತಷ್ಟು ಮುಂದಕ್ಕೆ ತೆಗೆದುಕೊಂಡು ಹೋಗಿದೆ ಮೀಸಲಾತಿ ಹೆಚ್ಚಳ ಸಂಬಂಧ ಶೆಡ್ಯೂಲ್ 9ಕ್ಕೆ ಸೇರಿಸುವಂತೆ ಕೇಂದ್ರಕ್ಕೆ ಮನವಿ ಮಾಡಿಕೊಂಡಿದೆ. ಪತ್ರದಲ್ಲಿ ರಾಜ್ಯಪಾಲರ ಅಂಕಿತ ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಅಧಿನಿಯಮ 2022ನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸುವಂತೆ ಕೋರಿದ್ದಾರೆ.

2025ಕ್ಕೆ ಕ್ಷಯ ಮುಕ್ತ ಭಾರತ ಮಾಡಲು ಕೈಜೋಡಿಸಿ

ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ಸಾರ್ವಜನಿಕರಲ್ಲಿ ಮನವಿ

- ಮೈಸೂರು ಜಿಲ್ಲೆಯಲ್ಲಿ ವರ್ಷಕ್ಕೆ ನಾಲ್ಕು ಸಾವಿರ ಹೊಸ ಪ್ರಕರಣ ಪತ್ತೆ
- ಪ್ರಸ್ತುತ ಎರಡು ಸಾವಿರ ಪ್ರಕರಣ ಸಕ್ರಿಯವಾಗಿವೆ ಎಚ್ಚರ... ಎಚ್ಚರ...



ಮೈಸೂರು, ಮಾ.24(ಎಂಟಿವೈ)– ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಶಯದಂತೆ 2025ಕ್ಕೆ ಕ್ಷಯ ಮುಕ್ತ ಭಾರತ ಮಾಡಲು ಆರೋಗ್ಯ ಇಲಾಖೆ ಹಲವು ಕಾರ್ಯಕ್ರಮ ರೂಪಿಸಿದ್ದು, ಕ್ಷಯರೋಗಿಗಳ ಪತ್ತೆ ಹಾಗೂ ಚಿಕಿತ್ಸೆಗೆ ಸಾರ್ವಜನಿಕರ ಸಹಕಾರ ಅಗತ್ಯ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್. ಪ್ರಸಾದ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಜಿಲ್ಲಾ ಆರೋಗ್ಯಾಧಿಕಾರಿಗಳ ಕಚೇರಿ ಆವರಣದ ವೈದ್ಯರ ಭವನದಲ್ಲಿ ಶುಕ್ರವಾರ ನಡೆದ ಕ್ಷಯರೋಗ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ಷಯ ಮುಕ್ತ ಭಾರತ, ಹಾಗೆಯೇ ಕ್ಷಯ ಮುಕ್ತ ಮೈಸೂರು ಮಾಡಲು ಕಾರ್ಯಕ್ರಮ ರೂಪಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಪ್ರತಿವರ್ಷ ನಾಲ್ಕು ಸಾವಿರ ಕ್ಷಯ ರೋಗಿಗಳು ಪತ್ತೆಯಾಗುತ್ತಿದ್ದಾರೆ. ಅವರನ್ನು ಗುರುತಿಸಿ, ಸೂಕ್ತ ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ಓರ್ವ ರೋಗಿಗೆ ಚಿಕಿತ್ಸೆ ನೀಡಿ ಗುಣಪಡಿಸಲು ಕನಿಷ್ಠ 6 ತಿಂಗಳು ಕಾಲಾವಕಾಶ ಬೇಕಾಗುತ್ತದೆ. ಈ ಅವಧಿಯಲ್ಲಿ ಕಟ್ಟುನಿಟ್ಟಾಗಿ ಚಿಕಿತ್ಸೆ ಪಡೆದುಕೊಂಡರೆ ಗುಣಮುಖರಾಗಬಹುದು ಎಂದರು.

ಪ್ರಸ್ತುತ ಮೈಸೂರು ಜಿಲ್ಲೆಯಲ್ಲಿ ಎರಡು ಸಾವಿರ ಕ್ಷಯ ರೋಗಿಗಳಿದ್ದಾರೆ. ಅವರಿಗೆ ಆರೋಗ್ಯ ಇಲಾಖೆ ವತಿಯಿಂದ ಚಿಕಿತ್ಸೆ ನೀಡಲಾಗುತ್ತಿದೆ. ಇದರೊಂದಿಗೆ ಕ್ಷಯ ರೋಗಿಗಳ ಪತ್ತೆಗೂ ಕ್ರಮ ಕೈಗೊಳ್ಳಲಾಗಿದೆ. ಕೆಲವರು ಕ್ಷಯ ರೋಗಕ್ಕೆ ತುತ್ತಾಗಿದ್ದರೂ ಗೌಪ್ಯವಾಗಿಯೇ ಇರುತ್ತಾರೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು, ಸಂಘ–ಸಂಸ್ಥೆಗಳೂ ಸಹಕಾರ ಪಡೆದು ಇಂತಹವರ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಈ ರೋಗಿಗಳಿಗೆ ಸರ್ಕಾರವೇ ಚಿಕಿತ್ಸಾ ವೆಚ್ಚ ಭರಿಸುತ್ತದೆ. ಮೈಸೂರು ಜಿಲ್ಲೆಯಲ್ಲಿ ಸಂಘ–ಸಂಸ್ಥೆಗಳ ಆರೋಗ್ಯ ಇಲಾಖೆಯೊಂದಿಗೆ ಕೈಜೋಡಿಸಿದ್ದು, ಸಕ್ರಿಯವಾಗಿರುವ 2 ಸಾವಿರ ಪ್ರಕರಣಗಳಲ್ಲಿ 897 ಮಂದಿ ಕ್ಷಯರೋಗಿಗಳನ್ನು ವಿವಿಧ ಸಂಸ್ಥೆಗಳು ದತ್ತು ಪಡೆದು ಪೌಷ್ಟಿಕ ಆಹಾರ ಪೂರೈಸುತ್ತಿವೆ. ಸರ್ಕಾರ ಕ್ಷಯ ರೋಗಿಗಳಿಗೆ 6 ತಿಂಗಳ ಅವಧಿಗೆ ಪ್ರತಿ ತಿಂಗಳು ತಲಾ 500 ರೂ. ಆರ್ಥಿಕ ನೆರವು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಕ್ಷಯ ರೋಗದ ಲಕ್ಷಣ ಕಂಡು ಬಂದರೆ ಸಮೀಪದ ಆರೋಗ್ಯ ಕೇಂದ್ರ ತಾಲೂಕು ಸಾರ್ವಜನಿಕ ಆಸ್ಪತ್ರೆ ಸೇರಿದಂತೆ ಸರ್ಕಾರಿ ಆಸ್ಪತ್ರೆಗಳಿಗೆ ತೆರಳಿ ಚಿಕಿತ್ಸೆ ಪಡೆದುಕೊಳ್ಳುವಂತೆ ಸಲಹೆ ನೀಡಿದರು.

ಜಾಗೃತಿ ಜಾಥ: ಕ್ಷಯ ರೋಗದ ಅಂಗವಾಗಿ ಶುಕ್ರವಾರ ಬೆಳಗ್ಗೆ ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಮುಂಭಾಗ ಜಾಗೃತಿ ಜಾಥ ಆಯೋಜಿಸಲಾಗಿತ್ತು. ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿವರೆಗೆ ಜಾಥ ತೆರಳಿತು. ಈ ಸಂದರ್ಭದಲ್ಲಿ ವಿವಿಧ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು, ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಪಾಲ್ಗೊಂಡು ಕ್ಷಯ ರೋಗದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಆರೋಗ್ಯ ಇಲಾಖೆಯ ವಿಭಾಗೀಯ ಜಂಟಿ ನಿರ್ದೇಶಕ ಡಾ.ರಾಜೇಶ್ವರಿ, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ.ಸಿರಾಜ್ ಅಹಮದ್, ಆರ್‌ಸಿಹೆಚ್‌ಓ ಡಾ.ಜಯಂತ್, ಜಿಲ್ಲಾ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಚಿದಂಬರ, ಲಯನ್ಸ್ ಕ್ಲಬ್ ರವೀಂದ್ರ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ನಾಳೆ ಸಿಗ್ಮಾ ಆಸ್ಪತ್ರೆಯಲ್ಲಿ ಉಚಿತ ಕಿಡ್ನಿ ರೋಗ ತಪಾಸಣಾ ಶಿಬಿರ

ಮೈಸೂರು, ಮಾ.24(ಪಿಎಂ)– ಮೈಸೂರಿನ ಸರಸ್ವತಿಪುರಂನ ಸಿಗ್ಮಾ ಆಸ್ಪತ್ರೆ ವತಿಯಿಂದ ವಿಶ್ವ ಕಿಡ್ನಿ ದಿನಾಚರಣೆ ಅಂಗವಾಗಿ ಮಾ.26ರಂದು ಆಸ್ಪತ್ರೆಯಲ್ಲಿ ಉಚಿತ ಕಿಡ್ನಿ ರೋಗ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ಸಿಗ್ಮಾ ಆಸ್ಪತ್ರೆ ನಿರ್ದೇಶಕರೂ ಆದ ಕಿಡ್ನಿ ತಜ್ಞವೈದ್ಯ ಡಾ.ಕೆ.ಎಂ.ಮಾದಪ್ಪ ತಿಳಿಸಿದರು.

ಆಸ್ಪತ್ರೆಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಿಡ್ನಿ ಕಾಯಿಲೆಯ ದುಷ್ಪರಿಣಾಮ ಕಡಿಮೆ ಮಾಡುವ ಮೊದಲ ಮಾರ್ಗವೆಂದರೆ ಆರಂಭಿಕ ಹಂತದಲ್ಲಿ ಅದನ್ನು ಪತ್ತೆಹಚ್ಚುವುದಾಗಿದೆ. ಜೊತೆಗೆ ಮೊದಲ ಹಂತದಲ್ಲೇ ಪತ್ತೆಹಚ್ಚುವ ಮೂಲಕ ಸೂಕ್ತ ಚಿಕಿತ್ಸೆ ನೀಡಿದರೆ ಅದರಿಂದ ಉಂಟಾಗುವ ಹಾನಿಯನ್ನು ತಗ್ಗಿಸಬಹುದು ಎಂದರು.

ಮೂತ್ರ ಪರೀಕ್ಷೆ, ಅಲ್ಟ್ರಾಸೌಂಡ್ ಸ್ಕ್ಯಾನ್ ಅಥವಾ ರಕ್ತ ಪರೀಕ್ಷೆಯಂತಹ ಪರೀಕ್ಷೆಗಳಿಂದ ಕಿಡ್ನಿ ಅನಾರೋಗ್ಯ ಪತ್ತೆಹಚ್ಚಬಹುದು. ಆಸ್ಪತ್ರೆಯಲ್ಲಿ ಅಂದು ಹಮ್ಮಿಕೊಂಡಿರುವ ಉಚಿತ ತಪಾಸಣೆಯಲ್ಲಿ ಮೂತ್ರ ಪರೀಕ್ಷೆ, ತಜ್ಞರ ಸಮಾಲೋಚನೆ ಮತ್ತು ಅಗತ್ಯವಿದ್ದರೆ ಕಿಡ್ನಿ ಸ್ಕ್ಯಾನ್ ಮತ್ತು ಕ್ರಿಯೆಟಿನೈನ್ ಪರೀಕ್ಷೆಯನ್ನು ಜನಸಾಮಾನ್ಯರು ಪಡೆಯಬಹುದು. ಅಂದು ಬೆಳಗ್ಗೆ 8.30ಕ್ಕೆ ಶಿಬಿರಕ್ಕೆ ಚಾಲನೆ ದೊರೆಯಲಿದ್ದು, ಮುಖ್ಯ ಅತಿಥಿಯಾಗಿ ಶಾಸಕ ಎಲ್.ನಾಗೇಂದ್ರ ಭಾಗವಹಿಸಲಿದ್ದಾರೆ.

ಕಳೆದ 8 ವರ್ಷಗಳಲ್ಲಿ 25 ಸಾವಿರಕ್ಕೂ ಅಧಿಕ ಯಶಸ್ವಿ ಶಸ್ತ್ರಚಿಕಿತ್ಸೆಗಳನ್ನು ನಡೆಸುವ ಮೂಲಕ ನಮ್ಮ ಆಸ್ಪತ್ರೆ ಕಿಡ್ನಿ ಅನಾರೋಗ್ಯದ ಆರೈಕೆಯಲ್ಲಿ ಪರಿಣಿತಿ ಹೊಂದಿದೆ. ಆಸ್ಪತ್ರೆಯ ನೆಫ್ರಾಲಜಿ ವಿಭಾಗವು ಕಳೆದ 4 ವರ್ಷಗಳಲ್ಲಿ 30 ಸಾವಿರ ಡಯಾಲಿಸಿಸ್ ಒದಗಿಸಿದೆ. ಅಲ್ಲದೆ, 15 ಮೂತ್ರಪಿಂಡ ಕಸಿ ಪ್ರಕ್ರಿಯೆ ಪೂರ್ಣಗೊಳಿಸಿದೆ ಎಂದರು. ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಎಸ್.ಜ್ಞಾನಶಂಕರ್, ನಿರ್ದೇಶಕಿ ಡಾ.ರಾಜೇಶ್ವರಿ ಮಾದಪ್ಪ, ಆಸ್ಪತ್ರೆ ವೈದ್ಯರಾದ ಡಾ.ಸೋಮಣ್ಣ, ಡಾ.ಅನಿಕೇತ್ ಪ್ರಭಾಕರ್ ಗೋಷ್ಠಿಯಲ್ಲಿದ್ದರು.



ವರುಣಾದಿಂದ ಸಿದ್ದರಾಮಯ್ಯ ಸ್ಪರ್ಧೆ ಹಿನ್ನಲೆ: ಪುತ್ರ ಡಾ.ಯತೀಂದ್ರ ಫುಲ್ ಆಕ್ಟೀವ್



ಮೈಸೂರು, ಮಾ.24– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ವರುಣಾ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂಬುದನ್ನು ಅವರ ಪುತ್ರ, ಹಾಲಿ ವರುಣ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಶಾರದಾದೇವಿನಗರ ನಿವಾಸದಲ್ಲಿ ಶುಕ್ರವಾರ ರಾತ್ರಿ ವರುಣಾ ಕ್ಷೇತ್ರದ ಮುಖಂಡರೊಂದಿಗೆ ದಿಢೀರ್ ಸಭೆ ನಡೆಸಿದ ಅವರು, ಆಡಳಿತದ ಹಿತದೃಷ್ಟಿಯಿಂದ ರಾಜಧಾನಿ ಬೆಂಗಳೂರಿಗೆ ಹತ್ತಿರವಾದ ಕೋಲಾರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಲು ತಂದೆಯವರು (ಸಿದ್ದರಾಮಯ್ಯ) ಬಯಸಿದ್ದರು. ಆದರೆ ಸುರಕ್ಷತೆಯ ದೃಷ್ಟಿಯಿಂದ ವರುಣಾ ಕ್ಷೇತ್ರದಿಂದ ಸ್ಪರ್ಧಿಸುವಂತೆ ಕಾಂಗ್ರೆಸ್ ಹೈಕಮಾಂಡ್ ಹಾಗೂ ಕೆಲ ಮುಖಂಡರು ಸಲಹೆ ನೀಡಿರುವುದರಿಂದ ವರುಣಾ ಕ್ಷೇತ್ರದಿಂದಲೇ ಕಣಕ್ಕಿಳಿಯಲಿದ್ದಾರೆ ಎಂದು ತಿಳಿಸಿದರು.

ಇದು ಸಿದ್ದರಾಮಯ್ಯನವರು ಸ್ಪರ್ಧಿಸುವ ಕೊನೆಯ ಚುನಾವಣೆ. ಹಾಗಾಗಿ ರಾಜ್ಯದ ಹಲವು ಕ್ಷೇತ್ರಗಳಲ್ಲಿ ಸ್ಪರ್ಧಿಸುವಂತೆ ಅವರ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು ಒತ್ತಾಯಿಸುತ್ತಿದ್ದಾರೆ. ಆದರೆ ಎಲ್ಲರ ಸಲಹೆಯಂತೆ ತವರು ಕ್ಷೇತ್ರ ವರುಣಾದಿಂದ ಸ್ಪರ್ಧಿಸಲಿದ್ದಾರೆ. ಅದಕ್ಕಾಗಿ ನಾವೆಲ್ಲ ಸಜ್ಜಾಗಬೇಕು. ಈ ಹಿಂದಿನಂತೆ ಪಕ್ಷದ ಕಾರ್ಯಕರ್ತರು, ಮುಖಂಡರು ಅವರ ಗೆಲುವಿಗೆ ಶ್ರಮಿಸಬೇಕು. ಆ ಮೂಲಕ ಕ್ಷೇತ್ರದ ಮತ್ತಷ್ಟು ಅಭಿವೃದ್ಧಿಗೆ ಪಣ ತೊಡಬೇಕು ಎಂದು ಮನವಿ ಮಾಡಿದರು.

ಖ್ಯಾತ ಗಾಯಕಿ ಬಾಂಬೆ ಜಯಶ್ರೀಗೆ ಬ್ರೈನ್ ಹ್ಯಾಮರೇಜ್, ಆಸ್ಪತ್ರೆಗೆ ತುರ್ತು ಏರ್ ಲಿಫ್ಟ್

ಚೆನ್ನೈ: ಖ್ಯಾತ ಗಾಯಕಿ ಬಾಂಬೆ ಜಯಶ್ರೀ ಅವರು ಮೆದುಳಿನ ರಕ್ತಸ್ರಾವಕ್ಕೆ ತುತ್ತಾಗಿದ್ದು ಅವರನ್ನು ಕೂಡಲೇ ಆಸ್ಪತ್ರೆಗೆ ಏರ್ ಲಿಫ್ಟ್ ಮಾಡಲಾಗಿದೆ.



ಬ್ರಿಟನ್‌ನ ಲಿವರ್‌ಪೂಲ್ ಹೋಟೆಲ್‌ನಲ್ಲಿ ಬಾಂಬೆ ಜಯಶ್ರೀ ಅವರಿಗೆ ಮೆದುಳಿನ ರಕ್ತಸ್ರಾವವಾಗಿದ್ದು, ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ಕೂಡಲೇ ಆಸ್ಪತ್ರೆಗೆ ಏರ್ ಲಿಫ್ಟ್ ಮಾಡಲಾಗಿದೆ. ಆಸ್ಪತ್ರೆಯಲ್ಲಿ ಕೂಡಲೇ ಅವರಿಗೆ ತುರ್ತು ಮೆದುಳು ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

ಅಂತೆಯೇ ಮತ್ತೊಂದು ಮೂಲಗಳ ಪ್ರಕಾರ ಜಯಶ್ರೀ ಅವರ ಮೆದುಳಿನ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದೆ ಎಂದು ವೈದ್ಯಮೂಲಗಳು ತಿಳಿಸಿವೆ. ಗಾಯಕಿ ಜಯಶ್ರೀ ಬ್ರಿಟನ್ ಪ್ರವಾಸದಲ್ಲಿದ್ದಾಗ ಅವರು ಈ ಬ್ರೈನ್ ಹ್ಯಾಮರೇಜ್ ಗೆ ತುತ್ತಾಗಿದ್ದಾರೆ.

ವರದಿಗಳ ಪ್ರಕಾರ, ಹಿಂದಿನ ರಾತ್ರಿ ಅವರು ತೀವ್ರ ಕುತ್ತಿಗೆ ನೋವಿನಿಂದ ಬಳಲುತ್ತಿದ್ದರು. ಹೀಗಾಗಿ ಅವರು ಉಪಹಾರ ಮತ್ತು ಊಟಕ್ಕೆ ಬರಲಿಲ್ಲ ನಂತರ ಅವರು ರೂಮಿನಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಪತ್ತೆಯಾಗಿದ್ದು ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ

ಅಂತೆಯೇ ಜಯಶ್ರೀ ಅವರ ಆರೋಗ್ಯ ಸ್ಥಿರವಾದ ಬಳಿಕ ಅವರನ್ನು ಚೆನ್ನೈಗೆ ಕರೆತಂದು ಹೆಚ್ಚಿನ ಚಿಕಿತ್ಸೆ ಕೊಡಿಸಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕಳೆದ ವಾರವಷ್ಟೇ ಸಂಗೀತ ಅಕಾಡೆಮಿಯು 2023ರ ಪ್ರತಿಷ್ಠಿತ ಸಂಗೀತ ಕಲಾನಿಧಿ ಪ್ರಶಸ್ತಿಯನ್ನು ಜಯಶ್ರೀ ಅವರಿಗೆ ಪ್ರದಾನ ಮಾಡುವುದಾಗಿ ಘೋಷಿಸಿತ್ತು ಜಯಶ್ರೀ ಅವರು ತಮಿಳು, ಕನ್ನಡ, ತೆಲುಗು, ಮಲಯಾಳಂ ಮತ್ತು ಹಿಂದಿ ಸೇರಿದಂತೆ ಹಲವಾರು ಭಾಷೆಗಳಲ್ಲಿ ಹಾಡಿದ್ದಾರೆ. ಇತ್ತೀಚೆಗಷ್ಟೇ ಮ್ಯೂಸಿಕ್ ಅಕಾಡೆಮಿಯಿಂದ ಸಂಗೀತ ಕಲಾನಿಧಿ ಪ್ರಶಸ್ತಿ ಲಭಿಸಿತ್ತು.

ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿರುದ್ಧ ಒಕ್ಕಲಿಗರ ಪ್ರತಿಭಟನೆ

ಹಲವರ ಬಂಧನ, ಬಿಡುಗಡೆ



> ಶ್ರೀ ನಿರ್ಮಲಾನಂದ ಶ್ರೀಗಳು ಈ ನಾಡಿನ ಶ್ರೇಷ್ಠ ಸಂತರಾಗಿದ್ದು, ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ನಾನು ಶ್ರೀಗಳ ವಿರುದ್ಧ ಯಾವುದೇ ಹೇಳಿಕೆ ನೀಡಿಲ್ಲ. ಅಪಮಾನ ಮಾಡುವಂತಹ ಕೆಲಸ ಮಾಡಿಲ್ಲ. ಅದನ್ನು ಕೆಲವರು ರಾಜಕೀಯವಾಗಿ ಬಳಸಿಕೊಂಡಿದ್ದಾರೆ. ನಾನೆಂದೂ ಒಕ್ಕಲಿಗರ ವಿರೋಧಿಯಲ್ಲ. ನನ್ನ ಹೇಳಿಕೆಯಿಂದ ಬೇಸರವಾಗಿದ್ದರೆ ಶ್ರೀಗಳಲ್ಲಿ ನಾನು ಕ್ಷಮೆ ಕೇಳುತ್ತೇನೆ.
>
> – **ಅಡ್ಡಂಡ ಕಾರ್ಯಪ್ಪ**, ರಂಗಾಯಣ ನಿರ್ದೇಶಕ.

ಮೈಸೂರು, ಮಾ.24(ಆರ್‌ಕೆ)– ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ಒಕ್ಕಲಿಗ ಸಮುದಾಯದ ಸಂಘಟನೆಗಳ ಮುಖಂಡರು ಇಂದು ಮೈಸೂರಿನ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿರುದ್ಧ ಪ್ರತಿಭಟನೆ ನಡೆಸಿದರು.

ಶ್ರೀ ನಿರ್ಮಲಾನಂದ ಸ್ವಾಮೀಜಿಯವರು ಕೇವಲ ಒಕ್ಕಲಿಗ ಸಮುದಾಯಕ್ಕೆ ಸೀಮಿತರಾಗಿದ್ದಾರೆ ಎಂದು ಹಗುರವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಮಾಜಿ ನಗರಪಾಲಿಕೆ ಸದಸ್ಯ ಕಾಂಗ್ರೆಸ್ ಮುಖಂಡ ಪಿ.ಪ್ರಶಾಂತಗೌಡ, ವಿಜಯ ನಗರದ ರವಿಕುಮಾರ್ ನೇತೃತ್ವದಲ್ಲಿ ಇಂದು ರಂಗಾಯಣದ ಬಳಿ ದಿಢೀರ್ ಪ್ರತಿಭಟನೆ ನಡೆಸಿದ ಒಕ್ಕಲಿಗ ಸಮುದಾಯದವರು, ಅಡ್ಡಂಡ ಕಾರ್ಯಪ್ಪ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಆಗಮಿಸಿದ ವಿಜಯನಗರ ಉಪ ವಿಭಾಗದ ಎಸಿಪಿ ಗಜೇಂದ್ರ ಪ್ರಸಾದ್ ಹಾಗೂ ಇನ್ಸ್‌ಪೆಕ್ಟರ್‌ಗಳು, ಕಲಾಮಂದಿರದ ಎಲ್ಲಾ ಗೇಟ್‌ಗಳನ್ನು ಬಂದ್ ಮಾಡಿದಾಗ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಪೂರ್ವಾನುಮತಿ ಪಡೆಯದೆ ಪ್ರತಿಭಟನೆಗೆ ಅವಕಾಶವಿಲ್ಲ ಎಂದ ಪೊಲೀಸರು, ಒಳಗೆ ಹೋಗದಂತೆ ತಡೆದರು.

ನಾವು ಪ್ರತಿಭಟನೆ ಮಾಡಲು ಬಂದಿಲ್ಲ. ಶ್ರೀಗಳ ಬಗ್ಗೆ ಹಗುರವಾಗಿ ಮಾತನಾಡಿರುವ ಅಡ್ಡಂಡ ಕಾರ್ಯಪ್ಪರನ್ನು ಪ್ರಶ್ನಿಸಬೇಕೆಂಬುದಷ್ಟೇ ನಮ್ಮ ಉದ್ದೇಶವಾಗಿದೆ. ರಂಗಾಯಣ ನಿರ್ದೇಶಕರೊಂದಿಗೆ ಮಾತನಾಡಲು ಅನುಮತಿ ಪಡೆಯಬೇಕೆ ಎಂದು ಪ್ರತಿಭಟನಾಕಾರರು ಪ್ರಶ್ನಿಸಿದರಲ್ಲದೆ, ಒಳ ನುಗ್ಗಲೆತ್ನಿಸಿದಾಗ ಪೊಲೀಸರು ಅವರನ್ನು ಬಂಧಿಸಿ, ಸಿಎಆರ್ ಮೈದಾನಕ್ಕೆ ಕರೆದೊಯ್ದು ಮಧ್ಯಾಹ್ನದ ವೇಳೆಗೆ ಬಿಡುಗಡೆ ಮಾಡಿದರು. ಶ್ರೀನಿವಾಸ್, ಅಭಿಗೌಡ, ವಿನಯ್, ಗಿರೀಶ್‌ಗೌಡ, ಸತೀಶ್ ಗೌಡ, ರಮೇಶ್, ಚೇತನ್ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಆದಿ ಚುಂಚನಗಿರಿ ಶ್ರೀ ನಿರ್ಮಲಾನಂದ ಸ್ವಾಮೀಜಿಗೆ ಅವಮಾನ

ಅಡ್ಡಂಡ ಕಾರ್ಯಪ್ಪ ವಿರುದ್ಧ ಪ್ರಕರಣ ದಾಖಲಿಸಿ; ಬಂಧಿಸಿ

ಕಾರ್ಪೋರೇಟರ್ ಕೆ.ವಿ.ಶ್ರೀಧರ್ ಆಗ್ರಹ

ಮೈಸೂರು, ಮಾ.24– ರಾಜಕೀಯ ಮೇಲಾಟಗಳ ನಡುವೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧಿಪತಿ ಡಾ. ನಿರ್ಮಲಾನಂದನಾಥ ಸ್ವಾಮೀಜಿಯವರ ಬಗ್ಗೆ ಕೇವಲವಾಗಿ ಮಾತನಾಡಿರುವ ರಂಗಾಯಣ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ವಿರುದ್ಧ ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡು, ಕೂಡಲೇ ಬಂಧಿಸಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಕೆ.ವಿ.ಶ್ರೀಧರ್ ಆಗ್ರಹಿಸಿದ್ದಾರೆ.



ಚುನಾವಣೆಯ ಹೊಸ್ತಿಲಲ್ಲಿ ಕಾರ್ಯಪ್ಪ ದೊಡ್ಡ ಸಮುದಾಯವೊಂದರ ಧರ್ಮಗುರುಗಳ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿರುವುದು ತೀವ್ರ ಖಂಡನೀಯ. ಸರ್ವಜನಾಂಗದ ಶಾಂತಿಯ ತೋಟದಂತಿರುವ ಈ ನೆಲದಲ್ಲಿ ಕಿಡಿ ಹಚ್ಚುವ ಕಾರ್ಯದಲ್ಲಿ ಪಕ್ಷವೊಂದರ ಪರವಾಗಿರುವ ಕೆಲ ವಿಕೃತ ಮನಸ್ಸಿನ ವ್ಯಕ್ತಿಗಳು ಹಾಗೂ ಸಂಘಟನೆಗಳು ಸದಾ ಕಾರ್ಯತತ್ಪರವಾಗಿದ್ದು, ಅದರ ಒಂದು ಭಾಗವಾಗಿ ಅಡ್ಡಂಡ ಕಾರ್ಯಪ್ಪ ತನ್ನ ನಾಲಿಗೆ ಹರಿಬಿಟ್ಟಿರುವುದು ಅಕ್ಷಮ್ಯ ಎಂದು ಹೇಳಿದ್ದಾರೆ.

ಈ ಕುರಿತು ರಾಜ್ಯ ಸರ್ಕಾರ ಕೂಡಲೇ ಗಂಭೀರ ಕ್ರಮ ತೆಗೆದುಕೊಳ್ಳಬೇಕು ಹಾಗೂ ರಂಗಾಯಣದ ನಿರ್ದೇಶಕ ಸ್ಥಾನದಿಂದ ಕಾರ್ಯಪ್ಪ ಅವರನ್ನು ವಜಾಗೊಳಿಸಬೇಕು. ಒಂದು ವೇಳೆ ಪ್ರಕರಣ ಕುರಿತು ಕಠಿಣ ಕ್ರಮ ಜರುಗಿಸದಿದ್ದಲ್ಲಿ ಸಮುದಾಯದಿಂದ ದೊಡ್ಡ ಮಟ್ಟದ ಪ್ರತಿಭಟನೆ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಸುಂದರ ನಗರಿ: ಏಕ ಬಳಕೆ ಪ್ಲಾಸ್ಟಿಕ್ ಪೂರ್ಣ ನಿಷೇಧಿಸಿ

ಕಸ ವಿಲೇವಾರಿಯು ಪರಿಣಾಮಕಾರಿಯಾಗಿರುವಂತೆ ಕ್ರಮ ಕೈಗೊಳ್ಳಿ: ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಅಧ್ಯಕ್ಷ ಸುಭಾಷ್ ಬಿ.ಆಡಿ ಸಲಹೆ



ಮೈಸೂರು, ಮಾ.24(ಎಂಟಿವೈ)– ಸ್ವಚ್ಛ ಹಾಗೂ ಪಾರಂಪರಿಕ ನಗರವೆಂದು ಹೆಸರಾಗಿರುವ ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಏಕ ಬಳಕೆ ಪ್ಲಾಸ್ಟಿಕ್ ಪೂರ್ಣ ಪ್ರಮಾಣದಲ್ಲಿ ನಿಷೇಧಿಸಬೇಕು. ಹಸಿ ಮತ್ತು ಒಣ ಕಸ ವಿಂಗಡಿಸಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವುದರೊಂದಿಗೆ ಕಟ್ಟಡ ತ್ಯಾಜ್ಯಗಳ ವಿಲೇವಾರಿಗೆ ಸ್ಥಳೀಯ ಸಂಸ್ಥೆಗಳು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿ ಅಧ್ಯಕ್ಷ ಸುಭಾಷ್ ಬಿ.ಆಡಿ ಸೂಚಿಸಿದ್ದಾರೆ.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿ, ಮೈಸೂರು ಜಿಲ್ಲೆಯಲ್ಲಿರುವ 13 ಸ್ಥಳೀಯ ಸಂಸ್ಥೆಗಳಲ್ಲಿ ಘನತ್ಯಾಜ್ಯ ನಿರ್ವಹಣೆ, ಕಟ್ಟಡ ತ್ಯಾಜ್ಯ ವಿಲೇವಾರಿ, ಪ್ಲಾಸ್ಟಿಕ್ ಬಳಕೆಗೆ ಕಡಿವಾಣ ಹಾಕಲು ಕೈಗೊಂಡಿರುವ ಕ್ರಮ ಕುರಿತಂತೆ ಅಧಿಕಾರಿಗಳಿಂದ ಮಾಹಿತಿ ಪಡೆದರು. ಬಳಿಕ ಮಾತನಾಡಿದ ಅವರು, ಜಿಲ್ಲೆಯಲ್ಲಿರುವ ವಿವಿಧ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ಸಿಬ್ಬಂದಿಗಳು ಸ್ವಚ್ಛತೆ ಕಾಪಾಡುವುದರೊಂದಿಗೆ ಸುಂದರ ಪರಿಸರ ನಿರ್ಮಾಣಕ್ಕೆ ಪಣತೊಡುವಂತೆ ಸಲಹೆ ನೀಡಿದರು.

ಸರ್ಕಾರಿ ಕಚೇರಿಗಳಲ್ಲಿ: ಜಿಲ್ಲೆಯ ಶಿಕ್ಷಣ ಸಂಸ್ಥೆಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಉತ್ಪತ್ತಿಯಾಗುವ ಹಸಿ ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು. ಊಟ ಮಾಡಿದ ನಂತರ ಉತ್ಪತ್ತಿಯಾಗುವ ಹಸಿ ಕಸ ಸಂಸ್ಕರಿಸಬೇಕು. ಬಳಿಕ ಈ ವ್ಯವಸ್ಥೆ ಶಿಕ್ಷಣ ಸಂಸ್ಥೆ, ಖಾಸಗಿ ಕಂಪನಿ ಸೇರಿದಂತೆ ಎಲ್ಲಾ ಕಚೇರಿಗಳಲ್ಲೂ ಹಸಿ ಕಸ ಪ್ರತ್ಯೇಕಿಸಲು ಸಹಕಾರಿಯಾಗಲಿದೆ. ಆ ನಿಟ್ಟಿನಲ್ಲಿ ಎಲ್ಲೆಡೆ ಜಾಗೃತಿ ಮೂಡಿಸಬೇಕು ಎಂದರು.

ಪ್ರತಿಯೊಬ್ಬರ ಜವಾಬ್ದಾರಿ: ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಪ್ರತಿಯೊಬ್ಬರು ಪರಿಸರ ಹಾಗೂ ಸ್ವಚ್ಛತೆಯ ಪ್ರಜ್ಞೆ ಹೊಂದಿರಬೇಕು. ಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳಿಂದ ಪೌರಕಾರ್ಮಿಕರು ಮನೆ ಬಳಿ ಬಂದು ತ್ಯಾಜ್ಯ ಸಂಗ್ರಹಿಸುವ ವೇಳೆ ನಾಗರಿಕರು ಕಡ್ಡಾಯವಾಗಿ ಹಸಿ ಮತ್ತು ಒಣಕಸವನ್ನು ಪ್ರತ್ಯೇಕವಾಗಿ ವಿಂಗಡಿಸಿ ನೀಡಬೇಕು. ಸ್ವಚ್ಛತೆ ಕಾಪಾಡುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವೂ ಆಗಿದೆ. ಆದ್ದರಿಂದ ಮನೆ ಮನೆಯಲ್ಲಿ ಕಸ ವಿಂಗಡಣೆ ಪ್ರಕ್ರಿಯೆ ಪರಿಣಾಮಕಾರಿಯಾಗಿ ನಡೆಸುವುದು ಅನಿವಾರ್ಯ ಎಂದು ಅಭಿಪ್ರಾಯಪಟ್ಟರು.

ಕಟ್ಟಡ ತ್ಯಾಜ್ಯ ಸಂಸ್ಕರಣಾ ಘಟಕ: ಜಿಲ್ಲೆಯಲ್ಲಿ ಆಯಾ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಟ್ಟಡಗಳ ತ್ಯಾಜ್ಯ ವೈಜ್ಞಾನಿಕವಾಗಿ ವಿಲೇವಾರಿಯಾಗುತ್ತಿಲ್ಲ. ರಸ್ತೆ ಬದಿ ಸುರಿಯುವುದು ಕಂಡು ಬರುತ್ತಿದೆ. ಈ ಹಿನ್ನೆಲೆಯಲ್ಲಿ ಮನೆ ಅಥವಾ ಕಟ್ಟಡ ತೆರವು ಅನುಮತಿ ಪಡೆಯಲು ಬಂದಾಗ, ಅವುಗಳ ತ್ಯಾಜ್ಯ ವಿಲೇವಾರಿಗೂ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಎಲ್ಲೆಂದರಲ್ಲಿ ಕಟ್ಟಡ ತ್ಯಾಜ್ಯ ಸುರಿಯುತ್ತಾರೆ. ಇದು ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಈ ಹಿನ್ನೆಲೆಯಲ್ಲಿ ಕಟ್ಟಡ ತ್ಯಾಜ್ಯ ಸಂಸ್ಕರಣಾ ಘಟಕ ಅಥವಾ ನಿಗಧಿತ ಸ್ಥಳ ಗುರುತಿಸಿ, ಅಲ್ಲಿ ಕಟ್ಟಡ ತ್ಯಾಜ್ಯ ವಿಲೇವಾರಿ ಮಾಡುವುದಕ್ಕೆ ಸ್ಥಳೀಯ ಸಂಸ್ಥೆಗಳು ಮುಂದಾಗಬೇಕು ಎಂದು ಸೂಚನೆ ನೀಡಿದರು.

ನಿಗಧಿತ ಸ್ಥಳದಲ್ಲಿ ಡಿಜಿಟಲ್ ಪರದೆ: ಸಾಂಸ್ಕೃತಿಕ, ಪಾರಂಪರಿಕ ನಗರಿ ಎಂದು ಬಿರುದು ಪಡೆದ, ರಾಜ್ಯದ ಪ್ರಮುಖ ಪ್ರವಾಸಿ ತಾಣವೂ ಆಗಿರುವ ಮೈಸೂರು ನಗರ, ದಕ್ಷಿಣ ಕರ್ನಾಟಕದ ದೊಡ್ಡ ನಗರವಾಗಿದೆ. ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಆದರೆ, ನಗರದ ವಿವಿಧೆಡೆ ಅಳವಡಿಸಿರುವ ಬ್ಯಾನರ್, ಪೋಸ್ಟರ್, ಕಟೌಟ್‌ಗಳಿಂದ ಪ್ರವಾಸಿಗರು ಮುಜುಗರಕ್ಕೆ ಒಳಗಾಗುವಂತಾಗಿದೆ ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿ, ಪೋಸ್ಟರ್, ಬ್ಯಾನರ್, ಕಟೌಟ್ ತೆರವುಗೊಳಿಸಬೇಕು. ಮುಂಬರುವ ದಿನಗಳಲ್ಲಿ ನಿಗದಿತ ಸ್ಥಳದಲ್ಲಿ ಮಾತ್ರ ಡಿಜಿಟಲ್ ಪರದೆ ಅಳವಡಿಸಿ, ಅದರ ಮೂಲಕ ಜಾಹೀರಾತು ಪ್ರದರ್ಶನಕ್ಕೆ ಅವಕಾಶ ನೀಡಬೇಕು ಎಂದು ಸಲಹೆ ನೀಡಿದರು.

ಪಾದಚಾರಿ ಮಾರ್ಗ ಒತ್ತುವರಿ ತೆರವು: ಮೈಸೂರಿನ ಪ್ರಮುಖ ರಸ್ತೆ ಸೇರಿದಂತೆ ಹಲವೆಡೆ ಪಾದಚಾರಿ ಮಾರ್ಗ ಒತ್ತುವರಿಯಾಗಿರುವ ಬಗ್ಗೆ ವ್ಯಾಪಕ ದೂರು ಕೇಳಿ ಬಂದಿವೆ. ಅವುಗಳ ತೆರವಿಗೆ ಏನು ಕ್ರಮ ಕೈಗೊಂಡಿದ್ದೀರಿ. ಜನ ಓಡಾಡಲು ಮೀಸಲಿರುವ ಸ್ಥಳ ಅತಿಕ್ರಮವಾದರೆ, ಇನ್ನೆಲ್ಲಿ ಓಡಾಡಬೇಕು. ಈ ಹಿನ್ನೆಲೆಯಲ್ಲಿ ಪಾದಚಾರಿ ಮಾರ್ಗ ಒತ್ತುವರಿಯನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಬೇಕು ಎಂದು ಸೂಚಿಸಿದರು.

ಮೆಡಿಕಲ್ ವೇಸ್ಟ್: ಜಿಲ್ಲೆಯಲ್ಲಿರುವ ಆಸ್ಪತ್ರೆ, ಕ್ಲಿನಿಕ್ ಸೇರಿದಂತೆ ವಿವಿಧೆಡೆ ಉತ್ಪತ್ತಿಯಾಗುವ ಮೆಡಿಕಲ್ ವೇಸ್ಟ್ ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು. ಮೆಡಿಕಲ್ ವೇಸ್ಟ್ ಸಂಗ್ರಹ ಹಾಗೂ ಸಾಗಾಣಿಕೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಎಲ್ಲೆಂದರಲ್ಲಿ ಬೀಸಾಡುವುದರಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ ಎಂದರು.

ಆದಾಯ ಮೂಲ ಬಲಪಡಿಸಿಕೊಳ್ಳಿ: ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಂಗ್ರಹವಾಗುವ ಹಸಿ ಕಸಗಳಿಂದ ಕಾಂಪೋಸ್ಟ್ ಗೊಬ್ಬರ ತಯಾರಿಕೆಗೆ ಕ್ರಮ ಕೈಗೊಳ್ಳಬೇಕು. ಸಂಗ್ರಹವಾಗುವ ತ್ಯಾಜ್ಯಗಳಲ್ಲಿ ಶೇ.100ರಷ್ಟು ವಿಲೇವಾರಿ ಮಾಡಬೇಕು. ಕಾಂಪೋಸ್ಟ್ ಗೊಬ್ಬರ ತಯಾರಿಸಿ, ಮಾರಾಟ ಮಾಡುವ ಮೂಲಕ ಆದಾಯ ಕಂಡುಕೊಳ್ಳಬೇಕು. ಸರ್ಕಾರದ ಅನುದಾನದ ನಿರೀಕ್ಷೆಯಿಲ್ಲದೆ ತನ್ನದೇ ಆದ ಆದಾಯ ಮೂಲ ಕಂಡುಕೊಳ್ಳಬೇಕು ಎಂದು ಸಲಹೆ ನೀಡಿದರು.

ಇ–ವೇಸ್ಟ್ ತ್ಯಾಜ್ಯ ಸಂಗ್ರಹ ಕೇಂದ್ರ: ಪರಿಸರದ ಮೇಲೆ ಎಲೆಕ್ಟ್ರಾನಿಕ್ಸ್ ನಿರುಪಯುಕ್ತ ವಸ್ತುಗಳಿಂದ ಹಾನಿಯಾಗಲಿದೆ ಇದರಿಂದ ಮೈಸೂರು ಸೇರಿದಂತೆ ಎಲ್ಲೆಡೆ ಇ–ವೇಸ್ಟ್ ಸಂಗ್ರಹ ಘಟಕವನ್ನು ಸ್ಥಾಪಿಸಬೇಕು. ಜನರಲ್ಲಿ ಭಿತ್ತಿಪತ್ರ ಹಂಚುವುದು ಸೇರಿದಂತೆ ವಿವಿಧ ಸ್ವರೂಪದ ಜಾಗೃತಿ ಕಾರ್ಯಕ್ರಮ ಆಯೋಜಿಸಬೇಕು. ಸಂಗ್ರಹವಾದ ವಿದ್ಯುನ್ಮಾನ ನಿರುಪಯುಕ್ತ ವಸ್ತುಗಳಿಂದ ಸ್ಥಳೀಯ ಸಂಸ್ಥೆಗಳಿಗೆ ಆದಾಯ ಸಂಗ್ರಹವಾಗಲಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಎಎಸ್‌ಪಿ ನಂದಿನಿ, ಡಿಸಿಪಿ ಮುತ್ತುರಾಜ್ ಹಾಗೂ ತಾಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಆಯಾಯ ಖಾಸಗಿ ಸಂಸ್ಥೆಗಳೇ ನಿರ್ವಹಣೆ ಮಾಡಲಿ

100 ಕೆಜಿಗಿಂತ ಹೆಚ್ಚು ಕಸ ಉತ್ಪತ್ತಿ ಮಾಡುವ ದೊಡ್ಡ ಶಿಕ್ಷಣ ಸಂಸ್ಥೆಗಳಲ್ಲಿ ಉತ್ಪತ್ತಿಯಾಗುವ ಕಸವನ್ನು ಆಯಾ ಸಂಸ್ಥೆಯಲ್ಲಿಯೇ ಕಡ್ಡಾಯವಾಗಿ ವಿಲೇವಾರಿ ಮಾಡಿಕೊಳ್ಳಲು ಸೂಚನೆ ನೀಡಬೇಕು. ಕಸ ವಿಲೇವಾರಿ ದಾಖಲೆಗಳಲ್ಲಿ ಇದ್ದರೆ ಸಾಲದು, ಅದು ಶೇ.100ರಷ್ಟು ಜಾರಿಯಾಗಬೇಕಿದೆ. ಮೈಸೂರು ಭಾಗದಲ್ಲಿ 13 ಸ್ಥಳೀಯ ಸಂಸ್ಥೆಗಳಿಗೆ ಇವರೆಲ್ಲರೂ ತಮ್ಮ ವ್ಯಾಪ್ತಿಯಲ್ಲಿ ನಿತ್ಯವೂ ಎಷ್ಟು ಪ್ರಮಾಣದಲ್ಲಿ ಕಸ ಉತ್ಪತ್ತಿಯಾಗುತ್ತದೆ. ಅದನ್ನು ಎಷ್ಟು ಪ್ರಮಾಣದಲ್ಲಿ ವಿಲೇವಾರಿ ಮಾಡಲಾಗುತ್ತಿದೆ. ಅದರಿಂದ ಬರುತ್ತಿರುವ ಆದಾಯ, ದೊರೆತ ಉದ್ಯೋಗ ಸೇರಿದಂತೆ ಇನ್ನಿತರ ವಿಚಾರಗಳ ಕುರಿತು ಮಾಹಿತಿಯನ್ನು ನಿರ್ವಹಣೆ ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಮೈಸೂರು ಸುತ್ತಮುತ್ತ ಶೇ.90ರಷ್ಟು ಗ್ರಾಮಾಂತರ ಸ್ಥಳೀಯ ಸಂಸ್ಥೆಗಳಿವೆ. ಮೈಸೂರಲ್ಲಿ ಸಂಗ್ರಹವಾಗುತ್ತಿರುವ ಕಸದಲ್ಲಿ ಶೇ.80 ರಷ್ಟು ವಿಲೇವಾರಿ ಮಾಡಲಾಗುತ್ತಿದೆ ಇದರಲ್ಲಿ ಶೇ. 60ರಷ್ಟು ಗೊಬ್ಬರವಾಗುತ್ತಿದೆ ಚಿಕನ್, ಮಟನ್ ವೇಸ್ಟ್‌ಗಳಿಗೆ ಸಂಬಂಧಿಸಿದಂತೆ ದೂರುಗಳು ಹೆಚ್ಚಾಗಿ ಬರುತ್ತಿದ್ದು, ಪ್ರತ್ಯೇಕವಾಗಿ ಅವುಗಳನ್ನು ಸಂಗ್ರಹಿಸಿ ಮೀನು ಸಾಕಾಣಿಕಾ ಕೇಂದ್ರಗಳಿಗೆ ತಲುಪಿಸಲಾಗುತ್ತಿದೆ. ಬಯೋ ವೇಸ್ಟ್ ಮ್ಯಾನೇಜ್‌ಮೆಂಟ್ ಬಹಳ ಪ್ರಮುಖವಾಗಿದ್ದು, ಈ ತ್ಯಾಜ್ಯಗಳ ನಿರ್ವಹಣೆ ಸರಿಯಾದ ರೀತಿಯಲ್ಲಿ ನಡೆಸಲು ಕ್ರಮಕೈಗೊಳ್ಳಲಾಗುವುದು. ವರ್ಕಿಂಗ್ ವುಮೆನ್ ಹಾಸ್ಟೆಲ್ಸ್, ಪಿಜಿಗಳಲ್ಲಿ, ಆಸ್ಪತ್ರೆ ಹಾಗೂ ಮುಂತಾದ ಕಡೆ ಅರಿವು ಮೂಡಿಸಬೇಕು. ಡೈಪರ್, ಸ್ಯಾನಿಟರಿ ಪ್ಯಾಡ್ಸ್‌ಗಳನ್ನು ಸಂಗ್ರಹಿಸಲು ಕ್ರಮ ಕೈಗೊಳ್ಳಲಾಗುವುದು. ಇ–ವೇಸ್ಟ್ ಕಲೆಕ್ಷನ್ ಕೇಂದ್ರಗಳನ್ನು ಸ್ಥಾಪಿಸಿ ತ್ಯಾಜ್ಯವನ್ನು ಸಂಗ್ರಹ ಮಾಡಬೇಕು. ಪೋಸ್ಟರ್ಸ್, ಬ್ಯಾನರ್, ಕಟೌಟ್‌ಗಳಿಗೆ ಕಡಿವಾಣ ಹಾಕಿ ಇನ್ನು ಮುಂದೆ ನಿಗಧಿತ ಸ್ಥಳದಲ್ಲಿ ಮಾತ್ರ ಡಿಜಿಟಲ್ ಬ್ಯಾನರ್‌ಗಳಿಗೆ ಅವಕಾಶ ನೀಡಲಾಗುವುದು ಎಂದು ತಿಳಿಸಿದರು.

ಕಾಂಗ್ರೆಸ್ ಬೋಗಸ್ ಭರವಸೆ; ಬಿಜೆಪಿಯ ಕೊಡುಗೆಗಳನ್ನು ಮತದಾರರಿಗೆ ಮನವರಿಕೆ ಮಾಡಿಕೊಡಿ

ಯುವ ಕಾರ್ಯಕರ್ತರಿಗೆ ಬಿಜೆಪಿ ಯುವ ಮೋರ್ಚಾ ರಾಜ್ಯಾಧ್ಯಕ್ಷ ಡಾ.ಸಂದೀಪ್ ಕುಮಾರ್ ಸಲಹೆ



ಮೈಸೂರು, ಮಾ.24(ಎಸ್‌ಬಿಡಿ)– ಬೋಗಸ್ ಗ್ಯಾರಂಟಿ ಹಾಗೂ ಅಪಪ್ರಚಾರದ ಮೂಲಕ ಮತದಾರರ ಸೆಳೆಯುವ ಪ್ರಯತ್ನ ನಡೆದಿದ್ದು, ಈ ಬಗ್ಗೆ ಬಿಜೆಪಿ ಯುವ ಕಾರ್ಯಕರ್ತರು ಜಾಗೃತಿ ಮೂಡಿಸಬೇಕು ಎಂದು ಬಿಜೆಪಿ ಯುವಮೋರ್ಚಾ ರಾಜ್ಯಾಧ್ಯಕ್ಷ ಡಾ.ಸಂದೀಪ್ ಕುಮಾರ್ ಹೇಳಿದರು.

ಮೈಸೂರಿನ ಜೆ.ಕೆ.ಮೈದಾನದ ಎಂಎಂಸಿಆರ್‌ಐ ಅಮೃತ ಮಹೋತ್ಸವ ಭವನದಲ್ಲಿ ಬಿಜೆಪಿ ಯುವಮೋರ್ಚಾ ಮೈಸೂರು ಮಹಾನಗರ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಯುವ ಸಂಕಲ್ಪ ಸಮಾವೇಶ'ದಲ್ಲಿ ಮಾತನಾಡಿದ ಅವರು, ಪದವೀಧರ ನಿರುದ್ಯೋಗಿಗಳಿಗೆ 3 ಸಾವಿರ ಹಾಗೂ ಡಿಪ್ಲೊಮಾ ಹಾಗೂ ಐಟಿಐ ಮಾಡಿದವರಿಗೆ 1,500 ರೂ. ಮಾಸಿಕ ಸಹಾಯ ಧನ ಸೇರಿದಂತೆ ಅನೇಕ ಬೋಗಸ್ ಗ್ಯಾರಂಟಿ ನೀಡುತ್ತಿರುವ ಕಾಂಗ್ರೆಸ್, ಬಿಜೆಪಿ ವಿರುದ್ಧ ಅಪಪ್ರಚಾರ ಮಾಡುವ ಮೂಲಕ ಮತದಾರರ ಸೆಳೆಯುವ ವಿಫಲ ಯತ್ನ ನಡೆಸಿದೆ. ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು, ಸರ್ಕಾರ ಮತ್ತು ಜನರ ನಡುವಿನ ಸೇತುವೆಯಾಗಿ ಇಂತಹ ಸಂಗತಿಗಳ ಬಗ್ಗೆ ಜಾಗೃತಿ ಮೂಡಿಸುವುದರೊಂದಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕಾರ್ಯಕ್ರಮಗಳನ್ನು ಪ್ರಚುರಪಡಿಸಬೇಕೆಂದು ಸಲಹೆ ನೀಡಿದರು.

ಕೇಂದ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ 9 ವರ್ಷದ ಆಡಳಿತ ಹಾಗೂ ರಾಜ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮೂರೂವರೆ ವರ್ಷಗಳ ಆಡಳಿತದಲ್ಲಿ ಹತ್ತಾರು ಜನಪರ ಯೋಜನೆಗಳು ಜನರಿಗೆ ತಲುಪಿವೆ. ದೀನ್ ದಯಾಳ್ ಉಪಾಧ್ಯಾಯ ಅವರ ಅಂತ್ಯೋದಯ ಸಂಕಲ್ಪವನ್ನು ಪ್ರಧಾನಿ ಮೋದಿ ಅವರು ಸಾಕಾರಗೊಳಿಸಿದ್ದಾರೆ. ಸ್ವಾತಂತ್ರ್ಯೋತ್ಸವದ ದಿನ ಮಹಿಳೆಯರ ಸ್ವಾಭಿಮಾನ, ಆತ್ಮಗೌರವದ ಬಗ್ಗೆ ಮಾತನಾಡಿ ಸ್ವಚ್ಛ ಭಾರತಕ್ಕೆ ಕರೆ ನೀಡಿದ್ದರ ಪರಿಣಾಮ ಕೋಟ್ಯಾಂತರ ಶೌಚಾಲಯಗಳು ನಿರ್ಮಾಣವಾಗಿವೆ. ಬಡವರಿಗೆ ತಲಾ 5 ಲಕ್ಷ ರೂ. ಆರೋಗ್ಯ ವಿಮೆ, ಜನೌಷಧಿ ಕೇಂದ್ರ, ಜಲಜೀವನ್ ಮಿಷನ್, ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಎಸ್‌ಸಿ/ಎಸ್ಟಿ ಮೀಸಲಾತಿ ಹೆಚ್ಚಳ, ಹೀಗೆ ಸಾಕಷ್ಟು ಯೋಜನೆಗಳ ಮೂಲಕ ಜನರ ಬವಣೆಗೆ ಸ್ಪಂದಿಸಿದ್ದಾರೆ ಎಂದರು.

ಬಿಜೆಪಿಯನ್ನು ಸಂವಿಧಾನ ವಿರೋಧಿ ಎಂದು ಅಪಪ್ರಚಾರ ಮಾಡಲಾಗುತ್ತಿದೆ. ಆದರೆ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಸಂವಿಧಾನಕ್ಕೆ ನಿಜವಾಗಿ ಗೌರವ ಸಲ್ಲಿಸಿದ್ದು ಪ್ರಧಾನಿ ಮೋದಿ ಹಾಗೂ ಬಿಜೆಪಿ. ಹಾಗಾಗಿ ಡಾ.ಬಿ.ಆರ್.ಅಂಬೇಡ್ಕರ್ ಅವರಿಗೆ ಸಂಬಂಧಿಸಿದ ಪ್ರಮುಖ ಸ್ಥಳಗಳ ಮಹತ್ವ ತಿಳಿಸುವ ಪಂಚತೀರ್ಥ ಕ್ಷೇತ್ರ ಯಾತ್ರೆ ಆರಂಭಿಸಲಾಯಿತು. 2014ರ ಲೋಕಸಭಾ ಚುನಾವಣೆಯಲ್ಲಿ ಮೋದಿ ಅವರನ್ನು ಪ್ರಧಾನಿ ಅಭ್ಯರ್ಥಿ ಎಂದು ಘೋಷಿಸಿದಾಗ ಸ್ವಚ್ಛ ಸರ್ಕಾರಕ್ಕಾಗಿ ಶ್ರಮಿಸಿದ ರೀತಿಯಲ್ಲಿ ರಾಜ್ಯದ ವಿಧಾನಸಭಾ ಚುನಾವಣೆಯಲ್ಲೂ ದುಡಿದು 150 ಕ್ಷೇತ್ರದ ಗೆಲುವಿನ ಸಂಕಲ್ಪ ಸಾಕಾರಗೊಳಿಸಬೇಕು. ಕೋವಿಡ್ ಸಂದರ್ಭದಲ್ಲಿ ಕಾರ್ಯ ವೈಖರಿ ಹಾಗೂ ವ್ಯಾಪ್ತಿಯನ್ನು ವಿಸ್ತರಿಸಿ ಜನ ಸೇವೆ ಮಾಡಿದ ರೀತಿಯಲ್ಲಿ ಈಗಲೂ ರಾಷ್ಟ್ರದ ಹಿತ ಬಯಸುವ ಬಿಜೆಪಿ ಸರ್ಕಾರವನ್ನು ಮತ್ತೊಮ್ಮೆ ತರಲು ಕ್ಷೇತ್ರದಲ್ಲಿ ಕೆಲಸ ಮಾಡಬೇಕು. ಇನ್ನುಳಿದಿರುವುದು 45–50 ದಿನ ಮಾತ್ರ. ಹಾಗಾಗಿ ಬೂತ್ ಮಟ್ಟದ ಕಾರ್ಯ ಚಟುವಟಿಕೆಯನ್ನು ದ್ವಿಗುಣಗೊಳಿಸಬೇಕು ಎಂದು ಕಾರ್ಯಕರ್ತರಿಗೆ ಕರೆ ನೀಡಿದರು.

ಟೊಂಕ ಕಟ್ಟಿ ನಿಲ್ಲೋಣ: ರಾಜ್ಯ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ವಿನಯ್ ಬಿದಿರೆ ಮಾತನಾಡಿ, ಬಿಜೆಪಿ ಅಧಿಕಾರಕ್ಕೆ ಬಂದಾಗಿನಿಂದಲೂ ನಿರಂತರವಾಗಿ ಸಂಘಟನಾತ್ಮಕ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದಿದೆ. ಆದರೆ ಬೇರೆ ಪಕ್ಷದವರು ಚುನಾವಣೆ ಹೊಸ್ತಿಲಲ್ಲಿ ಅವರ ಕಾರ್ಯಕರ್ತರಿಗೆ ಹುಟುಕಾಟ ನಡೆಸುತ್ತಾರೆ. ಬಿಜೆಪಿ ದಿನದಲ್ಲಿ 15–20 ಕಾರ್ಯಕ್ರಮ ನಡೆಸುತ್ತದೆ. ಆದರೆ ಬೇರೆ ಪಕ್ಷಗಳಿಂದ ಇದು ಸಾಧ್ಯವಿಲ್ಲ. ಇದಕ್ಕೆಲ್ಲಾ ಕ್ರಿಯಾಶೀಲರಾದ ಕಾರ್ಯಕರ್ತರೇ ಕಾರಣ. ಹಾಗೆಯೇ ವಿಧಾನಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಚಿಹ್ನೆ ಹಾಗೂ ಅಭ್ಯರ್ಥಿ ಗೆಲುವಿಗೆ ಟೊಂಕ ಕಟ್ಟಿ ನಿಲ್ಲೋಣ ಎಂದರು.

ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಮಾತನಾಡಿ, ಪಕ್ಷ ಸಂಘಟನೆ ಹಾಗೂ ಚುನಾವಣೆಗಳಲ್ಲಿ ಯುವಮೋರ್ಚಾದ ಜವಾಬ್ದಾರಿ ಬಗ್ಗೆ ತಿಳಿಸಿ ಪಕ್ಷದ ಗೆಲುವಿಗೆ ಹಗಲಿರುಳು ಶ್ರಮಿಸುವಂತೆ ಮನವಿ ಮಾಡಿದರು. ಬಿಜೆಪಿ ಯುವ ಮೋರ್ಚಾ ನಗರಾಧ್ಯಕ್ಷ ಕಿರಣ್‌ಗೌಡ ಮಾತನಾಡಿ, ಕೇಂದ್ರ ಹಾಗೂ ಬಿಜೆಪಿ ಸರ್ಕಾರಗಳ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು.

ಸಮಾವೇಶದಲ್ಲಿ ಮೇಯರ್ ಶಿವಕುಮಾರ್, ಉಪ ಮೇಯರ್ ಜಿ.ರೂಪಾ, ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಯುವಮೋರ್ಚಾ ನಗರ ಉಸ್ತುವಾರಿ ರಮೇಶ್, ಪ್ರಧಾನ ಕಾರ್ಯದರ್ಶಿ ಸಂತೋಷ್ ಕುಮಾರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಜನ್ಮದಿನದ ಅಂಗವಾಗಿ ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ರಾಘವೇಂದ್ರ ಸ್ವಾಮಿ ಮಠದ ಎದುರು ಸಾರ್ವಜನಿಕರಿಗೆ ಮಜ್ಜಿಗೆ ವಿತರಿಸಿದರು. ಈ ಸಂದರ್ಭದಲ್ಲಿ ಆನಂದ್, ಜ್ಞಾನೇಶ್, ರವಿಚಂದ್ರನ್, ನವೀನ್, ಲೋಕೇಶ್, ಜಗದೀಶ್, ರಮೇಶ್ ಮುಂತಾದವರು ಉಪಸ್ಥಿತರಿದ್ದರು.

ನಾಳೆ 'ದಿ ಜೈಲ್ ಅಂಡ್ ಅದರ್ ಟೇಲ್ಸ್' ಪುಸ್ತಕ ಬಿಡುಗಡೆ

ಮೈಸೂರು,ಮಾ.24(ಪಿಎಂ)– ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಡಾ.ಲತಾ ಮುತ್ತಣ್ಣ ಅವರ 'ದಿ ಜೈಲ್ ಅಂಡ್ ಅದರ್ ಟೇಲ್ಸ್' ಪುಸ್ತಕ ಬಿಡುಗಡೆ ಸಮಾರಂಭವನ್ನು ಮಾ.26 ರಂದು ಹಮ್ಮಿಕೊಳ್ಳಲಾಗಿದೆ. ಮೈಸೂರಿನ ವಿಜಯನಗರದ 4ನೇ ಹಂತದ ಕಲ್ಪ ಕ್ಷೇತ್ರ ಸಭಾಂಗಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಸಮಾರಂಭ ನಡೆಯಲಿದ್ದು, ಮೈಸೂರು ಲಿಟರರಿ ಅಸೋಸಿಯೇಷನ್ ಅಧ್ಯಕ್ಷ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಪುಸ್ತಕ ಬಿಡುಗಡೆ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಶುಂಠಿ ಕೃಷೀಕರೆ

ಉತ್ತಮ ದರ್ಜೆಯ ಬೇವಿನ ಹಿಂಡಿ ಹಾಗೂ ಬೇವಿನ ಹುಡಿ ನಿಮ್ಮ ಸಮಕ್ಷಮ ಮಾಡಿಕೊಡಲಾಗುತ್ತದೆ.
ಶ್ರೀ ಕಾಮಾಕ್ಷಿ ಬಯೋ–ನೀಮ್
#203, ಬನ್ನಿಮಂಟಪ ಬಡಾವಣೆ, ಮೈಸೂರು–570 015

Mob: 80888-87802

ಬಾಡಿಗೆಗೆ ಇದೆ

South Facing 20x30 ಅಳತೆಯ 2 BHK ಮನೆ ಬಾಡಿಗೆಗೆ ಇದೆ.
ಜನತಾನಗರ 4ನೇ ತಿರುವು, ಮೈಸೂರು

7760109957
9481388023

WANTED

Driving Instructor for Car driving
Working place BOGADI
(Salary 8k to 10k)

Call 9739780859

ಹೋಟೆಲ್ ಕೆಲಸಕ್ಕೆ

ಟೀ ಕಾಫಿ, ಸಪ್ಲೆಯರ್, ಕೌಂಟರ್, ಸೌತ್ ಭಟ್ರು, ಹೆಲ್ಪರ್, ನಾರ್ತ್ ಭಟ್ರು, ಕ್ಲೀನರ್, ಪಾತ್ರೆ ತೊಳೆಯರು, ಚಾಟ್ಸ್ & ಚೈನೀಸ್, ದೋಸೆ ಭಟ್ರು

8088337564

NYPUNYA SCHOOL OF EXCELLENCE

Swimming SUMMER CAMP

Timings: 6.30-7.30am, 7.30-8.30am
Timings: 4.30-5.30am, 5.30-6.30am

Ph: 9108002966 / 0821-2340041

ಬೇಕಾಗಿದ್ದಾರೆ

18 ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕೆ ಅನುಭವ ಇರುವ / ಇಲ್ಲದಿರುವವರಿಗೆ ನಮ್ಮ ಸಂಸ್ಥೆಯಲ್ಲಿ ಟ್ರೈನಿಂಗ್ ಕೊಡಲಾಗುವುದು. ಊಟ ವಸತಿಯೊಂದಿಗೆ ಆಕರ್ಷಕ ಸಂಬಳ ಕೊಡಲಾಗುವುದು

7483960098, 9739292222

ಬೇಕಾಗಿದ್ದಾರೆ

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಕನ್ನಡ, ತೆಲಗು, ಹಿಂದಿ)
ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ
ಸಂಬಳ: 8000/-

8150005111

ಕೆಲಸಕ್ಕೆ ಬೇಕಾಗಿದ್ದಾರೆ

ಜಯಲಕ್ಷ್ಮಿಪುರಂನಲ್ಲಿರುವ ಅಪಾರ್ಟ್‌ಮೆಂಟ್‌ನಲ್ಲಿ ಕೆಲಸ ಮಾಡಲು ಕುಟುಂಬವರ್ಗದವರು ಬೇಕಾಗಿದ್ದಾರೆ.
ಕೂಡಲೇ ಸಂಪರ್ಕಿಸಿ.

ಸಂಪರ್ಕಿಸಿ: 8892835885

ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಹುಡುಗರು/ಹುಡುಗಿಯರು ಬೇಕಾಗಿದ್ದಾರೆ.
ಸಂಬಳ: 12000/–

ಸಂಪರ್ಕಿಸಿ: 8892258814

ಸೈಟ್ಸ್ @ ಮೈಸೂರು

T-Narasipura Road, ವರುಣ ಲೇಕ್ ವ್ಯೂ
MUDA APPROVED
MUDA KHATA
ಮುಂಬರಲಿರುವ ಜೆಎಸ್‌ಎಸ್ ಯೂನಿವರ್ಸಿಟಿ ಹತ್ತಿರ

GSS 89512-76688

WANTED JOB !

ದಟ್ಟಗಳ್ಳಿ ಸುತ್ತ ಮುತ್ತಲಿನವರಿಗೆ ಮಾತ್ರ ಆದ್ಯತೆ

Office Staff

EDUCATION	WORK TIME	SALARY
PUC any Deegree	8 HOURS 9am to 5:30pm	7000/- to 10000/-

9844444214

SITE FOR SALE

30x40 Sites, Bank Loan upto 80%, Near Gurur Bus Stop, Ramabainagar, Mysore. DTCP approved (Corporation Limits) 1.5 kms from J P Nagar Ring Road.

8660105902

ಸೈಟ್ಸ್ @ ಮೈಸೂರು

ಟಿ.ನರಸೀಪುರ ರಿಂಗ್ ರೋಡ್ ನಿಂದ ಸುಮಾರು 1.5 KMS
MUDA APPROVED
MUDA KHATA
ಸುತ್ತಮುತ್ತ ಮೂಡಾ ಲೇಔಟ್ಗಳಿವೆ

GSS 89512-76688

ಸಂಪು

ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:

8861612486

FOR SALE

1. 20x30, 3 BHK, Duplex House for Sale, Near Dattagalli
2. 40x60 Site for Sale (Chamundi Hill Road)
3. 2 Acres Agriland (Green Zone) for Sale (Near Gurur)
4. 1 Acre Agriland (Green Zone) for Sale, (Near Nanjangud)

8310259191 | 8618255505

Vilas Properties

2D Planning @ 1/Sqft
3D Planning @ 2/Sqft
Construction Starting From 1799*

9380997148
9110605228

ಉಚಿತ ತರಬೇತಿ

ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:

7406375196, 9880548596

ನಿರ್ಮಲ ಸರ್ವೀಸ್

ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:

6364079244

ಬೋಳು ತಲೆಯ ಸಮಸ್ಯೆಯೇ?



ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ವಾಭಾವಿಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING

574, 9th Cross, Anikethana Road, Kuvempunagar, Mysuru

MYSURU 9611028523 MANGALURU 9343142258

KRISHIK SARVODAYA FOUNDATION (R)

MYSORE BRANCH

PUC CET / NEET - 2023
Coaching commencing from 01.04.2023

ADMISSION OPEN
Hostel facility available both Girls & Boys

'Krishik Bhavan' # CA-25, Gen. K.S. Thimmaiah Road, Vijayanagar 2nd Stage, Mysore-12

Contact : 0821-2301564 / 99457 52592

SITES FOR SALE

MUDA Approved, Cauvery Enclave
40x60, 30x40, 20x30
In between Manipal & NH Hospital
LOAN AVAILABLE from all major Banks.

8971119292/9611223444

ತಕ್ಷಣ ಬೇಕಾಗಿದ್ದಾರೆ

ನಂಜನಗೂಡು, ಬೇಗೂರು, ಸಿಂಧುವಳ್ಳಿಪುರ, ಮುದ್ದಹಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ SSLC, ಸಂಬಳ : 15,000/- ESI ಮತ್ತು PF
ಊಟ ತಿಂಡಿ ಸೌಲಭ್ಯ ಇರುತ್ತದೆ

9620667819
9620777819

ತಕ್ಷಣ ಬೇಕಾಗಿದ್ದಾರೆ

1) ಸೆಕ್ಯೂರಿಟಿ ಸೂಪರ್‌ವೈಸರ್ (ಮೈಸೂರು)
2) ಸೆಕ್ಯೂರಿಟಿ ಗಾರ್ಡ್ಸ್ (ಮೈಸೂರು ಮತ್ತು ಕೊಳ್ಳೇಗಾಲ)
ವಯೋಮಿತಿ 25 ರಿಂದ 50 ವರ್ಷ
ವಿದ್ಯಾರ್ಹತೆ : 10th, 12th ತರಗತಿ ಪಾಸ್ & ಫೇಲ್
ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ:

9844235981, 9739199355

ಉದ್ಯೋಗ ಅವಕಾಶ

ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ.
ಸಂಬಳ+ಓಟಿ, 15,200–86000.

9740733021 / 9535028750

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್

ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

Mob: 9008711654

ಜೆಮಿನಿ

ರೋಲಿಂಗ್ ಷಟ್ಟರ್ ಮೆಟೀರಿಯಲ್ಸ್
ಬಿಡಿ ಭಾಗಗಳ ತಯಾರಕರು ಮತ್ತು ಮಾರಾಟಗಾರರು
ರೌಂಡ್, ಬಾಕ್ಸ್, ಡಿಸೈನ್ ಪಟ್ಟಿಗಳು, ಬಾಟಮ್ ಪ್ಲೇಟ್, ಚಾನೆಲ್, ಸ್ಪ್ರಿಂಗ್ ಇತ್ಯಾದಿ
ಚಿತ್ರವನ ರೆಸಾರ್ಟ್ ಎದುರು, ಮಾನಂದವಾಡಿ ರಸ್ತೆ, ಮೈಸೂರು

ಸಂಪರ್ಕಿಸಿ : 9740788263

ಬರವಣಿಗೆ ಕೆಲಸ

ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ

9731891409

ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಪ್ರಸಿದ್ಧ ಐಟಿ ಕಂಪನಿಗೆ ಗುತ್ತಿಗೆ ಆಧಾರದ (ಕಾಂಟ್ರಾಕ್ಟ್) ಮೇಲೆ ಹೌಸ್ ಕೀಪಿಂಗ್ ಕೆಲಸ ಮಾಡುವ ಹುಡುಗರು ಬೇಕಾಗಿದ್ದಾರೆ. ಸೌಲಭ್ಯಗಳು : ವೇತನ, ಪಿ.ಎಫ್., ಇ.ಎಸ್.ಐ., ವಾರ್ಷಿಕ ಬೋನಸ್, ವಾರ್ಷಿಕ ಸಂಬಳ ಹೆಚ್ಚಳಿಕೆ, ಗ್ರಾಚ್ಯುಟಿ, ಸಮವಸ್ತ್ರ ಮತ್ತು ಶೂ. ವೇತನ ರೂ.13,800/– ವಯೋಮಿತಿ 18 ರಿಂದ 35 ವರ್ಷ, ವಿದ್ಯಾರ್ಹತೆ 7 ರಿಂದ 10ನೇ ತರಗತಿ ಪಾಸ್ ಅಥವಾ ಫೇಲ್. ಆಸಕ್ತಿಯುಳ್ಳವರು ಸಂಪರ್ಕಿಸಿ: ಎಸ್.ಎಲ್.ಎನ್.ಫೆಸಿಲಿಟಿ ಮ್ಯಾನೇಜ್‌ಮೆಂಟ್ ಪ್ರೈ.ಲಿ., ನಂ.291/ಸಿ, ಹರಿಲಮ್ಮ ಬಿಲ್ಡಿಂಗ್, ಎಸ್.ಎಸ್.ಟಿ.ಪಿ. ಎದುರು, ಅರೋಮ ಬೇಕರಿ ಫ್ಯಾಕ್ಟರಿ ಡಿಟಿ ಲೇಟ್ ಪಕ್ಕದಲ್ಲಿ, ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾ, ಮೈಸೂರು – 570017

9900509554 / 8105669977

Teachers Vacancy 2023-24

Head Master / Head Mistress M.A / M.Sc / B.Ed
PET Teacher - BP.Ed / MP.Ed
Social / English - M.A / B.Ed
Science / Maths - M.Sc / B.Ed

Note: 1) Minimum 3 Years teaching experience and fluency in English Must.
2) TET is compulsory.

Ph: 9141859198
Email : srkvidyakula@gmail.com

WALK IN INTERVIEW

On 27th to 29th March 2023 @ Factory Premises. From 10 am to 1 pm
Looking for Machine Operators / Carpenters
Min Qualification : Diploma / ITI

HSR Interiors (Furniture Manufacturer)
No. 30, JCK Industrial Park, Belagola Industrial Area, Metagalli Post
Near Preethi Grante, Hebbal 1st Stage, Mysore

Ph: +91 9845235388
Email : deepak@hsrfurn.com

ಸೈಟು ಮಾರಾಟಕ್ಕಿದೆ

ಮೂಡ ಅಪ್ರೂವ್ಡ್

30x40 - North, West
40x60 - N/F, 40x60 - W/F
30x60 - North East Corner
58x60 - North East Corner
ರಿಂಗ್ ರೋಡ್ ಹತ್ತಿರ, ಯೂನಿವರ್ಸಿಟಿ ಲೇಔಟ್ ಎದುರು, 30x50 - E/F, ATME Engineering ಕಾಲೇಜ್ ಪಕ್ಕ, 40x60 - East face ವರುಣ ಹತ್ತಿರ.

Mob: 9900372792

ಬೇಕಾಗಿದ್ದಾರೆ

ವೃದ್ಧರು, ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ). ಸಂಬಳ 12,000 ರಿಂದ 18,000. (ESI, PF ಸೌಲಭ್ಯ ಇರುತ್ತದೆ).

8050699742, 7760043596

ಹೆಸರು ಬದಲಾವಣೆ

ತೇಜಸ್ ಕುಮಾರ್ & ಚಂದನ. ಸಿ, ಆದ ನಾವು ನಂ. 820, 10ನೇ ಕ್ರಾಸ್, ಮಹಾದೇಶ್ವರ ಬಡಾವಣೆ, ಮೇಟಗಳ್ಳಿ ಪೋಸ್ಟ್, ಮೈಸೂರು–570016, ಇಲ್ಲಿ ವಾಸವಾಗಿದ್ದು, ನಮ್ಮ ಮಗನ ಹೆಸರನ್ನು 'ದಕ್ಷಿತ್ ಗೌಡ' ಯಿಂದ 'ದಕ್ಷಿತ್.ಟಿ' (Dakshith. T) ಎಂಬುದಾಗಿ ನಮ್ಮ ಸ್ವ ಇಚ್ಛೆಯಿಂದ ಬದಲಾಯಿಸಿ, ನೋಟರಿ ಮಣಿಮಾಲ ಎನ್.ಎಸ್. ಇವರ ಸಮ್ಮುಖದಲ್ಲಿ ಪ್ರಮಾಣೀಕರಿಸಿರುತ್ತೇವೆ.
ಸಹಿ/– ತೇಜಸ್ ಕುಮಾರ್, ಚಂದನ. ಸಿ.

ಬೇಕಾಗಿದ್ದಾರೆ

ಮೈಸೂರಿನ ಮೇಟಗಳ್ಳಿ ಮತ್ತು ಹೆಬ್ಬಾಳು ಕೈಗಾರಿಕ ಪ್ರದೇಶದಲ್ಲಿರುವ ಪ್ರತಿಷ್ಠಿತ ಕಾರ್ಖಾನೆಗಳಿಗೆ ಹುಡುಗರು ಬೇಕಾಗಿದ್ದಾರೆ.
ವಯಸ್ಸು: 18 ರಿಂದ 40 ವರ್ಷ.
ವಿದ್ಯಾರ್ಹತೆ: 7 ರಿಂದ PUC, ITI Fitter, Diploma Mach. ಸಂಪರ್ಕಿಸಿ:

Mob: 9035381989

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Housekeeping	7th Standard

0821-2499188 / 9880186386

WANTED TELECALLERS

We are HIRING HINDI TELECALLERS for Inbound Process
Salary 10K -15K
Location - Kuvempunagar M Block

6361078284

Experience, Fresher or Experienced Can apply

S.K. CONSTRUCTION

ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸ ಮನೆ ಮತ್ತು Alteration Work, Plan, 3D Elevation ಸಹಿತ ಕಟ್ಟಿ ಕೊಡುತ್ತೇವೆ

9620528490

ವರ ಬೇಕಾಗಿದ್ದಾರೆ

ಮೈಸೂರಿನಲ್ಲಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಉದ್ಯೋಗಸ್ಥಳಾದ 24 ವರ್ಷದ, ಶಿವಾಜಿ ಮರಾಠ ಜಾತಿಯ ಹುಡುಗಿಗೆ, ಸ್ವಜಾತಿಯ ಉದ್ಯೋಗಸ್ಥ ವರ ಬೇಕಾಗಿದೆ. ಸಂಪರ್ಕಿಸಿ:

7899407211, 6360387479

Part Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ.
(ಕೋರಿಯರ್ ಸೌಲಭ್ಯವಿದೆ).

87490 98879

FOR SALE

1) 30x40 - 13 Lakhs sites in Defence Apartment, Near Kote Road. (2) 30x40 - 12 Lakhs Elwala. (3) 40x60 site in before Brahmins Layout, Near Ring Road. (4) 17x60, 3 BHK Kamakshi Hospital, near Saraswathipuram. (5) 30x40, N, G+2 house near Ashwini Choultry, Srirampura. (6) 12x36 house G+2 Kuvempunagar.

9035990359, 9538690359

SITE FOR SALE

30x30
Yashwini Dristi Enclave Attached Vimana Nagara.
30x40 E/F, attached to MAPLE GREEN.

Mob: 9740088990

ಹೊಸ ಮನೆ ಮಾರಾಟಕ್ಕಿದೆ

20X30,
2 ರೂಂ, ಹಾಲ್, ಅಡುಗೆಮನೆ, ಪೂಜಾ, ಪೂರ್ತಿ ಟೀಕ್, ಗ್ರಾನೈಟ್ ಫ್ಲೋರಿಂಗ್

ಸಂಪರ್ಕಿಸಿ: 9342188102

ಸೈಟು ಬೇಕಾಗಿದೆ

30x40, 20x30
ದಟ್ಟಗಳ್ಳಿ, ಸೋಮನಾಥನಗರ, ಬೆಮೆಲ್ ಅನೆಕ್ಸ್, ಯುನಿವರ್ಸಿಟಿ ಲೇಔಟ್ ಇದರ ಸುತ್ತ ಮುತ್ತ

9880268501
9844145987

ಸೈಟು ಮಾರಾಟಕ್ಕಿದೆ

20x30
ದಟ್ಟಗಳ್ಳಿ

9900251194
9738884777

CHANGE OF NAME

I, Smt. Meghana Karpuram, aged about 26 years, D/o N.S. Pundalika Rao, residing at House Name: Srinivasa Krupe, Kaveri Extension, Srirangapatna Town, Mandya Distrct, have changed my name from Meghana to Meghana Karpuram, on account of my marriage, vide affidavit Dt. 24-03-2023, sworn before Notary S. Narayanaswamy, B.Com., LL.B, Srirangapatna. In future for all records, deeds and transactions, I will be identified as Meghana Karpuram.

Sd/- Meghana Karpuram

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು

Famous Astrologer
ಪಂಡಿತ್ ಸಂತೋಷ್. 9741250896

ಕಾಣತೊರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ದಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು

ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990

ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

Sudarshan Saur

SOLAR WATER HEATER



ATTRACTIVE OFFER
ಸೇಲ್ಸ್&ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available

SUNZONE SOLAR SYSTEM
Vishwamanava Double Road, Kuvempunagar, Mysuru

9845175443

ಗೋವಾ ಟೂರ್ಸ್

ಕಲಂಗುಟ್ ಬೀಚ್, ದೂದ್‌ಸಾಗರ್ ಭಾಗ ಬೀಚ್, ಮಂಗೇಳಿ ಟೆಂಪಲ್ ಇತ್ಯಾದಿ
3 ದಿನಗಳು ದಿನಾಂಕ: 07/04/2023

ಶಿರಡಿ ಟೂರ್

ಎಲ್ಲೋರ ಗುಹೆಗಳು, ಶನಿಸಿಂಗನಾಪುರ ತ್ರೈಯಂಬಕೇಶ್ವರ, ನಾಸಿಕ್, ಕೋಲ್ಲಾಪುರ ಇತ್ಯಾದಿ
6 ದಿನಗಳು ದಿನಾಂಕ: 22–04–2023

7022271023

THE CREATIVE TALES

Summer Camp - 2023
Fee 1500/-, Time : 10 AM - 2PM
From April 6th May 14th

9108647168

Activities : Art & Craft, Music, Shloka, Clay modeling, Candle Making, Picnic and Much More

ಕಳೆದಿದೆ

ಕೆ.ಲಕ್ಷ್ಮೀ W/o ಎ. ಕರುಣಾನಿಧಿ
609/1, K8/1A, ಆಯಿಲ್ ಮಿಲ್ ಸ್ಟ್ರೀಟ್, ಕೆ.ಆರ್. ಮೊಹಲ್ಲಾ, ಮೈಸೂರು–570004, ಮನೆಯ ಸೇಲ್ ಡೀಡ್ ದಿ: 04–06–1992 ಬುಕ್ ನಂ.1, ವಾಲ್ 4244, ಪುಟ ಸಂಖ್ಯೆ 208–212, ರೈಡ್ ರಿಜ್ ನಂ. 2131, ರಿಜ್ ದಿ: 29–07–1992 ಕಳೆದಿದೆ.
ಸಿಕ್ಕಿದವರು ಸಂಪರ್ಕಿಸಿ:

8431999993

ಇಂದೇ ಸಂಪರ್ಕಿಸಿ

ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಹೊಸದಾಗಿ ತೆರೆದಿರುವ ಕಂಪನಿಯೊಂದಕ್ಕೆ 128 ವಿವಿಧ ಪೋಸ್ಟ್‌ಗಳಿಗೆ SSLC, PUC & Degree ಆಗಿರುವ ಉತ್ಸಾಹಿ ಯುವಕ / ಯುವತಿಯರು ಬೇಕಾಗಿದ್ದಾರೆ.
ಉಚಿತ ವಸತಿ ಊಟದೊಂದಿಗೆ
14000-30000, ESI-PF ಸೌಲಭ್ಯವಿದೆ

9008603466, 9980346131

IMMEDIATE HIRING

Qualification : 7th, 10th PUC, Diploma, ITI Any Degree (Pass or Fail)
Salary : 18000 - 35000
Age Limit : 35 Below
Applicable Male Candidates Only

8217557212

ವಧು–ವರಾನ್ವೇಷಣೆ

ಒಕ್ಕಲಿಗ/ಕುರುಬ/ಲಿಂಗಾಯತ/ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)

9343175000

ಕೆಲಸಕ್ಕೆ ಬೇಕಾಗಿದ್ದಾರೆ

ಮೇಟಗಳ್ಳಿ CIPET ಕಾಲೇಜು ಹತ್ತಿರವಿರುವ ಅನಿಮಲ್ ಫೀಡ್ ಕಂಪನಿಗೆ 18 ರಿಂದ 45 ವರ್ಷದ ಒಳಗಿನ ಪುರುಷರು ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರ್ಹತೆ ಅವಶ್ಯಕತೆ ಇಲ್ಲ
ಸಂಬಳ : 14000/-
ಕೂಡಲೇ ಸಂಪರ್ಕಿಸಿ
ಚಾಮುಂಡೇಶ್ವರಿ ಎಂಟರ್‌ಪ್ರೈಸಸ್

ಲೋಕೇಶ್ – 8722844236

HOUSE FOR RENT

2BHK at 2nd Floor Recently Renovated) Very Near to Vivekananda Circle for Veg Only

9448879998

WANTED

1) Office Assistant with Computer Knowledge, Kannada & English Typing
2) DTP Operator, Graphic Designer, Well Versed in Corel Draw and Photoshop

9620962050

ಉದ್ಯೋಗವಕಾಶ

ಮೈಸೂರಿನ ಹೆಸರಾಂತ ವೈದ್ಯಕೀಯ ಸೇವಾ ಸಂಸ್ಥೆಯಲ್ಲಿ ವಯೋವೃದ್ಧರೂ, ರೋಗಿಗಳು ಮತ್ತು ವಿಶೇಷ ಚೇತನರನ್ನು ನೋಡಿಕೊಳ್ಳಲು ಹಾಗೂ ಹೌಸ್‌ಕೀಪಿಂಗ್ ಕೆಲಸಕ್ಕೆ ಶ್ರದ್ಧೆ, ನಿಷ್ಠೆ ಹಾಗೂ ಸೇವಾ ಮನೋಭಾವದಿಂದ ಕೆಲಸ ನಿರ್ವಹಿಸಲು ಯುವಕ ಯುವತಿಯರು ಮತ್ತು ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ವಿದ್ಯಾರ್ಹತೆ (7th, 10th, PUC, ANM, GNM, ಪಾಸ್/ಫೇಲ್ ತಿಂಗಳ ಸಂಬಳ ರೂ. 9000 - 18000/-

9606514441, 0821-4242351, 7349278501

HOUSE FOR RENT

NEAR SAPNA BOOK HOUSE Ceebaiah Road, City Centre
1) G.F. 3 BHK Semi Furnished (Only for Veg)
2) F/F 2 Rooms (Only for Ladies)

9483901105
9845766327

HOUSE FOR SALE

20x30 Residential House at Srirampura 2nd Stage, Near to Railway Workshop
Clear Tittles (Brokers Excuse)
Immediate Registration
Genuine Buyers Only

9141915294
9379366388

FOR RENT

G/F, 2BHK, Solar
199, 9th Cross, 'M'Block, II Stage, Kuvempunagar Mysore-23

9900565053

ಬೇಕಾಗಿದ್ದಾರೆ

ಹಾಸನ & ಮಂಡ್ಯ ಜಿಲ್ಲೆಗೆ ಹೆಸರಾಂತ ಕಂಪನಿಗಳ ವಸ್ತುಗಳನ್ನು ಡೆಲಿವರಿ ಮಾಡಲು ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ. ESI + PF ಉಚಿತ ಪೆಟ್ರೋಲ್, ಪಿಯುಸಿ ವಿದ್ಯಾರ್ಹತೆ ಹೊಂದಿರುವ ಸ್ವಂತ ಸ್ಕೂಟರ್ ಮತ್ತು ಆಡ್ರ್ಯಾಂಡ್ ಮೊಬೈಲ್ ಹೊಂದಿರುವವರು ಕರೆ ಮಾಡಿ

8495057826, ರಾಜು (ಹಾಸನ)
7892929027 ಮೋಹನ್ (ಮಂಡ್ಯ)

FOR RENT

2BHK G/F, 2BHK, Ist / F Cars / Bikes parking space Suitable for Office cum Residence / Guest House / Quarters

9481426957

ಆದಿ ಕರ್ನಾಟಕ (ಬಲಗೈ)

BE, MTech, MBBS, MD, MS, BAMS, MSC, MBA, MCA, M.Com, MA Phd, Bsc, BCom, BCA, BA BEd
ವಧುವರರಿಗೆ ಸಂಪರ್ಕಿಸಿ:
"ನವಿಲೂರು ರಂಗಸ್ವಾಮಿ"
ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು

8711974172

SITE FOR SALE

Vijayanagar 2nd Stage
20x30 East Face, Next to Corner Site
Next to Chandel Park, Near KD Circle.

9902851017

ಛತ್ರ ಖಾಲಿ ಇದೆ

ದಿನಾಂಕ ಮೇ 3, 2023 ರಂದು ನೇರಂಬಳ್ಳಿ ಸಾವಿತ್ರಮ್ಮ ಸುಬ್ಬರಾವ್ ಕಲ್ಯಾಣ ಮಂಟಪ, ಲಕ್ಷ್ಮೀಪುರಂ, ಕಾಂತರಾಜ್ ಅರಸ್ ರಸ್ತೆ
ಛತ್ರ ಖಾಲಿ ಇರುತ್ತದೆ.
ಸಮಾರಂಭಗಳಿಗೆ ಸಂಪರ್ಕಿಸಿ:

9448917957, 9480512518

ಬೇಕಾಗಿದ್ದಾರೆ

ಕಂಪ್ಯೂಟರ್ ಟೈಪಿಂಗ್ ಬಲ್ಲ ಅಭ್ಯರ್ಥಿಗಳು ಬೇಕಾಗಿದ್ದಾರೆ ಹಾಗೂ ಮೈಸೂರು, ಮಂಡ್ಯ, ಜಿಲ್ಲಾದ್ಯಂತ ಬ್ಯಾಂಕ್ ವೆರಿಫಿಕೇಷನ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ

ಶೇಖರ್ : 9945911118
ಅನಿಲ್ : 7026996123

ಮನೆ ಭೋಗ್ಯಕ್ಕೆ ಇದೆ

ಮೈಸೂರು ಸಿಟಿ, ರಾಮಾನುಜ ರಸ್ತೆ, 7ನೇ ಕ್ರಾಸ್, ಎಲೆ ತೋಟ, 30x40 ಅಡಿಯಲ್ಲಿ ಹೊಸದಾಗಿ ಕಟ್ಟಿರುವ 2BHK ಫಸ್ಟ್ ಫ್ಲೋರ್ ಮನೆ, ಸಸ್ಯಾಹಾರಿಗಳಿಗೆ ಮಾತ್ರ
13 ಲಕ್ಷ, ನೆಗೋಷಿಬಲ್

9036620008
9480966479

ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳಿನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸಕ್ಕಾಗಿ ಅಕೌಂಟೆಂಟ್ ಬೇಕಾಗಿದ್ದಾರೆ ಹುಡುಗಿಯರಿಗೆ ಮಾತ್ರ
ಸಂಬಳ: 16,000/–

8892258814

100% Job

ಮೈಸೂರಿನ ಪ್ರತಿಷ್ಠಿತ ಕಂಪನಿಗಳಿಗೆ ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ
Any Qualification (7th, 10th, PUC, ITI, Any Degree Pass Fail) ಆದವರಿಗೆ ಅರ್ಹತೆಯ ತಕ್ಕಂತೆ ಕೆಲಸ ಸಂಬಳ :
14500 - 39000, ESI+PF+OT ಸೇರಿ. ಪರತ್ತು ಅನ್ವಯ

9980630131, 9980692151

ಕೆಲಸಕ್ಕೆ ಬೇಕಾಗಿದ್ದಾರೆ

ಹುಡುಗಿಯರಿಗೆ ಉಚಿತ ತರಬೇತಿಯನ್ನು ಕೊಟ್ಟು ನಮ್ಮಲ್ಲೆ ಕೆಲಸಕ್ಕೆ ತೆಗೆದುಕೊಳ್ಳುತ್ತೇವೆ. ವಯೋಮಿತಿ 18 ರಿಂದ 30 ವರ್ಷದವರಿಗೆ ಆದ್ಯತೆ ನೀಡಲಾಗುವುದು

9945424383, 6361808662
(ಜೂ ರಸ್ತೆ ಮತ್ತು ಜಯಲಕ್ಷ್ಮಿಪುರಂ)

SANDAL ROSE CONVENT

D.Salundi, Mysore-570008

Required Teachers

Montessori, Primary to Teach English, EVS, Maths & Kannada, Degree with B.Ed / D.Ed

9591836513

ಮುಡಾ ಸೈಟ್ ಮಾರಾಟಕ್ಕಿದೆ

30x40
East Facing
ಜ್ಞಾನಭಾರತಿ ಲೇಔಟ್ 2ನೇ ಹಂತ, ದಡದಹಳ್ಳಿ, ಮೈಸೂರು,

9342123373

NEW HOUSE FOR SALE

30x40 Duplex, 4BHK, Vijayanagar 4th Stage, 2nd Phase, Near Marimallappa School, Mysore

9342289695, 9342593154

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಬಿಜೆಪಿ ಅಧಿಕಾರಕ್ಕೆ ಬರುವುದನ್ನು ತಡೆಯಲು ಸಾಧ್ಯವಿಲ್ಲ

ಜಿಲ್ಲಾ ಎಸ್ಟಿ, ಕಾರ್ಯಕರ್ತರ ಬೃಹತ್ ಸಮಾವೇಶದಲ್ಲಿ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ



ನಂಜನಗೂಡು, ಮಾ.24– ಡಬಲ್ ಇಂಜಿನ್ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಜನರು ಮೆಚ್ಚಿದ್ದಾರೆ. ಹೀಗಾಗಿ ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ನಗರದ ವಿದ್ಯಾವರ್ಧಕ ಶಾಲಾ ಮೈದಾನದಲ್ಲಿ ಬಿಜೆಪಿ ವತಿಯಿಂದ ಆಯೋಜಿಸಿದ್ದ ಜಿಲ್ಲಾ ಎಸ್ಟಿ ಸಮಾವೇಶ ಮತ್ತು ಕಾರ್ಯಕರ್ತರ ಬೃಹತ್ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ಬಿಜೆಪಿ ಪಕ್ಷ ಹೆಮ್ಮರವಾಗಿ ಬೆಳೆಯುತ್ತದೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಬಿಜೆಪಿ ಪಕ್ಷವನ್ನು ಪ್ರತಿ ಹಳ್ಳಿಗಳಿಗೂ ತಲುಪಿಸಿದ ಕೀರ್ತಿ ಬಿ.ಎಸ್.ಯಡಿಯೂರಪ್ಪನವರಿಗೆ ಸಲ್ಲುತ್ತದೆ. ಬಿಜೆಪಿ ಪಕ್ಷವನ್ನು ಎಲ್ಲಾ ಜಾತಿ ವರ್ಗದವರೂ ಒಪ್ಪಿಕೊಂಡಿದ್ದಾರೆ. ಕಾಂಗ್ರೆಸ್‌ನವರು ಬಿಎಸ್‌ವೈ ಅವರು ಮುಖ್ಯಮಂತ್ರಿ ಹುದ್ದೆಯಿಂದ ರಾಜೀನಾಮೆ ನೀಡಿದ ನಂತರ ಮನೆಯಲ್ಲಿ ಕೂರುತ್ತಾರೆ. ನಾವೇ ಅಧಿಕಾರಕ್ಕೆ ಬರುತ್ತೇವೆಂಬ ಹಗಲು ಕನಸು ಕಾಣುತ್ತಿದ್ದಾರೆ. ಆದರೆ ಯಡಿಯೂರಪ್ಪನವರು ರಾಜ್ಯದಲ್ಲಿ ಮತ್ತೊಮ್ಮೆ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರಲು ಶಪಥ ಮಾಡಿದ್ದಾರೆ. ಹೀಗಾಗಿ ಮತ್ತೊಮ್ಮೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ. ಕಾರ್ಯಕರ್ತರು ಮೋದಿ ಅವರ ಕೇಂದ್ರ ಮತ್ತು ಬಿಎಸ್‌ವೈ, ಬಸವರಾಜ ಬೊಮ್ಮಾಯಿಯವರ ಬಿಜೆಪಿ ಸರ್ಕಾರದ ಸಾಧನೆಗಳನ್ನು ಮನೆ ಮನೆಗೆ ತಲುಪಿಸಿ ಎಂದರು.

ಬಿ.ಹರ್ಷವರ್ಧನ್‌ರನ್ನು ಮತ್ತೊಮ್ಮೆ ಆಶೀರ್ವದಿಸಿ: ಕಾಂಗ್ರೆಸ್ ಬರೀ ಪುಕ್ಸಟ್ಟೆ ಭಾಷಣ ಮಾಡುತ್ತಿತ್ತೇ ವಿನಹಃ ಕ್ಷೇತ್ರದಲ್ಲಿ ದಶಕಗಳ ರೈತರ ಕನಸಾಗಿದ್ದ ನುಗು ಏತ ನೀರಾವರಿ ಯೋಜನೆಗೆ ಅನುದಾನ ನೀಡಲಿಲ್ಲ. ಆದರೆ ಬಿ.ಎಸ್.ಯಡಿಯೂರಪ್ಪನವರು 80 ಕೋಟಿ ಅನುದಾನ ನೀಡಿದರು. ಬಸವ ಭವನ ನಿರ್ಮಾಣಕ್ಕೆ 2.5 ಕೋಟಿ ನೀಡಿದ್ದಾರೆ. 120 ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಗಳಾಗಿವೆ. ಹೀಗೆ ಕ್ಷೇತ್ರದಲ್ಲಿ ಸುಮಾರು 750 ಕೋಟಿಗಿಂತಲೂ ಹೆಚ್ಚಿನ ಅಭಿವೃದ್ಧಿ ಕೆಲಸವನ್ನು ಶಾಸಕ ಬಿ.ಹರ್ಷವರ್ಧನ್ ಮಾಡಿದ್ದಾರೆ. ಅವರು ಕಳೆದ 5 ವರ್ಷದಲ್ಲಿ ಮಾಡಿರುವ ಅಭಿವೃದ್ಧಿ ಕೆಲಸ ಯೋಚಿಸಿ, ಅವರನ್ನು ಮತ್ತೊಮ್ಮೆ ಆಶೀರ್ವಾದ ಮಾಡಿ ಗೆಲ್ಲಿಸಿ ಎಂದು ಕರೆ ನೀಡಿದರು.

ಶಾಸಕ ರಾಜುಗೌಡ ಮಾತನಾಡಿ, ಕಾಂಗ್ರೆಸ್ ಪಕ್ಷ ಎಸ್ಟಿ ಸಮುದಾಯಕ್ಕೆ ವಿದ್ಯೆ ಕಲಿಸದಿದ್ದರೂ, ದ್ರೋಣರಂತೆ ಹೆಬ್ಬೆಟ್ಟು ಪಡೆದು ವಂಚಿಸಿದೆ. ಬಿಜೆಪಿ ಶೇ.4ರಿಂದ 7ಕ್ಕೆ ಮೀಸಲಾತಿ ಹೆಚ್ಚಿಸಿದ್ದಲ್ಲದೆ, ತಳವಾರ ಪರಿವಾರ ಸಮಸ್ಯೆ ಬಗೆಹರಿಸಿದೆ. ಬಿಜೆಪಿ ಸಂವಿಧಾನ ಬದಲಿಸುತ್ತದೆ ಎಂದು ಕಾಂಗ್ರೆಸ್ ಅಪಪ್ರಚಾರದಲ್ಲಿ ತೊಡಗಿದೆ. ಆದರೆ ಬಾಬಾ ಸಾಹೇಬರ ಸಂವಿಧಾನವನ್ನು ಯಾರಿಂದಲೂ ಬದಲಿಸಲು ಸಾಧ್ಯವಿಲ್ಲ. ಈ ಭಾಗದ ನಾಯಕ ಸಮುದಾಯದವರು ಬಿಜೆಪಿ ಬೆಂಬಲಿಸಬೇಕು ಎಂದರು.

ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಬಿಜೆಪಿ ಸರ್ಕಾರವನ್ನು ಅಧಿಕಾರಕ್ಕೆ ತರುವಲ್ಲಿ ಬಿ.ವೈ.ವಿಜಯೇಂದ್ರ ಪಾತ್ರ ದೊಡ್ಡದು. 13 ಕ್ಷೇತ್ರಗಳ ಉಪಚುನಾವಣೆಯಲ್ಲಿ ಅವರು ಸಾಕಷ್ಟು ಶ್ರಮವಹಿಸಿ ಗೆಲ್ಲಿಸಿದ್ದಾರೆ. ಅವರ ನಾಯಕತ್ವದಲ್ಲಿ ಮುಂದಿನ ಚುನಾವಣೆ ನಡೆಯುತ್ತಿದೆ. ಅಲ್ಲದೆ ಕ್ಷೇತ್ರಕ್ಕೆ 750 ಕೋಟಿ ಅನುದಾನ ತರಲು ಅವರ ನೆರವು ಕಾರಣ. ಉಪ ಚುನಾವಣೆಯಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡವರಿಗೆ ಮತ್ತೆ ತಕ್ಕ ಉತ್ತರ ಕೊಡಲು ಸಮಯ ಬಂದಿದ್ದು ಕಾರ್ಯಕರ್ತರು, ಸಾರ್ವಜನಿಕರು ಬೆಂಬಲಿಸಿ ಆಶೀರ್ವದಿಸಿ ಎಂದರು.

ಇದೇ ವೇಳೆ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಅಧ್ಯಕ್ಷ ಎಸ್.ಮಹದೇವಯ್ಯ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ನಗರಸಭಾಧ್ಯಕ್ಷ ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ಮುಖಂಡರಾದ ಕೆ.ಕೆ.ಜಯದೇವ್, ಕುಂಬ್ರಳ್ಳಿ ಸುಬ್ಬಣ್ಣ, ಅಣ್ಣಪ್ಪ, ರಘು ಕೌಟಿಲ್ಯ, ಕೃಷ್ಣಪ್ಪಗೌಡ, ವಿಜಯ್ ಕುಮಾರ್, ಪರಶಿವಮೂರ್ತಿ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ ಸೇರಿದಂತೆ ಇತರರಿದ್ದರು.

> ಕಾಂಗ್ರೆಸ್‌ನಲ್ಲಿ ಬಸವರಾಜ ಬೊಮ್ಮಾಯಿ ಅವರಿಗೆ ಸಮನಾಗಿ ಯಾರಿಗೂ ಮುಖ್ಯಮಂತ್ರಿಯಾಗುವ ಯೋಗ್ಯತೆ ಇಲ್ಲ. ಸಿಎಂ ರೇಸ್‌ನಲ್ಲಿರುವವರು ಕೋಟಿ ರೂ.ಗಳ ಬೇಲ್ ಮೇಲೆ ಹೊರಗಿದ್ದಾರೆ. ಚುನಾವಣೆ ಮುಗಿದ ನಂತರ ಅವರು ಮತ್ತೆ ಜೈಲಿಗೆ ಹೋಗುತ್ತಾರೆ. ಅವರು ಮುಖ್ಯಮಂತ್ರಿಯಾಗುವುದಿಲ್ಲ. ಮತ್ತೊಮ್ಮೆ ಬಿಜೆಪಿ ಪಕ್ಷವೇ ಅಧಿಕಾರ ನಡೆಸಲಿದ್ದು, ಇದರಲ್ಲಿ ಯಾವುದೇ ಅನುಮಾನ ಬೇಡ. ಸಿದ್ದರಾಮಯ್ಯ ಕ್ಷೇತ್ರ ಹುಡುಕಾಟ ನಡೆಸುತ್ತಿದ್ದಾರೆ. ಅವರು ಮುಖ್ಯಮಂತ್ರಿಯಾಗಲು ಸಾಕಷ್ಟು ಸಹಾಯ ಮಾಡಿದೆ. ಚಾಮುಂಡೇಶ್ವರಿ ಉಪ ಚುನಾವಣೆಯಲ್ಲಿ 237 ಮತಗಳಿಂದ ಗೆಲ್ಲಲು ನಾನು ಕಾರಣ. ಅದನ್ನು ನಿಮಗೆ ಜ್ಞಾಪಕ ಮಾಡುತ್ತಿದ್ದೇನೆ. ಉಪಕಾರ ಸ್ಮರಣೆಯಿಲ್ಲದೆ ಸಂಪುಟದಿಂದ ಕೈಬಿಟ್ಟು ನನ್ನನ್ನು ಅವಮಾನಿಸಿದರು. ಅಲ್ಲದೆ ಕಚ್ಚೆ ಪಂಚೆ ಎತ್ತಿಕೊಂಡು ಉಪ ಚುನಾವಣೆಯಲ್ಲಿ ನನ್ನನ್ನು ಸೋಲಿಸಿದರು. ಈಗ ತಾಕತ್ತಿದ್ದರೆ ವರುಣಾದಲ್ಲಿ ಸ್ಪರ್ಧಿಸಲಿ.
>
> –ವಿ.ಶ್ರೀನಿವಾಸಪ್ರಸಾದ್, ಸಂಸದ.

ಹುಣಸೂರು ನಗರಸಭೆಗೆ 81.67 ಲಕ್ಷ ಉಳಿತಾಯ ಬಜೆಟ್



ಹುಣಸೂರು, ಮಾ.24– ಹುಣಸೂರು ನಗರಸಭೆಯ 2023–24ನೇ ಸಾಲಿಗೆ 81.67 ಲಕ್ಷ ರೂ.ಗಳ ಉಳಿತಾಯ ಬಜೆಟ್ ಅನ್ನು ನಗರಸಭೆ ಅಧ್ಯಕ್ಷೆ ಗೀತಾ ನಿಂಗರಾಜು ಮಂಡಿಸಿದರು.

ನಗರಸಭಾ ಸಭಾಂಗಣದಲ್ಲಿ ಶುಕ್ರವಾರ ನಡೆದ ಬಜೆಟ್ ಮಂಡನೆ ಸಭೆಯಲ್ಲಿ 2023–24ನೇ ಸಾಲಿನ ಆಯವ್ಯಯ ಮಂಡಿಸಿದ ಅಧ್ಯಕ್ಷರು, ಪ್ರಾರಂಭಿಕ ಶಿಲ್ಕು 1269.07 ಲಕ್ಷಗಳು ಸೇರಿದಂತೆ ವಿವಿಧ ಮೂಲಗಳಿಂದ 2245.85 ಲಕ್ಷ ಸೇರಿದಂತೆ 3514.92 ಲಕ್ಷ ಆದಾಯ ನಿರೀಕ್ಷಿಸಲಾಗಿದ್ದು, ಈ ಪೈಕಿ 3433.25 ಲಕ್ಷ ರೂ.ಗಳನ್ನು ಖರ್ಚು ಮಾಡಲು ಉದ್ದೇಶಿಸಲಾಗಿದ್ದು, ಒಟ್ಟಾರೆ 81.67 ಲಕ್ಷ ರೂ. ಉಳಿತಾಯವಾಗಲಿದೆ ಎಂದರು.

ಆದಾಯದ ಮೂಲಗಳು: ಪ್ರಸಕ್ತ ಸಾಲಿನಲ್ಲಿ ನಗರಸಭೆಯ ಸಂಪನ್ಮೂಲಗಳಾದ ಆಸ್ತಿ ತೆರಿಗೆಯಿಂದ 378.00 ಲಕ್ಷ ರೂ., ನೀರು ಸರಬರಾಜು ಶುಲ್ಕ 47 ಲಕ್ಷ ರೂ. ಉದ್ದಿಮೆ ರಹದಾರಿಯಿಂದ 15 ಲಕ್ಷ, ವಾಣಿಜ್ಯ ಸಂಕೀರ್ಣಗಳ ಬಾಡಿಗೆ ಬಾಬ್ತು 80 ಲಕ್ಷ ರೂ. ಸಂಪನ್ಮೂಲ ನಿರೀಕ್ಷಿಸಲಾಗಿದೆ.

ಸರ್ಕಾರದ ಅನುದಾನಗಳ ವಿವರ: ಸರ್ಕಾರದಿಂದ ಎಸ್‌ಎಫ್‌ಸಿ ಮುಕ್ತನಿಧಿ ಅನುದಾನ (ಎಸ್‌ಸಿಪಿ 21 ಲಕ್ಷ ರೂ., ಟಿಎಸ್‌ಪಿ 8 ಲಕ್ಷ ರೂ., ಬಂಡವಾಳ ಆಸ್ತಿಗಳ ಸೃಜನೆಗೆ 92 ಲಕ್ಷ ರೂ.) ಒಟ್ಟು 121 ಲಕ್ಷ ರೂ., ಎಸ್‌ಎಫ್‌ಸಿ ವಿದ್ಯುತ್‌ಚಕ್ತಿ ಅನುದಾನ (ಬೀದಿದೀಪ 158 ಲಕ್ಷ ರೂ., ನೀರು ಸರಬರಾಜು 257 ಲಕ್ಷ ರೂ.) ಒಟ್ಟು 415.00 ಲಕ್ಷ ರೂ.ಗಳು, ಎಸ್‌ಎಫ್‌ಸಿ ವೇತನ ಅನುದಾನ 324.00 ಲಕ್ಷ ರೂ., ಎಸ್.ಎಫ್.ಸಿ ಕುಡಿಯುವ ನೀರಿನ ಅನುದಾನ 5.00 ಲಕ್ಷ ರೂ., ಎಸ್‌ಎಫ್‌ಸಿ ವಿಶೇಷ ಅನುದಾನ 2018–19ನೇ ಸಾಲಿನ ಹಂಚಿಕೆ 300.00 ಲಕ್ಷ ರೂ., 15ನೇ ಹಣಕಾಸು ಆಯೋಗದ ಅನುದಾನ 282.00 ಲಕ್ಷ ರೂ., ಒಟ್ಟು 1147.00 ಲಕ್ಷ ರೂ. ಅನುದಾನ ಸರ್ಕಾರದಿಂದ ಲಭಿಸಲಿದೆ ಎಂದರು.

ಖರ್ಚಿನ ವಿವರ: ಕಟ್ಟಡ ಅಭಿವೃದ್ಧಿ ಮತ್ತು ನಿರ್ವಹಣೆ 25.00 ಲಕ್ಷ ರೂ., ರಸ್ತೆಗಳ ಅಭಿವೃದ್ಧಿ ಮತ್ತು ನಿರ್ವಹಣೆ 450.00 ಲಕ್ಷಗಳು, ರಸ್ತೆಬದಿ ಹಾಗೂ ಮಳೆ ನೀರು ಚರಂಡಿ ಅಭಿವೃದ್ಧಿ ಮತ್ತು ನಿರ್ವಹಣೆ 340.00 ಲಕ್ಷಗಳು, ಒಳಚರಂಡಿ ಅಭಿವೃದ್ಧಿ ಮತ್ತು ನಿರ್ವಹಣೆ 185.00 ಲಕ್ಷಗಳು, ಉದ್ಯಾನವನ, ಸ್ಮಶಾನ ಅಭಿವೃದ್ಧಿ 50.00 ಲಕ್ಷಗಳು, ಘನತ್ಯಾಜ್ಯ ವಸ್ತು ನಿರ್ವಹಣೆ 505.00 ಲಕ್ಷಗಳು, ಬೀದಿ ದೀಪ ಅಭಿವೃದ್ಧಿ ಹಾಗೂ ನಿರ್ವಹಣೆ 65.00 ಲಕ್ಷಗಳು, ನೀರು ಸರಬರಾಜು ಅಭಿವೃದ್ಧಿ ಹಾಗೂ ನಿರ್ವಹಣೆ 505.00 ಲಕ್ಷಗಳು, ಕಲ್ಯಾಣ ಕಾರ್ಯಕ್ರಮಗಳು: (24.10%) 39.28 ಲಕ್ಷಗಳು, ಕಲ್ಯಾಣ ಕಾರ್ಯಕ್ರಮಗಳು: (7.25%) 9.41 ಲಕ್ಷಗಳು, ಕಲ್ಯಾಣ ಕಾರ್ಯಕ್ರಮಗಳು: (5%) 5.35 ಲಕ್ಷಗಳು ಸೇರಿದಂತೆ ಒಟ್ಟು ಖರ್ಚು 2179.00 ಲಕ್ಷ ರೂ.ಗಳನ್ನು ವೆಚ್ಚ ಮಾಡಲು ಉದ್ದೇಶಿಸಲಾಗಿದೆ ಎಂದರು.

ಲಕ್ಷ್ಮಣತೀರ್ಥ ನದಿ ನೀರು ಶುದ್ಧೀಕರಣಕ್ಕಾಗಿ 50 ಲಕ್ಷ ರೂ. ಕಾಯ್ದಿರಿಸಲಾಗಿದ್ದು, ಹೆಚ್ಚುವರಿ ಅನುದಾನವನ್ನು ಸರ್ಕಾರದ ವಿಶೇಷ ಯೋಜನೆಯಲ್ಲಿ ಪಡೆಯಲು ಪ್ರಯತ್ನಿಸಲಾಗುವುದು. ನಗರೋತ್ಥಾನ ಹಂತ–4ರ (ಅಮೃತ್‌ಯೋಜನೆ) ಯೋಜನೆಯಡಿ ನಗರಸಭೆಗೆ 2500.00 ಲಕ್ಷ ರೂ. ಬಿಡುಗಡೆಯಾಗಿದ್ದು, ಈಗಾಗಲೇ ಕ್ರಿಯಾಯೋಜನೆಗೆ ಅನುಮೋದನೆ ದೊರೆತಿದ್ದು, ವಿವಿಧ ಕಾಮಗಾರಿಗಳು ಈಗಾಗಲೇ ಪ್ರಗತಿಯಲ್ಲಿವೆ. ಈ ಯೋಜನೆಗಳು ಪೂರ್ಣಗೊಂಡಲ್ಲಿ 2023–24ನೇ ಸಾಲಿನ ಆರ್ಥಿಕ ವರ್ಷಾಂತ್ಯಕ್ಕೆ ನಗರದ ಸಮಗ್ರ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಎಂಬ ಅಂಶ ತಿಳಿಸಲು ಹರ್ಷವಾಗುತ್ತದೆ ಎಂದರು. ಇದೇ ವೇಳೆ ಬಜೆಟ್ ಮಂಡಿಸಲು ಸಲಹೆ, ಸೂಚನೆ, ಸಹಕಾರ ನೀಡಿದ ಉಪಾಧ್ಯಕ್ಷರು, ಸ್ಥಾಯಿ ಸಮಿತಿ ಅಧ್ಯಕ್ಷರು ಮತ್ತು ಸದಸ್ಯರಿಗೆ ಅಧ್ಯಕ್ಷೆ ಗೀತಾ ಧನ್ಯವಾದ ಅರ್ಪಿಸಿದರು. ಅಲ್ಲದೇ ಬಜೆಟ್ ತಯಾರಿಸಲು ಸಹಕರಿಸಿದ ಪೌರಾಯುಕ್ತರು, ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ವಂದನೆ ಸಲ್ಲಿಸುತ್ತೇನೆ ಎಂದರು. ಇದೇ ವೇಳೆ ನಗರಸಭೆಯ ಎಲ್ಲಾ ಸದಸ್ಯರು ಉಪಸ್ಥಿತರಿದ್ದರು.

ಕೋಟೆ ಪುರಸಭೆಗೆ 62.29 ಲಕ್ಷ ಉಳಿತಾಯ ಬಜೆಟ್



ಹೆಚ್.ಡಿ.ಕೋಟೆ, ಮಾ.24– ಪ್ರಸಕ್ತ ಸಾಲಿಗೆ ಪಟ್ಟಣದ ಪುರಸಭೆಗೆ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್ 62.29 ಲಕ್ಷ ರೂ.ಗಳ ಉಳಿತಾಯ ಮಂಡಿಸಿದರು.

ಪಟ್ಟಣದ ಪುರಸಭೆಯ ದಿ.ಎಸ್.ಚಿಕ್ಕಮಾದು ಸಭಾಂಗಣದಲ್ಲಿ ಬಜೆಟ್ ಮಂಡನಾ ಸಭೆಯಲ್ಲಿ 2023–24ನೇ ಸಾಲಿನ ಬಜೆಟ್ ಮಂಡಿಸಿದ ಅವರು, ಪುರಸಭೆಯ ವಿವಿಧ ಮೂಲ ಹಾಗೂ ಸರ್ಕಾರದ ಅನುದಾನ ಸೇರಿದಂತೆ 16.1 ಕೋಟಿ ರೂ.ಗಳ ಬಜೆಟ್ ತಯಾರಿಸಲಾಗಿದ್ದು, ಪಟ್ಟಣದ ಅಭಿವೃದ್ಧಿ, ಮೂಲ ಸೌಕರ್ಯ, ಕುಡಿಯುವ ನೀರು, ವಿದ್ಯುತ್ ದೀಪ ಸೇರಿದಂತೆ 15.38ಕೋಟಿ ಖರ್ಚಾಗಲಿದ್ದು, 62.29 ಲಕ್ಷ ಉಳಿತಾಯವಾಗಲಿದೆ ಎಂದರು.

ಪಟ್ಟಣದ ಅಭಿವೃದ್ಧಿಗೆ ಕಂದಾಯ ವಸೂಲಿ ಅವಶ್ಯಕ. ಹೀಗಾಗಿ ಅಧಿಕಾರಿಗಳು ಕಟ್ಟುನಿಟ್ಟಿನಿಂದ ಕಂದಾಯ ವಸೂಲಿ ಮಾಡಬೇಕು. ಜನರು ಸಹ ಕಂದಾಯ ಪಾವತಿಸುವ ಮೂಲಕ ಪುರಸಭೆಗೆ ಸಹಕರಿಸಬೇಕು. ಇದುವರೆಗೂ 150 ಮಂದಿ ಕಟ್ಟಡ ಪರವಾನಿಗೆ ಪಡೆಯುತ್ತಿದ್ದರು. ಆದರೆ ಈ ಬಾರಿ 160 ಮಂದಿ ಪರವಾನಗಿ ಪಡೆದಿದ್ದು 4ರಿಂದ 5 ಲಕ್ಷ ಆದಾಯ ಬಂದಿದೆ ಎಂದ ಅವರು, ಈ ಬಾರಿಯ ಬಜೆಟ್‌ನಲ್ಲಿ ಸಂತೆ ಮೈದಾನ ಅಭಿವೃದ್ಧಿ, ಪಾರ್ಕ್ ಅಭಿವೃದ್ಧಿ, ವಾಣಿಜ್ಯ ಸಂಕೀರ್ಣ, ಸ್ವಾಗತ ಕಮಾನು, ಕ್ಯಾಂಟೀನ್ ನಿರ್ಮಿಸಲು ತೀರ್ಮಾನಿಸಲಾಯಿತು.

ಬಜೆಟ್ ಮಂಡನೆ ಸಭೆಗೆ ಕಾಂಗ್ರೆಸ್ ಸದಸ್ಯೆ ಶಾಂತಮ್ಮ ಗೋವಿಂದರಾಜು ಅವರನ್ನು ಹೊರತುಪಡಿಸಿ 12 ಮಂದಿ ಗೈರಾಗಿದ್ದರು. ಸಭೆಯಲ್ಲಿ ಪುರಸಭಾಧ್ಯಕ್ಷೆ ಅನಿತಾ, ಮುಖ್ಯಾಧಿಕಾರಿ ಪಿ.ಸುರೇಶ್, ಮಾಜಿ ಅಧ್ಯಕ್ಷೆ ಸರೋಜಮ್ಮ, ಶಿವಮ್ಮ, ಸದಸ್ಯರಾದ ಮಿಲ್ ನಾಗರಾಜು, ಹರೀಶ್‌ಗೌಡ, ನಂಜಪ್ಪ, ಲೋಕೇಶ್, ಕವಿತಾ, ದರ್ಶಿನಿ, ನಂದಿನಿ ನಾಮ ನಿರ್ದೇಶನ ಸದಸ್ಯರಾದ ಸಿದ್ದರಾಜು, ಚಂದ್ರಮೌಳಿ, ಮಹೇಶ್, ಜೆ.ಸಿ.ಲೋಕೇಶ್, ಲೋಕೇಶ್ ನಾಯಕ ಇದ್ದರು.

ಶಾರ್ಟ್ ಸರ್ಕ್ಯೂಟ್: ಫರ್ನಿಚರ್ ಅಂಗಡಿಗೆ ಬೆಂಕಿ

ನಂಜನಗೂಡು, ಮಾ.24– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಫರ್ನಿಚರ್ ತಯಾರಿಕಾ ಘಟಕ ಹಾಗೂ ಮಾರಾಟ ಮಳಿಗೆ ಬೆಂಕಿಗೆ ಆಹುತಿಯಾಗಿ ಲಕ್ಷಾಂತರ ರೂ. ಮೌಲ್ಯದ ವಸ್ತುಗಳ ಭಸ್ಮವಾಗಿರುವ ಘಟನೆ ನಗರದ ಅಶೋಕ ಪುರಂ ಬಡಾವಣೆಯಲ್ಲಿ ಗುರುವಾರ ರಾತ್ರಿ ನಡೆದಿದೆ.

ನಗರದ ನಿವಾಸಿ ಸಾದಿಕ್ ಪಾಷ ಎಂಬುವರಿಗೆ ಸೇರಿದ ಫರ್ನಿಚರ್ ತಯಾರಿಕಾ ಅಂಗಡಿ ಬೆಂಕಿಗೆ ಆಹುತಿಯಾಗಿರುವುದು. ತಡರಾತ್ರಿ 2 ಗಂಟೆ ಸಮಯದಲ್ಲಿ ಅಂಗಡಿಯಲ್ಲಿ ಶಾರ್ಟ್ ಸರ್ಕ್ಯೂಟ್ ಸಂಭವಿಸಿ ಬೆಂಕಿ ಕಾಣಿಸಿಕೊಂಡಿದೆ. ಈ ವೇಳೆ ಅಂಗಡಿಯಲ್ಲಿದ್ದ ಸಿಲಿಂಡರ್ ಸ್ಫೋಟಗೊಂಡಿದ್ದು, ಬೆಂಕಿ ಕೆನ್ನಾಲಿಗೆ 4 ದಿಕ್ಕುಗಳಿಗೂ ಹರಡಿದ್ದು, ಅಂಗಡಿಯಲ್ಲಿದ್ದ 80 ಲಕ್ಷ ರೂ ಮೌಲ್ಯದ ಫರ್ನಿಚರ್, ಸೋಫಾ ಸೆಟ್, ಡೈನಿಂಗ್ ಟೇಬಲ್, ಬೀರುಗಳು ಹಾಗೂ ತಯಾರಿಕೆಗೆ ಬಳಸುವ ಕಚ್ಚಾ ಪದಾರ್ಥಗಳು, ಗೋದಾಮಿನಲ್ಲಿ ಸಂಗ್ರಹಿಸಿಟ್ಟಿದ್ದ ಬೆಲೆಬಾಳುವ ವಸ್ತುಗಳು ಸುಟ್ಟು ಹೋಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸರಗೂರು ತಾಲೂಕಿನ ತುಂಬಸೋಗೆಯಲ್ಲಿ ವಿವಿಧ ಸೇವಾ ಕಾರ್ಯಗಳ ಮೂಲಕ ಕೆಪಿಸಿಸಿ ಕಾರ್ಯಾಧ್ಯಕ್ಷ ದಿ.ಆರ್.ಧ್ರುವನಾರಾಯಣ್ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಈ ವೇಳೆ ಆದಿ ಕರ್ನಾಟಕ ಸೇರಿದಂತೆ ಎಲ್ಲಾ ಸಮಾಜದ ಮುಖಂಡರು, ಅಂಬೇಡ್ಕರ್ ಯುವಕ ಸಂಘದವರು ಹಾಜರಿದ್ದರು.



ಡಿಆರ್‌ಸಿ ಸಿನಿಮಾಸ್

DRC CINEMAS — ದೂ : 4240422/4241800

ಸ್ಕ್ರೀನ್ 1	ಕಬ್ಜ (ಕ): ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.10.25ಕ್ಕೆ, ಮ.1.30ಕ್ಕೆ, ದಾಸ್ ಕಾ ಧಮ್ಕಿ (ತೆ): ಸಂ.4.30ಕ್ಕೆ, ರಾ.7.25ಕ್ಕೆ, ಶಾಜಮ್ ದಿ ಫ್ಯೂರಿ ಆಫ್ ದಿ ಗಾಡ್ಸ್ (ಇಂ): ರಾ.10.20ಕ್ಕೆ.
ಸ್ಕ್ರೀನ್ 3	ಶಾಜಮ್ ದಿ ಫ್ಯೂರಿ ಆಫ್ ದಿ ಗಾಡ್ಸ್ (ಇಂ): ಬೆ.11.10ಕ್ಕೆ, ಮ.1.50ಕ್ಕೆ, ಮಿಸ್ ಚಟರ್ಜಿ Vs ನಾರ್ವೆ (ಹಿಂ): ಸಂ.4.30ಕ್ಕೆ, ರಾ.7.10ಕ್ಕೆ, ರಾ.9.50ಕ್ಕೆ
ಸ್ಕ್ರೀನ್ 4	ಕಬ್ಜ (ಕ): ಬೆ.10.35ಕ್ಕೆ, ಮ.1.20ಕ್ಕೆ, ಸಂ.4.10ಕ್ಕೆ, ರಾ.7ಕ್ಕೆ, ರಾ.9.45ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE — ದೂ : 2533444 / 2433456

ಸ್ಕ್ರೀನ್ 1	ಕಬ್ಜ (ಕ): ಬೆ.9.10ಕ್ಕೆ, ಮ.12ಕ್ಕೆ, ಮ.2.50ಕ್ಕೆ, ಸಂ.5.40ಕ್ಕೆ, ರಾ.8.30ಕ್ಕೆ.
ಸ್ಕ್ರೀನ್ 2	ಕಬ್ಜ (ಕ): ಬೆ.10.10ಕ್ಕೆ, ಮ.1ಕ್ಕೆ, ಮ.3.50ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಬ್ಜ (ಕ): ಬೆ.7.50ಕ್ಕೆ, ಬೆ.10.40ಕ್ಕೆ, ಮ.1.30ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಶಾಜಮ್ ದಿ ಫ್ಯೂರಿ ಆಫ್ ದಿ ಗಾಡ್ಸ್ (ಇಂ): ಬೆ.10.10ಕ್ಕೆ, ಮ.12.55ಕ್ಕೆ, ಸಂ.6.25ಕ್ಕೆ, ರಾ.9.10ಕ್ಕೆ, ಫಲನ ಅಬ್ಬೈ ಫಲನ ಅಮ್ಮೈ (ತೆ): ಸಂ.5.05ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS — ಮೊ.ನಂ: 8951357139 — ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಠಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಓಂ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಧಮಾಕಿ (ತೆ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ತು ತೋತಿ ಮೆ ಮಕ್ಕರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಬ್ಜ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಬ್ಜ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಸೇಥುನ್ ಕದವುಲದ(ತ)	4 ಪ್ರದರ್ಶನಗಳು
ಸಂಗಂ	
ಪಾಲಾರ್ (ಕ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕಬ್ಜ (ಕ)	4 ಪ್ರದರ್ಶನಗಳು
ಪ್ರಭಾ	
ವೇದ (ಕ)	4 ಪ್ರದರ್ಶನಗಳು

ಬಿಜೆಪಿಯನ್ನು ಪ್ರತಿ ಹಳ್ಳಿಗೂ ತಲುಪಿಸಿದ ಯಡಿಯೂರಪ್ಪ

ಯುವ ಚೈತನ್ಯ ಸಮಾವೇಶದಲ್ಲಿ ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ



ತಿ.ನರಸೀಪುರ, ಮಾ.24– ಕೇವಲ ನಗರ, ಮುಂದುವರೆದ ಜನಾಂಗಕ್ಕಷ್ಟೇ ಸೀಮಿತವಾಗಿದ್ದ ಬಿಜೆಪಿ ಪಕ್ಷವನ್ನು ರಾಜ್ಯದ ಪ್ರತಿ ಹಳ್ಳಿಹಳ್ಳಿಗೂ ತಲುಪಿಸಿದ ಕೀರ್ತಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ಸಲ್ಲುತ್ತದೆ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ಪಟ್ಟಣದ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಯುವ ಮೋರ್ಚಾ ವತಿಯಿಂದ ಆಯೋಜಿಸಿದ್ದ ಯುವ ಚೈತನ್ಯ ಸಮಾವೇಶ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕಳೆದ 15 ವರ್ಷಗಳ ಹಿಂದೆ ಬಿಜೆಪಿ ಪಕ್ಷ ಕೇವಲ ನಗರ, ಮುಂದುವರೆದ ಜನಾಂಗಕ್ಕೆ ಸೀಮಿತವಾಗಿತ್ತು. ಯಡಿಯೂರಪ್ಪನವರು ರಾಜ್ಯದ ಉದ್ದಗಲಕ್ಕೂ ಓಡಾಡಿ, ಹೋರಾಟ ಮಾಡಿ, ಪಾದಯಾತ್ರೆ ಮೂಲಕ ಪಕ್ಷವನ್ನು ಹಳ್ಳಿ ಮಟ್ಟಕ್ಕೂ ತೆಗೆದುಕೊಂಡು ಹೋಗಿ ತಳಮಟ್ಟದಿಂದ ಸಂಘಟಿಸಿದರು. ಹಾಗಾಗಿ ಪಕ್ಷ ಇಂದು ರಾಜ್ಯದಲ್ಲಿ ಸದೃಢವಾಗಿದೆ ಎಂದರು.

ಯಡಿಯೂರಪ್ಪನವರು ಎಂದೂ ಶಾಸಕ, ಮಂತ್ರಿ, ಮುಖ್ಯಮಂತ್ರಿಯಾಗುತ್ತೇನೆ ಎಂದು ಹೋರಾಡಿದವರಲ್ಲ. ತಮ್ಮ ಜೀವನದುದ್ದಕ್ಕೂ ಪಕ್ಷದ ಬಲವರ್ಧನೆಗಾಗಿ ಜೀವದ ಹಂಗನ್ನು ತೊರೆದು ಬಡವರ, ರೈತರ ಪರ ದನಿ ಎತ್ತಿದ್ದರಿಂದಲೇ ದಕ್ಷಿಣ ಭಾರತದಲ್ಲಿ ಬಿಜೆಪಿ ಪಕ್ಷಕ್ಕೆ ಕರ್ನಾಟಕದ ಹೆಬ್ಬಾಗಿಲಿನಂತಾಗಿದೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ವೇಳೆ ಸಂಕಷ್ಟಕ್ಕೆ ಹೆದರಿ ಕೈಕಟ್ಟಿ ಕೂರಲಿಲ್ಲ. ಆತ್ಮವಿಶ್ವಾಸ ಕಳೆದುಕೊಳ್ಳದೇ ಕಾರ್ಯಕರ್ತರ ಮೇಲೆ ವಿಶ್ವಾಸ ಇಟ್ಟು ಪ್ರಾಮಾಣಿಕವಾಗಿ ಹೋರಾಟದ ಮೂಲಕ ನಾಡಿನ ಜನತೆಯ ಕಣ್ಣೀರು ಒರೆಸುವ ಕೆಲಸ ಮಾಡಿದರು ಎಂದರು.

ಕಾಂಗ್ರೆಸ್ ಚಿಂತೆ ಬೇಡ: ನಾವು ಕಾಂಗ್ರೆಸ್ ಬಗ್ಗೆ ತಲೆ ಕೆಡಿಸಿಕೊಳ್ಳುವ ಅವಶ್ಯಕತೆ ಇಲ್ಲ. ದೇಶದಾದ್ಯಂತ ಕಾಂಗ್ರೆಸ್ ಬಗ್ಗೆ ವಿರೋಧಿ ಅಲೆ ಸೃಷ್ಟಿಯಾಗಿದೆ. ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಬಂದ ನಂತರ 300ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಆದರೆ ಇಂದು ಅದರ ಪರಿಸ್ಥಿತಿ ಏನಾಗಿದೆ. ಕೇವಲ 55 ಸ್ಥಾನಗಳಿಗೆ ಇಳಿಕೆ ಕಂಡಿದೆ. ಅಲ್ಲದೇ ಇಂದು ಒಂದು ಪಾರ್ಲಿಮೆಂಟಿನ ಸ್ಥಾನ ಅನರ್ಹಗೊಂಡಿದೆ. ರಾಹುಲ್ ಗಾಂಧಿ ಎಲುಬಿಲ್ಲದ ನಾಲಿಗೆಯಿಂದ ಸಂಸದ ಸ್ಥಾನದಿಂದ ಅನರ್ಹರಾಗಿದ್ದಾರೆ. ರಾಹುಲ್ ಕಾರ್ಯಕ್ರಮವೊಂದರಲ್ಲಿ ಮಾತನಾಡುವ ಭರದಲ್ಲಿ ದೇಶದ ಕೋಟ್ಯಾಧಿಪತಿಗಳ ಹೆಸರು ಪ್ರಸ್ತಾಪಿಸಿ ಲಲಿತ್ ಮೋದಿ ಹಾಗೂ ನೀರವ್ ಮೋದಿಯಂತೆ ಪ್ರಧಾನಿ ಮೋದಿ ಅವರನ್ನು ಲೂಟಿಕೋರ ಎಂದಿದ್ದಾರೆ. ಭ್ರಷ್ಟಾಚಾರ ಮತ್ತು ಲೂಟಿ ಬಗ್ಗೆ ಮಾತನಾಡಲು ಕಾಂಗ್ರೆಸ್‌ನವರಿಗೆ ನಾಚಿಕೆಯಾಗಬೇಕು. ಸ್ವಾತಂತ್ರ್ಯ ಬಂದ 60 ವರ್ಷಗಳ ಕಾಲ ಸುದೀರ್ಘ ಆಡಳಿತ ನಡೆಸಿ ಭ್ರಷ್ಟಾಚಾರ ಮಾಡಿರುವ ಕಾಂಗ್ರೆಸ್ ಪಕ್ಷದವರಿಗೆ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಯಾವುದೇ ನೈತಿಕತೆ, ಯೋಗ್ಯತೆ ಇಲ್ಲ ಎಂದು ಕಿಡಿಕಾರಿದರು.

ಇದೇ ವೇಳೆ ಎಸ್‌ಎಂಆರ್ ಪ್ರಕಾಶ್, ಸುಂದರೇಶನ್ ಪುತ್ರಿ ಗಗನ ಸುಂದರೇಶನ್, ವಿಜಯೇಂದ್ರ ಸಮ್ಮುಖದಲ್ಲಿ ಬಿಜೆಪಿಗೆ ಸೇರ್ಪಡೆಗೊಂಡರು. ಕಾರ್ಯಕ್ರಮಕ್ಕೆ ಮೊದಲು ಹೆಳವರಹುಂಡಿಗೆ ಆಮಿಸಿದ ವಿಜಯೇಂದ್ರ ಅವರಿಗೆ ಕಾರ್ಯಕರ್ತರು ಭರ್ಜರಿ ಸ್ವಾಗತ ನೀಡಿ ಬರಮಾಡಿಕೊಂಡರು. ವರುಣಾ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿ ಸದಾನಂದ ವಿಜಯೇಂದ್ರರನ್ನು ಸ್ವಾಗತಿಸಿದರು. ಕ್ರೇನ್ ಮೂಲಕ ಭಾರೀ ಗಾತ್ರದ ಹಾರ ಹಾಕಿ ಪಟಾಕಿ ಸಿಡಿಸಿ ಸ್ವಾಗತ ಕೋರಲಾಯಿತು.

ಈ ವೇಳೆ ಶಾಸಕರಾದ ಎನ್.ಮಹೇಶ್, ನಿರಂಜನ್ ಕುಮಾರ್, ಮಾಜಿ ಶಾಸಕರಾದ ಭಾರತೀಶಂಕರ್, ಸಿ.ರಮೇಶ್, ರಾಜ್ಯ ಯುವ ಮೋರ್ಚಾ ಅಧ್ಯಕ್ಷ ಸಂದೀಪ್, ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್, ಅರಗು ಮತ್ತು ಬಣ್ಣ ಕಾರ್ಖಾನೆ ಅಧ್ಯಕ್ಷ ರಘು ಕೌಟಿಲ್ಯ, ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಸಾಮ್ರಾಟ್ ಸುಂದರೇಶನ್, ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಎಂಸಿಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಬಿ.ಎನ್.ಸದಾನಂದ, ತೋಟದಪ್ಪ ಬಸವರಾಜು, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂಜಯ್ ಶರ್ಮಾ, ತಾಲೂಕು ಅಧ್ಯಕ್ಷ ಕುರುಬೂರು ಶಿವು, ವಿಜಯೇಂದ್ರ ಅಭಿಮಾನಿ ಬಳಗದ ಅಧ್ಯಕ್ಷ ಮಹೇಶ್, ಗೌರವಾಧ್ಯಕ್ಷ ಯೋಗೇಶ್, ಜಿಲ್ಲಾ ಕಾರ್ಯಕಾರಿ ಸಮಿತಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಯುವ ಮೋರ್ಚಾ ಉಪಾಧ್ಯಕ್ಷ ಸಿದ್ದು, ಎಸ್‌ಸಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಸಿದ್ದರಾಜು, ಯೋಗೇಶ್, ಉಪಾಧ್ಯಕ್ಷ ರಾಜೇಂದ್ರ, ಮೃಗಾಲಯ ಪ್ರಾಧಿಕಾರದ ಮಾಜಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮೈಮುಲ್ ನಿರ್ದೇಶಕ ಅಶೋಕ್, ಪುರಸಭಾ ಸದಸ್ಯ ಎಸ್.ಕೆ.ಕಿರಣ್, ಜಿಲ್ಲಾ ಕಾರ್ಯದರ್ಶಿ ಶ್ರೀ ರಂಗು ನಾಯಕ್, ವೆಂಕಟರಮಣ ಶೆಟ್ಟಿ, ಪಿಎಸಿಸಿ ಬ್ಯಾಂಕ್ ಅಧ್ಯಕ್ಷ ವೀರಭದ್ರಪ್ಪ, ಸೋಸ್ಲೆ ಶಕ್ತಿ ಕೇಂದ್ರದ ಅಧ್ಯಕ್ಷ ಪುಟ್ಟಸ್ವಾಮಿ, ವಿಜಿ. ಅಡಿಗೆ ಪ್ರಭುಸ್ವಾಮಿ, ನಂದ, ಆಟೋ ಮೂರ್ತಿ, ಗೌಡ್ರು ಕುಮಾರ್, ಗ್ಯಾಸ್ ನಂದೀಶ್, ದಿಲೀಪ್, ದೀಪು ಇತರರಿದ್ದರು.

> ### ಸಿದ್ದರಾಮಯ್ಯ ಸೋಲಿಸಲು ಖೆಡ್ಡಾ ತೋಡಿರುವ ಕಾಂಗ್ರೆಸ್
>
> ರಾಜ್ಯದಲ್ಲಿ ಬಿಜೆಪಿ ಮತ್ತೊಮ್ಮೆ ಅಧಿಕಾರ ಹಿಡಿಯುವುದು ಖಚಿತ. ಕಾಂಗ್ರೆಸ್ ವಿಪಕ್ಷದಲ್ಲಿ ಕೂರುವುದು ಪಕ್ಕಾ. ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರಲ್ಲ ಎಂದ ವಿಜಯೇಂದ್ರ, ಕಾಂಗ್ರೆಸ್‌ನವರಿಗೆ ಒಂದು ಹಠ ಇದೆ. ನಾವು ಅಧಿಕಾರಕ್ಕೆ ಬರದಿದ್ದರೂ, ಪರವಾಗಿಲ್ಲ ಹೇಗಾದರೂ ಮಾಡಿ ಸಿದ್ದರಾಮಯ್ಯರನ್ನು ಮನೆಯಲ್ಲಿ ಕೂರಿಸಬೇಕೆಂದು ತೀರ್ಮಾನಿದ್ದಾರೆ. ಈ ಮಾತನ್ನು ನಾನು ಹೇಳುತ್ತಿಲ್ಲ. ಕಾಂಗ್ರೆಸ್ಸಿಗರೇ ಹೇಳುತ್ತಿದ್ದಾರೆ. ಸಿದ್ದರಾಮಯ್ಯರನ್ನು ಸೋಲಿಸುವ ಕೆಲಸವನ್ನು ನಾವು ನೀವು ಮಾಡುವ ಮೊದಲೇ ಅವರೇ ಮಾಡುತ್ತಾರೆ. ಕಾಂಗ್ರೆಸ್ ಪಕ್ಷದವರ ಒಳಜಗಳದಿಂದ ಅವರ ಪಕ್ಷದವರೇ ತೋಡಿದ ಖೆಡ್ಡಾದಲ್ಲಿ ಅವರೇ ಬಿದ್ದು ಮಣ್ಣುಪಾಲಾಗಲಿದ್ದಾರೆ. ದೈವೇಚ್ಛೆ ಏನಿದೆಯೋ ಗೊತ್ತಿಲ್ಲ. ಆದರೆ ಕಾಂಗ್ರೆಸ್ ಮುಖಂಡರು ತಮ್ಮ ಪಕ್ಷದಲ್ಲೇ ಯಾರ್ಯಾರನ್ನು ಎಲ್ಲಿ ಸೋಲಿಸಬೇಕು. ಯಾರ್ಯಾರನ್ನು ಮನೆಯಲ್ಲಿ ಕೂರಿಸಬೇಕೆಂಬ ಷಡ್ಯಂತ್ರ ನಡೆಯುತ್ತಿದ್ದು, ಆ ಪಕ್ಷ ಸೋಲಿಸಲು ಯಾರು ಬೇಕಿಲ್ಲ ಅವರೇ ಸಾಕು ಎಂದು ವಿಜಯೇಂದ್ರ ತಿಳಿಸಿದರು.

ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ (ನೋಂ)

ಸನ್ಮಾರ್ಗ, 2ನೇ ಹಂತ, ಸಿದ್ಧಾರ್ಥನಗರ, ಮೈಸೂರು – 570 011

2023ನೇ ಸಾಲಿನ ಆಡಳಿತ ಮಂಡಳಿಯ ಚುನಾವಣೆ

ಮಾನ್ಯ ಕ್ಲಬ್ಬಿನ ಸದಸ್ಯರೇ,

ದಿನಾಂಕ 26–03–2023ನೇ ಭಾನುವಾರ ನಡೆಯಲಿರುವ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಈ ಕೆಳಕಂಡ ನಾವುಗಳು ಸ್ಪರ್ಧಿಸಿರುತ್ತೇವೆ. ಈ ತಂಡಕ್ಕೆ ತಮ್ಮ ಅತ್ಯಮೂಲ್ಯವಾದ ಮತ ಚಲಾಯಿಸುವುದರ ಮೂಲಕ ನಮ್ಮನ್ನು ಜಯಶೀಲರನ್ನಾಗಿ ಮಾಡಿ ತಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಆಡಳಿತ ಮಂಡಳಿ ಪದಾಧಿಕಾರಿಗಳ ಉಮೇದುವಾರರು

ಕ್ರ.ಸಂ.	ಅಭ್ಯರ್ಥಿಯ ಹೆಸರು	ಚಿಹ್ನೆ
	ಸಿ.ವೆಂಕಟಪ್ಪ ಅಧ್ಯಕ್ಷರ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ	
2	ಹೆಚ್.ಎಸ್. ಪುಟ್ಟಸ್ವಾಮಿ ಉಪಾಧ್ಯಕ್ಷರ ಸ್ಥಾನಕ್ಕೆ	
5	ಎಂ. ಸುರೇಶ್‌ಗೌಡ ಗೌರವ ಕಾರ್ಯದರ್ಶಿ	
7	ಡಾ|| ಎ.ಎಸ್. ರಾಜೇಗೌಡ ಜಂಟಿ ಕಾರ್ಯದರ್ಶಿ	
8	ಎಸ್. ನಾಗರಾಜು (ಬುಲೆಟ್) ಖಜಾಂಚಿ	

ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ಉಮದೇವಾರರು

ಕ್ರ.ಸಂ.	ಅಭ್ಯರ್ಥಿಯ ಹೆಸರು	ಚಿಹ್ನೆ
1	ಈರಣ್ಣ ಆರ್	
3	ಕೆಂಪೇಗೌಡ	
5	ಟಿ.ಎಲ್. ಗುರುಲಿಂಗೇಗೌಡ	
6	ಎಂ.ಆರ್. ನಾಗರಾಜು	
7	ಎಸ್. ನಾಗರಾಜು (ಸಕ್ಕರೆ)	
8	ಎಸ್.ಜೆ. ನಾಗರಾಜು (ಲಾವಣ್ಯ)	
9	ಟಿ.ಸಿ.ನಾಗರಾಜು	
10	ಡಾ||. ಪ್ರಕಾಶ್	

ಸಮಯ : ಬೆಳಗ್ಗೆ 8–00 ರಿಂದ ಮಧ್ಯಾಹ್ನ 12–00 ಗಂಟೆಯವರೆಗೆ

ಸ್ಥಳ : ಸಿದ್ಧಾರ್ಥ ಸ್ಪೋರ್ಟ್ಸ್ ಕ್ಲಬ್ ಆವರಣ ಮೈಸೂರು

ವಿಶೇಷ ಸೂಚನೆ : ಸದಸ್ಯರು ಮತದಾನಕ್ಕೆ ತಮ್ಮ ಗುರುತಿನ ಚೀಟಿಯನ್ನು ತಪ್ಪದೇ ತರಬೇಕಾಗಿ ವಿನಂತಿ